ವಿವೇಕಪ್ರಭ

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

₹ 14

ಮೇ 2018

PACKAGE TOURS 2018

Hotel Room Accom. & South Indian Veg. Food

Charodham Yatra : 15/19 Days
June 06 Sep 19 Oct 04, 20

Haridwar, Yamunotri, Gangotri, Uttarkashi, Kedarnath, Triyugi (Optional), Mana, Vyasa Guha, Ganesh Guha, Keshava Prayag, Badrinath, Rishikesh, New Delhi

Amarnath Yatra : 15/19 Days
June 25

Attari Border [Indo-Pak Border], Amritsar, Vaishnavi Devi, Srinagar, Gulmarg, Baltal, Amarnath, Kheerbhavani, Kurukshetra, New Delhi

Rajasthan Special : 12/16 DAYS
Oct 27

Jaipur, Pushkar, Ajmer, Chittaurgarh, Udaipur, Eklingji, Mt. Abu, Jodhpur, Bikaner, Jaisalmer

Nepal : 07 DAYS
Sep 06, 22

Kathmandu, Manokamana, Pokhara, Jomsom, Mukthinath, Bakthapur

Kolkata Darjeeling : 16 Days
Nov 11

Bhubaneshwar, Puri, Konark, Chilka Lake, Kolkata, Siliguri, Gangtok, Chengu Lake, Harbhajan Singh Mandir, Darjeeling, Tiger Hills

Shaktipeetha Manali Special : 18 Days
Sep 22

Wagah Border [Indo-Pak Border], Amritsar, Vaishnavi Devi, Chamunda, Kangra, Chintapurni, Jwalamukhi, Baijnath, Kullu-Manali, Vasista, Rohtang Pass [Optional], Naina Devi, Kufri, Shimla, Chandigarh, Kurukshetra, New Delhi

Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70
: hansaatravels@gmail.com : hansaatravels.com
080-26643276 / 26543891 / 9341215612 / 9341415612

ವಿವೇಕಪ್ರಭ

ಮೇ-2018 ಸಂಪುಟ 19 ಸಂಚಿಕೆ 05

ಪ್ರಾರ್ಥನೆ	: ಶ್ರೀ ರಾಮಮಾನಸ ಸ್ತೋತ್ರಮ್ - ೩		4
ಸಂಪಾದಕೀಯ	: ಜೀವನದ ಲಯ		7
ವಚನವೇದದಿಂದ	: ಪ್ರಾಯೋಗಿಕ ಧರ್ಮ		10
ಪುಸ್ತಕ ಪರಿಚಯ	: ಶ್ರೀ ತುಳಸೀ ಅಮೃತಪಾನ - ಒಂಬತ್ತು ಕಥೆಗಳು		30
ಸಂತರ ಜೀವನ	: ಶ್ರೀ ಮಧ್ವಾಚಾರ್ಯರು - ೪	*ಸ್ವಾಮಿ ತಪಸ್ಯಾನಂದ*	35
ಚಿತ್ರಕಥೆ	: ಭಕ್ತ ಕನಕದಾಸರು - ೧		38
ಸುದ್ದಿ ಸಂಚಯ	: ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು		42

ವಿಶೇಷ ಲೇಖನ

ನೋವಿನಿಂದ ಬಿಡುಗಡೆ	*ಸ್ವಾಮಿ ನಿತ್ಯಸ್ಥಾನಂದ*	11
ಮಾನವನ ಬದುಕಿನಲ್ಲಿ ಭಗವದ್ಗೀತೆಯ ಪ್ರಭಾವ	*ಸಿ.ಎಸ್. ಮಂಗಳಮ್ಮ*	22
ಸೋಫಿಯಾ ಬೀಬಿ, 'ಅಮ್ಮಾಜಾನ್'	*ಅನು: ಸ್ವರ್ಣಗೌರಿ*	29

ಧಾರಾವಾಹಿ

ಶ್ರೀಮಾತೆ - ಭಾಗ ೧೬	*ಆಶುತೋಷ್ ಮಿತ್ರ*	16
ಸೋದರಿ ನಿವೇದಿತಾ (ನಾಟಕ - ಭಾಗ ೩)	*ಪಾಂಡುರಂಗ ಜೋಯಿಸ್, ಸರಗೂರು ರಮೇಶ್*	20
ಕಳೆದ ದಿನಗಳ ನೆನಪುಗಳು - ೧೭	*ಸ್ವಾಮಿ ಶ್ರದ್ಧಾನಂದ*	25
ಶ್ರೀಮಾತೆಯವರ ಪತ್ರಗಳು - ೯	*ಪ್ರವ್ರಾಜಿಕಾ ಧರ್ಮಪ್ರಾಣಾ*	32

ವ್ಯವಸ್ಥಾಪಕ ಸಂಪಾದಕರು: *ಸ್ವಾಮಿ ಆತ್ಮಜ್ಞಾನಂದ* ಸಂಪಾದಕರು: *ಸ್ವಾಮಿ ಜ್ಞಾನಯೋಗಾನಂದ*

ನೆರವು: *ಆರ್. ಎಸ್. ಪೂರ್ಣಾನಂದ, ಡಾ. ಕೆ. ಎಲ್. ಪ್ರಸನ್ನಾಕ್ಷೀ, ಡಾ. ಎಚ್. ಪಾಂಡುರಂಗ ವಿಠಲ*

ಅಕ್ಷರ ಜೋಡಣೆ: *ಶ್ರೀರಾಮಕೃಷ್ಣ ಆಶ್ರಮ, ಮೈಸೂರು* ಮುದ್ರಣ: *ಮಯೂರ್ ಗ್ರಾಫಿಕ್ಸ್, ಬೆಂಗಳೂರು*

ಮುಖಪುಟ

'ಅಶೋಕ' ಹೂವು

ಚಂದಾ ವಿವರ

ಬಿಡಿ ಪ್ರತಿ : ₹14 ವಾರ್ಷಿಕ : ₹ 140 ಮೂರು ವರ್ಷ : ₹ 375
ಆಜೀವ (25 ವರ್ಷ) : ₹3,000 ಪೋಷಕರು : ₹5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್) ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ) : $ 300 ಪೋಷಕರು : $ 600 ಅಥವಾ ಹೆಚ್ಚು.

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

E-mail: mysuru.vivekaprabha@rkmm.org Website: www.vivekaprabha.net ಫೋನ್ : 9481533505

ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳಲ್ಲಿನ ಅಭಿಪ್ರಾಯಗಳು ಲೇಖಕರವು. ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಜಾಹೀರಾತುಗಳಲ್ಲಿನ ಮಾಹಿತಿಗಳ ನಿಖರತೆಗೆ ಈ ಪತ್ರಿಕೆ ಜವಾಬ್ದಾರಿಯಲ್ಲ. ಈ ಪತ್ರಿಕೆಯಲ್ಲಿನ ಯಾವ ಭಾಗವನ್ನೂ ಪ್ರಕಾಶಕರ ಲಿಖಿತ ಅನುಮತಿ ಇಲ್ಲದೆ ಬೇರೆಡೆ ಪ್ರಕಟಿಸುವಂತಿಲ್ಲ.

ಶ್ರೀ ರಾಮಮಾನಸ ಸ್ತೋತ್ರಮ್ – ೩

ಜಯ ಜಯತಿ ವಿಷ್ಣೋ ರಾಮನಾಮಾಭಿಧೇಯೋ ।
ಜಯತು ಜಯತಿ ಪೂರ್ಣಃ ಕೋಟಿ ಕಂದರ್ಪಭಾಸಃ ॥
ಜಯತಿ ಜಯತಿ ವಾದ್ಯೈರ್ನಾಟಕೈರ್ಗೀತ ನೃತ್ಯೈ ।
ಜಯ ಜಯ ತಿಮಿರಾರೇ ಗೃಹ್ಣ ನೀರಾಜನಂ ತ್ವಮ್ ॥೮॥

ಶ್ರೀರಾಮನೆಂಬ ಹೆಸರಿನ ಶ್ರೀವಿಷ್ಣುವಿಗೆ ಜಯವಾಗಲಿ. ಕೋಟಿ ಮದನರ ತೇಜವುಳ್ಳವನೆ, ಪೂರ್ಣನೆ, ನಿನಗೆ ಜಯವಾಗಲಿ. ವಿವಿಧ ವಾದ್ಯಗಳು, ನಾಟಕ, ಸಂಗೀತಗಳಿಂದ ನಿನ್ನ ಸೇವೆ ಮಾಡುತ್ತಿರುವೆನು. ನಿನಗೆ ಜಯವಾಗಲಿ. ಅಂಧಕಾರವನ್ನು (ಅಜ್ಞಾನದ ಕತ್ತಲೆ) ನಿವಾರಿಸುವವನೇ, ನೀರಾಜನವನ್ನು ಸ್ವೀಕರಿಸು. ನಿನಗೆ ಜಯ, ಜಯಕಾರವಾಗಲಿ. ॥ ೮ ॥

ಸಾಮ್ರಾಜ್ಯ ಭೋಜ್ಯಾದಿ – ಸುಪಾರಮೇಷ್ಠ್ಯಂ ।
ತಮತ್ರ ಯಚ್ಚಾಖಿಲ ವಸ್ತು ಜಾತಮ್ ॥
ಏಕಾಕ್ಷರಂ ಬ್ರಹ್ಮಮಯಂ ಪ್ರಸಿದ್ಧ –
ಮೇವಾರ್ಪಯಾಮೀತಿ ಸುಮಂತ್ರ ಪುಷ್ಪಮ್ ॥ ೯ ॥

ಸಾಮ್ರಾಜ್ಯ, ಭೋಜ್ಯಾದಿಗಳಿಂದ ಪಾರಮೇಷ್ಠ್ಯದವರೆಗೆ ನಿರ್ಮಿತವಾದ ವಸ್ತುಗಳೆಲ್ಲ ಓಂ ಪದವಾಚ್ಯವಾದ ಪರಬ್ರಹ್ಮಸ್ವರೂಪವಿದ್ದು, ಅವೆಲ್ಲವನ್ನೂ ಉತ್ಕೃಷ್ಟವಾದ ಮಂತ್ರ ಪುಷ್ಪಾಂಜಲಿ ಎಂದು ಅರ್ಪಿಸುತ್ತಿರುವೆನು. ॥ ೯ ॥

ಜಯ ಜಯ ಕರುಣಾಬ್ಧೇಽನಂತ ಭಾನುಪ್ರಕಾಶ ।
ಜಯ ಜಯ ಜಗದೀಶಾವ್ಯಕ್ತ ಮಾಯಾಧಿದೇವ ॥
ಜಯ ಜಯ ಧರಣೀಜಾವಲ್ಲಭಾನಂತವೀರ್ಯ ।
ಜಯ ಜಯ ರಘುನಾಥಾನಾಥನಾಥ ಪ್ರಸೀದ ॥ ೧೦ ॥

ಕರುಣಾಸಾಗರ, ಅನಂತ ಸೂರ್ಯಪ್ರಕಾಶ, ನಿನಗೆ ಜಯವಾಗಲಿ. ಜಗದೀಶ, ಅವ್ಯಕ್ತ, ಮಾಯಾಧಿಪನೆ, ನಿನಗೆ ಜಯವಾಗಲಿ. ಭೂಮಾತೆಯ ಕನ್ಯೆ ಸೀತಾದೇವಿಯ ಪತಿಯೆ, ಅತುಲ ಪರಾಕ್ರಮಿಯೆ, ನಿನಗೆ ಜಯವಾಗಲಿ, ಅನಾಥನಾಥ ರಘುನಾಥ, ಪ್ರಸನ್ನನಾಗು, ನಿನಗೆ ಜಯವಾಗಲಿ. ॥ ೧೦ ॥

ಯಜ್ಞೇಶ ಯಜ್ಞಾಧಿಪ ಯಜ್ಞಪಾಲ ।
ಯಶಃಪ್ರದಾಧೋಕ್ಷಜ ರಾಮಚಂದ್ರ ॥
ಪ್ರದಕ್ಷಿಣಾಂ ತೇ ಪ್ರಕರೋಮಿ ನಿತ್ಯಂ ।
ಪದೇ ಪದೇಽನಂತಮಖಾದಿದಾತ್ರಿಮ್ ॥ ೧೧ ॥

ಯಜ್ಞೇಶ, ಯಜ್ಞಾಧಿಪ, ಯಜ್ಞರಕ್ಷಕ, ಅಧೋಕ್ಷಜ, ರಾಮಚಂದ್ರ, ಯಶಸ್ಸು ನೀಡುವವನೆ — ನಿತ್ಯವೂ ನಿನಗೆ ಪ್ರದಕ್ಷಿಣೆ ಹಾಕುವೆನು. ನಿನ್ನ ಪ್ರದಕ್ಷಿಣೆಯು ಹೆಜ್ಜೆಹೆಜ್ಜೆಗೂ ಯಜ್ಞಾದಿಗಳ ಫಲವನ್ನು ಕೊಡುತ್ತದೆ. ॥ ೧೧ ॥

— ಶ್ರೀ ಶಂಕರಾಚಾರ್ಯ

ಸೂಕ್ತಿಪ್ರಭ

ವಾಲ್ಮೀಕಿ ರಾಮಾಯಣದ ಸೂಕ್ತಿಗಳು

ಉತ್ಸಾಹಗೆಡಬಾರದು. ಉತ್ಸಾಹವೇ ಸಕಲ ಸಂಪತ್ತಿಗೂ ಕಾರಣ. ಉತ್ಸಾಹದಿಂದಲೇ ಸುಖ. ಯಾವಾಗಲೂ ಉತ್ಸಾಹವೇ ಸರ್ವಕಾರ್ಯಗಳಿಗೂ ಆದಿ. ಯಾವ ಕಾರ್ಯವಿದ್ದರೂ ಉತ್ಸಾಹ ಇದ್ದರೆ ಮಾತ್ರವೇ ಸಫಲವಾಗುವುದು. *(೫.೨.೧೦-೧೧)*

ಧರ್ಮದಿಂದಲೇ ಅರ್ಥ. ಧರ್ಮದಿಂದಲೇ ಸುಖ. ಸಕಲ ಅಭೀಷ್ಟವೂ ಧರ್ಮದಿಂದ ಕೈಗೂಡುತ್ತದೆ. ಈ ಜಗತ್ತು ಧರ್ಮದ ತಳಹದಿಯ ಮೇಲೆ ನಿಂತಿದೆ. ಶ್ರಮಪಡದೆ ಸುಖದಿಂದ ಸುಖ ದೊರೆಯದು. *(೩.೯.೩೦-೩೧)*

ಕೈಲಾಗದ ಹೇಡಿಯು ವಿಧಿಯನ್ನು ನಂಬುತ್ತಾನೆ. ವೀರರು, ಧೀರರು ವಿಧಿಯನ್ನು ಲೆಕ್ಕಿಸುವುದಿಲ್ಲ. ಯಾವ ಪುರುಷನು ತನ್ನ ಪೌರುಷದಿಂದ ವಿಧಿಯನ್ನು ತುಳಿಯಬಲ್ಲನೋ, ಅವನು ಎಂದಿಗೂ ಕಷ್ಟಕ್ಕೆ ಸಿಲುಕುವುದಿಲ್ಲ. *(೨.೨೩.೧೭)*

ಮುಂದೆ ಅನರ್ಥವು ಸಂಭವಿಸೀತೆಂಬ ಶಂಕೆಯಿದ್ದಾಗ ದೂರದರ್ಶಿಯಾದ ಮನುಷ್ಯನು ಮೊದಲೇ ಅದಕ್ಕೆ ಪರಿಹಾರವನ್ನು ಚಿಂತಿಸಬೇಕು. ಶುಭವನ್ನು ಬಯಸತಕ್ಕವನು ಆಪತ್ತಿಗೆ ಪರಿಹಾರವನ್ನು ನೋಡಿಕೊಳ್ಳಬೇಕು. *(೩.೨೪.೧೧)*

ಪ್ರಿಯವಾದ ಮಾತನ್ನು ಆಡತಕ್ಕವರು ಯಾವಾಗಲೂ ಸುಲಭವಾಗಿ ದೊರೆಯುತ್ತಾರೆ. ಆದರೆ ಅಪ್ರಿಯವಾದರೂ ಹಿತಕರವಾದ ಮಾತನ್ನು ಆಡತಕ್ಕವರು ದುರ್ಲಭ. ಆ ಮಾತನ್ನು ಕೇಳತಕ್ಕವರೂ ದುರ್ಲಭ. *(೩.೩೭.೨)*

ಸ್ಥಾಪನೆ 1943

ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರ

(ರಾಮಕೃಷ್ಣ ಮಠ, ಬಸವನಗುಡಿ, ಬೆಂಗಳೂರು ಇದರ ಒಂದು ಅಂಗಸಂಸ್ಥೆ)

ಕಾಲೇಜು ವ್ಯಾಸಂಗ ಮಾಡುತ್ತಿರುವ ಗಂಡುಮಕ್ಕಳ ವಿದ್ಯಾರ್ಥಿನಿಲಯ

ಬೆಂಗಳೂರಿನ ರಾಮಕೃಷ್ಣ ಮಠದ ಒಂದು ಅಂಗಸಂಸ್ಥೆ, '**ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಮ್**'. ಬೆಂಗಳೂರು ನಗರದ ಜನನಿಬಿಡ ಪ್ರದೇಶದಲ್ಲಿದ್ದರೂ ಅತ್ಯಂತ ಪ್ರಶಾಂತ ವಾತಾವರಣದಲ್ಲಿರುವ ಈ ಸಂಸ್ಥೆಯು ಕಾಲೇಜು ವಿದ್ಯಾರ್ಥಿಗಳಿಗಾಗಿ ನಿರ್ಮಾಣಗೊಂಡಿರುವ ಬಾಲಕರ ವಿದ್ಯಾರ್ಥಿ ನಿಲಯ. ಇದು ಕಳೆದ 75 ವರ್ಷಗಳಿಂದ ವಿದ್ಯಾರ್ಥಿಗಳ ಸೇವೆಯನ್ನು ಮಾಡುತ್ತಾ, ಉತ್ತಮ ವ್ಯಕ್ತಿಗಳನ್ನು ಸಮಾಜಕ್ಕೆ ನೀಡುತ್ತಾ ಬಂದಿದೆ. ಒಬ್ಬ ಹರಿಜನ ವಿದ್ಯಾರ್ಥಿಯಿಂದ ಪ್ರಾರಂಭವಾದ ಈ ಸಂಸ್ಥೆ ಪರಮಪೂಜ್ಯ ಸ್ವಾಮಿ ತ್ಯಾಗೀಶಾನಂದಜೀ ಮಹರಾಜ್ ಅವರ ಮಾರ್ಗದರ್ಶನದಲ್ಲಿ 1943ರಲ್ಲಿ ಸ್ಥಾಪಿಸಲ್ಪಟ್ಟಿತು. 1950ರ ಸುಮಾರಿಗೆ ಪೂಜ್ಯ ಸ್ವಾಮಿ ಯತೀಶ್ವರಾನಂದಜೀಯವರು ಈಗಿನ ಕಟ್ಟಡ ನಿರ್ಮಾಣ ಮಾಡಿ ಈ ಸಂಸ್ಥೆಯನ್ನು ಹರಸಿದರು. ಹೀಗೆ ಪ್ರಾರಂಭವಾದ ಈ ಸಂಸ್ಥೆ ಬೆಳೆಯುತ್ತಾ ಬೆಳೆಯುತ್ತಾ ಈಗ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳಲು ಸಿದ್ಧವಾಗಿ ನಿಂತಿದೆ.

SSLC ಪರೀಕ್ಷೆ ಫಲಿತಾಂಶ ಬಂದಕೂಡಲೇ ಪ್ರವೇಶ ಪತ್ರವನ್ನು ನೀಡಲಾಗುತ್ತದೆ. ಪ್ರಥಮ ಪಿ.ಯು.ಸಿ., ದ್ವಿತೀಯ ಪಿ.ಯು.ಸಿ., ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳೂ ಸಹ ಈ **ವಿದ್ಯಾರ್ಥಿ ಮಂದಿರಮ್**ನಲ್ಲಿ ಪ್ರವೇಶ ಪಡೆಯಬಹುದು. ಬೆಂಗಳೂರಿನ ಹೊರವಲಯದ, ದೂರದ ಊರುಗಳಿಂದ ವಿದ್ಯಾಭ್ಯಾಸಕ್ಕಾಗಿ ಬರುವ ಪ್ರಾಮಾಣಿಕ ವಿದ್ಯಾರ್ಥಿಗಳಿಗೆ ಇಲ್ಲಿ ಅವಕಾಶ. ಸಾಮಾನ್ಯವಾಗಿ ಇಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳ ಕಾಲೇಜುಗಳು ಹಾಸ್ಟಲ್‌ನಿಂದ ಸುಮಾರು 10 ಕಿ.ಮೀ. ಪರಿಧಿಯೊಳಗಿರಬೇಕು, ಆ ಕಾಲೇಜ್‌ನಲ್ಲಿ ಪ್ರವೇಶ ಪಡೆದಿರಬೇಕು. ಅಂತಹ ವಿದ್ಯಾರ್ಥಿಗಳಿಗೆ ಊಟ, ವಸತಿಯ ವ್ಯವಸ್ಥೆ ಮಂದಿರಮ್‌ನಲ್ಲಿರುತ್ತದೆ.

ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣವೆಂದರೆ ''Man making - Character building'', ''ಮನುಷ್ಯ ನಿರ್ಮಾಣ – ಶೀಲ ನಿರ್ಮಾಣ'' – ಇದನ್ನು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಮಂದಿರಮ್‌ನ ದಿನಚರಿ ರೂಪಿಸಲಾಗಿದೆ. ತಮ್ಮ ಚಾರಿತ್ರ್ಯವನ್ನು ಶುದ್ಧವಾಗಿಟ್ಟುಕೊಂಡು, ಉತ್ತಮ ವಿದ್ಯಾಭ್ಯಾಸವನ್ನು ನಡೆಸಲು ಇಚ್ಛೆ ಉಳ್ಳ ವಿದ್ಯಾರ್ಥಿಗಳು ವಿದ್ಯಾರ್ಥಿ ಮಂದಿರಮ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದು.

ಪ್ರವೇಶ ಪ್ರಕ್ರಿಯೆ : ಮೌಖಿಕ ಪರೀಕ್ಷೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಸಂಕ್ಷಿಪ್ತ ಜೀವನಚರಿತ್ರೆ ಮತ್ತು ಸಂದೇಶಗಳ ಮೇಲೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ತೃಪ್ತಿಕರವಾದ ಉತ್ತರಗಳನ್ನು ನೀಡಿದಂತಹ ವಿದ್ಯಾರ್ಥಿಗಳಿಗೆ ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಮ್‌ನಲ್ಲಿ ಪ್ರವೇಶ ದೊರಕುತ್ತದೆ.

ಹೆಚ್ಚಿನ ಮಾಹಿತಿಗೆ ಕಛೇರಿಯನ್ನು ಸಂಪರ್ಕಿಸಿ :
ವಿಳಾಸ : ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರಮ್
ಹಯವದನರಾವ್ ರೋಡ್, ಕೊಹಿನೂರ್ ಮೈದಾನದ ಹತ್ತಿರ,
ಗವಿಪುರಂ ವಿಸ್ತಾರಣೆ, ಬಸವನಗುಡಿ, ಬೆಂಗಳೂರು 560019.
ಫೋನ್ : 080-2667-5351/52/56.

ಸ್ವಾಮಿ ಹರ್ಷಾನಂದ
ಅಧ್ಯಕ್ಷರು
ರಾಮಕೃಷ್ಣ ಮಠ

e-mail : vidyarthi.mandiram@gmail.com   web : www.srvm.org

(**ಸೂಚನೆ: ಬಸವನಗುಡಿ ರಾಮಕೃಷ್ಣಮಠದ ಹಿಂಬಾಗದಲ್ಲಿ, ಕೊಹಿನೂರ್ ಮೈದಾನದ ಪಕ್ಕದಲ್ಲಿ ಪ್ರವೇಶದ್ವಾರವಿದೆ**)

ರಾಮಕೃಷ್ಣ ಮಿಷನ್, ದಾವಣಗೆರೆ.

(ರಾಮಕೃಷ್ಣ ಮಿಷನ್, ಬೇಲೂರು ಮಠ, ಪಶ್ಚಿಮ ಬಂಗಾಲ ಇದರ ಶಾಖೆ)
ಎಂ.ಸಿ.ಸಿ. 'ಎ' ಬ್ಲಾಕ್, ರಾಮಕೃಷ್ಣ ಮಾರ್ಗ, ದಾವಣಗೆರೆ – 577 004.
Ph. : 08192-220911 E-mail : davanagere@rkmm.org

ಮನವಿ

ದಾವಣಗೆರೆಯ ಶ್ರೀರಾಮಕೃಷ್ಣ ಆಶ್ರಮವು 1988ರಲ್ಲಿ ಸ್ಥಾಪನೆಗೊಂಡಿದ್ದು, ಪ್ರಾರಂಭದಿಂದಲೂ ಅನೇಕ ಬಗೆಯ ಧಾರ್ಮಿಕ ಮತ್ತು ಇತರ ಸೇವಾಕಾರ್ಯದಲ್ಲಿ ನಿರತವಾಗಿದೆ. ಈ ಆಶ್ರಮದ ಭಕ್ತರ ಕಳಕಳಿಯ ಆಶಯವೆಂದರೆ ಈ ಕೇಂದ್ರವು ರಾಮಕೃಷ್ಣ ಮಹಾಸಂಘದ ಅಧಿಕೃತ ಕೇಂದ್ರವಾಗಬೇಕೆಂಬುದು. ಅನೇಕ ವರ್ಷಗಳ ಅವರ ಕನಸು ದಿವ್ಯತ್ರಯರ ಅನುಗ್ರಹದಿಂದ ನನಸಾಗಿದೆ. ಶ್ರೀರಾಮಕೃಷ್ಣ ಆಶ್ರಮವು ಈಗ ಅಂತರರಾಷ್ಟ್ರೀಯ ಮಹಾಸಂಘವಾದ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಅಧಿಕೃತ ಕೇಂದ್ರವಾಗಿದ್ದು ಅದರ ಹೊಸ ಹೆಸರು "ರಾಮಕೃಷ್ಣ ಮಿಷನ್" ಎಂದಾಗಿದೆ.

ರಾಮಕೃಷ್ಣ ಮಹಾಸಂಘದ ಶಾಖೆಯಾಗಿ ಈಗ ಈ ಕೇಂದ್ರವು ತನ್ನ ಸೇವಾಕಾರ್ಯವನ್ನು ವಿಸ್ತಾರಗೊಳಿಸುವ ಯೋಜನೆ ಹಾಕಿಕೊಂಡಿದೆ. ಮೊದಲನೆಯ ಹಂತದಲ್ಲಿ ಈ ಕೆಳಗಿನ ಸೇವಾಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.

1. **ನಿಮ್ನ ವರ್ಗ, ರಿಕ್ಷಾ ಚಾಲಕರು ಮುಂತಾದವರಿಗೆ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಕೃತಿಯನ್ನು ನೀಡುವುದು.**
2. **ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳು.**
3. **ಆಡಳಿತ ಕ್ಷೇತ್ರದ ವಿವಿಧ ಉದ್ಯೋಗಸ್ಥರಿಗಾಗಿ ಕಾರ್ಯ ನೀತಿಯ ಕುರಿತಾದ ಕಾರ್ಯಕ್ರಮಗಳು.**
4. **ನಗರದ ಒಳ ಮತ್ತು ಹೊರ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಗಳನ್ನು ವಿತರಿಸುವುದು.**
5. **ಪ್ರಕೃತಿ ವಿಕೋಪದ ಸಮಯದಲ್ಲಿ ಪರಿಹಾರ ಕಾರ್ಯ.**
6. **ಭಕ್ತರಿಗಾಗಿ ಆಧ್ಯಾತ್ಮಿಕ ಶಿಬಿರಗಳು.**

ಸಮಾಜದ ವಿವಿಧ ವರ್ಗದ ಜನರಿಗೆ ಉನ್ನತ ಭಾವನೆಗಳು ತಲುಪುವಂತೆ ಮಾಡುವುದು ನಮ್ಮ ಉದ್ದೇಶ. ಈ ಮೂಲಕ ಸೇವಾಕಾರ್ಯಗಳನ್ನು ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗಲು ಅದಕ್ಕೆ ಅನುಕೂಲವಾದ ಅಧಿಷ್ಠಾನವನ್ನು ನಿರ್ಮಿಸಬೇಕಾಗಿದೆ. ನಮ್ಮ ಈಗಿನ ಅವಶ್ಯಕತೆಗಳು :

1. **ಪ್ರಾರ್ಥನಾ ಮಂದಿರ**
2. **ಸಭಾ ಭವನ**
3. **ಸಾಧುಗಳು, ಅತಿಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಿಗಾಗಿ ವಸತಿ ಸೌಕರ್ಯ**
4. **ಅಡಿಗೆ ಮತ್ತು ಊಟದ ಮನೆ**
5. **ಪೀಠೋಪಕರಣಗಳು**

ಜನರ ಅವಶ್ಯಕತೆಗನುಗುಣವಾಗಿ ಅವರಿಗೆ ಸೇವೆಯನ್ನು ಸಲ್ಲಿಸುವ ನಮ್ಮ ಈ ವಿನಮ್ರ ಪ್ರಯತ್ನದಲ್ಲಿ ಉದಾರ ಕೊಡುಗೆಯ ಮೂಲಕ ನಮ್ಮೊಂದಿಗೆ ಸಹಕರಿಸಬೇಕೆಂದು ವಿನಂತಿಸುತ್ತೇವೆ.

ನೀವು ಹಣವನ್ನು ನಗದು / ಚೆಕ್ / ಡಿ.ಡಿ. ಮೂಲಕ ಮೇಲಿನ ವಿಳಾಸಕ್ಕೆ ಕಳುಹಿಸಬಹುದು ಅಥವಾ ನೇರವಾಗಿ ಬ್ಯಾಂಕ್ ಅಕೌಂಟ್‌ಗೆ ಸಂದಾಯ ಮಾಡಬಹುದು. ನಂತರ ನಮಗೆ ದೇಣಿಗೆಯ ಮಾಹಿತಿಯನ್ನು ತಿಳಿಸಬೇಕು.

RAMAKRISHNA MISSION
CANARA BANK, Vinoba Nagar, M.C.C. 'A' Block, Davangere - 577 004.
Account No. : 1513101024652
IFSC Code : CNRB0001513
MICR Code : 577015006

ನೀವು ನೀಡುವ ದೇಣಿಗೆಯು ಆದಾಯ ತೆರಿಗೆ ಕಾಯಿದೆ **u/s 80G** ಅನ್ವಯ ತೆರಿಗೆ ವಿನಾಯಿತಿ ಪಡೆಯಲು ಅರ್ಹವಾಗಿರುತ್ತದೆ.
PAN No. AAAAR1077P.

ಇತಿ ಭಗವತ್ಸೇವೆಯಲ್ಲಿ
ಕಾರ್ಯದರ್ಶಿ
ಸ್ವಾಮಿ ನಿತ್ಯಸ್ಥಾನಂದ

ಜೀವನದ ಲಯ

ಬದುಕು ಅಸ್ಥಿರವೆನ್ನುತ್ತೇವೆ. ಜಂಜಾಟದ ನಡುವೆ ಹೋರಾಟವೇ ಬದುಕಾಗಿ ಹೋಯಿತು ಎಂದು ಬೇಸತ್ತು ನುಡಿಯುತ್ತೇವೆ. ಎಲ್ಲೆಲ್ಲೂ ಏರುಪೇರು, ಗೊಂದಲ, ಸಮಸ್ಯೆ, ಅತಿರೇಕಗಳು ಕಣ್ಣಿಗೆ ರಾಚತೊಡಗುತ್ತವೆ. ಆಗ ಒಂದು ಕ್ಷಣ, 'ನೆಮ್ಮದಿ, ಶಾಂತಿ, ಸೌಖ್ಯಗಳೆಲ್ಲ ಕೇವಲ ಪದಗಳಷ್ಟೇ. ಕೊನೆಯಿಲ್ಲದ ಅರಾಜಕತೆ, ಅವ್ಯವಸ್ಥೆ, ಗೊಂದಲಗಳೇ ವಾಸ್ತವ. ಎಲ್ಲ ಸುಂದರ ಕಲ್ಪನೆಗಳೂ ಕೇವಲ ಆಶಾವಾದವನ್ನು ಮೂಡಿಸುತ್ತ ಅವಾಸ್ತವ ಕನಸನ್ನು ಹುಟ್ಟುಹಾಕುತ್ತವೆ, ಅಷ್ಟೇ... ' ಎಂದು ಹತಾಶೆಯಿಂದ ನಿಟ್ಟುಸಿರು ಬಿಡುತ್ತೇವೆ. ಇದು ಒಂದು ಹಂತದ ಭಾವನೆ.

ಇನ್ನೊಂದು ಕ್ಷಣ ನೋಡುತ್ತೇವೆ : ಎಲ್ಲ ಗೊಂದಲ, ಏರುಪೇರುಗಳ ನಡುವೆ ಕೆಲವರು ಅದೆಷ್ಟು ಶಾಂತವಾಗಿ, ಸಮಾಧಾನದಿಂದ ಇರುತ್ತಾರೆ! ಅವರನ್ನು ನೋಡುವಾಗ ಆಶ್ಚರ್ಯವಾಗುತ್ತದೆ. ಅವರಿಗೂ ಸಮಸ್ಯೆಗಳು ಇಲ್ಲವೆಂದಲ್ಲ. ದೈನಂದಿನ ಜೀವನದಲ್ಲಿ ಅವರೂ ಹೋರಾಡುತ್ತಾರೆ, ಒತ್ತಡ-ಉದ್ವೇಗಗಳಿಗೆ ಒಳಗಾಗುತ್ತಾರೆ. ಆದರೆ ಅವರಲ್ಲಿ ಎಲ್ಲವೂ ಶಾಂತ, ನೀರವ. ಅದೇಕೆ? ಹಲವರು ಅರ್ಥವಾಗದೆ ಅಚ್ಚರಿಯಿಂದ ಅವರತ್ತ ನೋಡುತ್ತಾರೆ. ಅವರಂತಹ ಜನ ಕಡಿಮೆಯೆಂಬುದೇನೋ ನಿಜ. ಆದರೆ ಅವರಲ್ಲಿ ಎಲ್ಲವೂ ಭಿನ್ನವೆಂಬುದು ಅತ್ಯಂತ ಸ್ಪಷ್ಟ. ಈ ಬಗೆಯ ವ್ಯತ್ಯಾಸವನ್ನು ಅರಿಯಬೇಕಾದರೆ, ಇಂಥ ಕೆಲವೇ ಮಂದಿ ಜನರ ಮನಃಸ್ಥಿತಿಯೆಂತಹದು, ಅವರ ಮನೋಭಾವ ಯಾವ ಬಗೆಯದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ದೃಶ್ಯ ಜಗತ್ತಿನ ಹಿಂದಿರುವ ಮಾನಸಿಕ ಕ್ರಿಯೆ

'ನಾವು ಹೇಗೆ ಭಾವಿಸುತ್ತೇವೋ ಹಾಗೆ ಜಗತ್ತನ್ನು ಕಾಣುತ್ತೇವೆ' ಎಂಬ ಮಾತೊಂದಿದೆ. ನಾವು ಸಿಟ್ಟಿಗೆದ್ದಾಗ ಇಡೀ ಜಗತ್ತೇ ಅನರ್ಥಕಾರಕವೆಂದು ಕಂಡುಬರುತ್ತದೆ; ಎಲ್ಲವನ್ನೂ ಸುಟ್ಟುಬಿಡಬೇಕೆನಿಸುತ್ತದೆ. ಮನಸ್ಸು ಶಾಂತವೂ, ಉತ್ಸಾಹಭರಿತವೂ ಆಗಿದ್ದಾಗ ಜಗತ್ತೇ ಆನಂದದ ಮನೆಯಾಗಿರುವಂತೆ, ಎಲ್ಲೆಲ್ಲೂ ಸುಂದರ ಪುಷ್ಪಗಳೇ ತುಂಬಿಕೊಂಡಿರುವಂತೆ ಅನಿಸುತ್ತದೆ. ಅದೇರೀತಿ, ಶೋಕಸಾಗರದಲ್ಲಿ ಮುಳುಗಿದ್ದಾಗ ಪ್ರಪಂಚವೆಲ್ಲವೂ ಕಣ್ಣೀರು ಸುರಿಸುತ್ತಿರುವಂತೆ ಭಾಸವಾಗುತ್ತದೆ. ಇಷ್ಟರಿಂದ ತಿಳಿದುಬರುವ ವಿಷಯವಿದು : ನಮ್ಮ ಮನಃಸ್ಥಿತಿ ಹೇಗೋ, ಹಾಗೆ ಜಗತ್ತು ಕಂಡುಬರುತ್ತದೆ. ಆದ್ದರಿಂದ ಎಲ್ಲ ಗೊಂದಲ, ಸಂಘರ್ಷ, ದ್ವಂದ್ವಗಳೆಲ್ಲ ಇರುವುದು ನಮ್ಮ ಮನಸ್ಸಿನಲ್ಲೇ ಎಂದಾಯಿತು. ಆದರೆ ಈ ಅಭಿಪ್ರಾಯ ಪೂರ್ಣವಾಗಿ ಸತ್ಯವಲ್ಲ. ಬಾಹ್ಯಜಗತ್ತಿನಲ್ಲಿ ದ್ವಂದ್ವ, ಗೊಂದಲಗಳು ಇಲ್ಲವೆಂದು ಹೇಗೆ ಹೇಳಲಾದೀತು? ಪ್ರಪಂಚದ ಯಾವ ಭಾಗವನ್ನೇ ನೋಡಿದರೂ ಸದಾಚಾರ-ದುರಾಚಾರ, ಆನಂದ-ದುಃಖ, ಸ್ವಚ್ಛತೆ-ಕೊಳಕು, ವ್ಯವಸ್ಥೆ-ಅವ್ಯವಸ್ಥೆ ಇತ್ಯಾದಿ ದ್ವಂದ್ವಗಳನ್ನು ಕಾಣುತ್ತೇವೆ. ಎಲ್ಲವೂ ನಮ್ಮ ಮನಸ್ಸನ್ನೇ ಅವಲಂಬಿಸಿದ್ದರೆ, ಜಗತ್ತಿನಲ್ಲಿ ಈ ತೊಂದರೆಗಳು ಇರಲಾರವು ಎಂದೇ ಹೇಳಬೇಕಾಗುತ್ತದೆ. ಆದರೆ ವಾಸ್ತವಿಕ ಸ್ಥಿತಿ ಹಾಗಿಲ್ಲವಲ್ಲ. ನಾವು ಎಷ್ಟು ಗೊಂದಲಕ್ಕೊಳಗಾಗುತ್ತೇವೋ, ಜಗತ್ತೂ ಅಷ್ಟೇ ಗೊಂದಲಗಳಿಂದ ಕೂಡಿದೆ ಎಂಬುದು ಸತ್ಯ. ಆದ್ದರಿಂದ ಮನಸ್ಸೇ ಎಲ್ಲದಕ್ಕೂ ಮೂಲ ಎಂದು ಸಂಪೂರ್ಣ ಹೊಣೆಗಾರಿಕೆಯನ್ನು ಅದಕ್ಕೆ ಹೊರಿಸಿಬಿಡುವುದೂ ಸೂಕ್ತವಲ್ಲ. ಇಂಥ ಗೊಂದಲಮಯ ಬದುಕಿಗೆ ಕಾರಣವನ್ನು ಹೇಗೆ ಕಂಡುಕೊಳ್ಳೋಣ?

ಬದುಕಿನ ಲಯ

ಕಾವ್ಯ, ಸಂಗೀತಗಳಲ್ಲಿ ಬಳಕೆಯಾಗುವ 'ಲಯ'ವೆಂಬ ಕಲ್ಪನೆಯನ್ನು ಜೀವನಕ್ಕೂ ಅನ್ವಯಿಸಿಕೊಂಡು ನೋಡಬಹುದು. 'ಲಯ'ವೆಂದರೆ ಗತಿ, ಒಂದೇ ಕಾಲಮಿತಿಯ ಪುನರಾವರ್ತನೆ, ಸಮಾನ ಅಂಶಗಳ ಮುಂದುವರಿಕೆ – ಹೀಗೆಲ್ಲ ವಿವರಿಸಬಹುದು. ಹಾಡು ಕೇಳುವವರಿಗೆ, ಕವಿತೆ ಓದುವವರಿಗೆ ಲಯವೆಂದರೆ ಏನೆಂದು ಗೊತ್ತೇ ಇದೆ. ಮಟ್ಟು, ಛಂದಸ್ಸು, ತಾಳ ಎಂದೆಲ್ಲ ಕರೆಯುವುದು ಲಯವನ್ನೇ. ಕೆಲವೊಮ್ಮೆ ನಿಯಮಿತ ಗತಿಯ ಪುನರಾವರ್ತನೆಯನ್ನು ಮೀರಿ ಆಂತರಿಕವಾಗಿ ಅರಿವಿಗೆ ಬರುವ ಒಂದು ಬಗೆಯ ಆವರ್ತನೆ, ಸಮತೋಲನ ಇವನ್ನೂ 'ಲಯ'ವೆನ್ನುತ್ತೇವೆ. ('ಲಯ'ವೆಂದರೆ 'ವಿಲೀನವಾಗುವುದು' ಎಂಬ ಅರ್ಥವೂ ಇದೆ. ಇಲ್ಲಿ ಈಗ ಅದು ಪ್ರಸ್ತುತವಲ್ಲ; ಆದರೆ ತಾತ್ತ್ವಿಕವಾಗಿ ಅದು ಮುಖ್ಯವಾಗುತ್ತದೆ. ಆದ್ದರಿಂದ ಕೊನೆಯಲ್ಲಿ ನೋಡೋಣ.)

ಬದುಕಿನ ಲಯವನ್ನು ಕಂಡುಕೊಂಡವರಲ್ಲಿ ಗೊಂದಲ, ಸಂಘರ್ಷಗಳನ್ನು ಮೀರಿ ನಿಲ್ಲುವ ಶಾಂತ ಮನಃಸ್ಥಿತಿಯನ್ನು ಕಾಣುತ್ತೇವೆ. ಅವರು ಹೊರಗಣ ಜಗತ್ತಿನ ಎಲ್ಲ ಅಸಮತೋಲನದ ನಡುವೆ ಕೂಡ ಸಮರ್ಪಕವಾದ ಲಯವನ್ನು ಕಾಣುತ್ತಾರೆ; ಅಂತೆಯೇ ತಮ್ಮ ಅಂತರಂಗದಲ್ಲೂ ನಿರಂತರ ಲಯವನ್ನು ಸಾಧಿಸುತ್ತಾರೆ. ಜಗತ್ತಿನಿಂದ ನಮ್ಮ ಅಂತರಂಗವೂ, ಅಂತೆಯೇ ನಮ್ಮ ಅಂತರಂಗದಿಂದ ಹೊರಜಗತ್ತೂ ಪ್ರಭಾವಿತವಾಗುತ್ತವೆ ಎನ್ನುವುದು ಎಲ್ಲರ ಗಮನಕ್ಕೆ ಬರುವ ವಿಚಾರ. ಬಾಹ್ಯ-ಅಂತರಂಗಗಳೆರಡೂ ಪರಸ್ಪರ ಭಿನ್ನವಾಗಿದ್ದರೂ ಅವುಗಳ ನಡುವೆ ಯಾವಾಗಲೂ ಕೊಡು-ಕೊಳ್ಳುವಿಕೆ ನಡೆಯುತ್ತಿರುತ್ತದೆ. ಆದರೆ ತಾತ್ತ್ವಿಕವಾಗಿಯೂ, ವಾಸ್ತವಿಕವಾಗಿಯೂ ಬಾಹ್ಯ-ಅಂತರಂಗಗಳು ಬೇರೆಯಲ್ಲ ; ಆದರೆ ಹಾಗೆ ಕಂಡುಬರುತ್ತವೆ. ಆದ್ದರಿಂದ ಮನಃಸ್ಥಿತಿಗೆ ಅನುಗುಣವಾಗಿ ಜಗತ್ತು ಬದಲಾಗುತ್ತದೆ; ಜಗತ್ತಿನ ಸ್ಥಿತಿ-ಗತಿಗೆ ಅನುಗುಣವಾಗಿ ಮನಸ್ಸೂ ಬದಲಾಗುತ್ತದೆ. ಆದರೆ ಮನುಷ್ಯನು ಇವೆರಡನ್ನೂ ಮೀರಿದ ಅಸ್ತಿತ್ವ ಹೊಂದಿದ್ದಾನೆ. ವ್ಯಕ್ತಪ್ರಪಂಚ, ಮಾನಸಿಕ ಪ್ರಪಂಚ ಇವುಗಳನ್ನು ಮೀರಿದ ಅವನ ವ್ಯಕ್ತಿತ್ವವು ತನ್ನ ನಿಜವಾದ ನೆಲೆಯನ್ನು ಅರಿತುಕೊಳ್ಳಬೇಕು. ಆ ಅರಿವೇ ಬದುಕಿನ ಲಯವನ್ನು ಕಂಡುಕೊಳ್ಳುವಂತೆ ಮಾಡುತ್ತದೆ. ಆಗ ಮನಸ್ಸು ನಲಿಯುತ್ತದೆ, ಜಗತ್ತು ಲಯಬದ್ಧವಾಗಿ ಹೆಜ್ಜೆ ಹಾಕುತ್ತದೆ.

ಹಾರುವ ಹಕ್ಕಿಯ ಲಯ

ಆದರೆ ನಮ್ಮ ನಮ್ಮ ನಿಜದ ನೆಲೆಯನ್ನು ಕಂಡುಕೊಳ್ಳುವುದು, ಬದುಕಿನ ಲಯವನ್ನು ಅನುಭವಿಸುವುದು ಸುಲಭದ ಮಾತಲ್ಲ. ಅದೊಂದು ಸುದೀರ್ಘವಾದ ಪ್ರಕ್ರಿಯೆ. ಹಕ್ಕಿಯೊಂದು ಆಗಸದಲ್ಲಿ ಎಷ್ಟೊಂದು ಆನಂದದಿಂದ ಹಾರಾಡುತ್ತದೆ! ಅದರ ಹಾರಾಟದ ಸುಖವನ್ನು ನೋಡಿ ಆನಂದಿಸದವರು ಯಾರು? ಆದರೆ ಅದು ಹಾರುವುದನ್ನು ಕಲಿತ ಬಗೆ ಹೇಗೆ? ಅದೆಷ್ಟು ಹೋರಾಟಗಳನ್ನು ಮಾಡಿರಬೇಕು — ಎಷ್ಟು ಬಾರಿ ಮುಗ್ಗರಿಸಿ ಬಿದ್ದು, ಏಟು ತಿಂದಿರಬೇಕು! ಹಕ್ಕಿ ಹಾರಾಡಲು ಕಲಿಯುವ ಪ್ರಕ್ರಿಯೆಯನ್ನು ನಾವು ಗಮನಿಸಬೇಕು. ಈ ಮೂಲಕ ಲಯವನ್ನರಿಯುವ ಸುದೀರ್ಘ ಪ್ರಕ್ರಿಯೆ ಎಂಥದು ಎಂಬುದನ್ನು ಅರಿತುಕೊಳ್ಳೋಣ.

ಹಕ್ಕಿಯ ದೇಹಕ್ಕೊಂದು ಭಾರವಿದೆ. ಅದನ್ನು ಆಕಾಶದಲ್ಲಿ ಎತ್ತಿ ಹಿಡಿಯಬೇಕು. ಸಮತೋಲನ ತಪ್ಪದಂತೆ ಎರಡೂ ರೆಕ್ಕೆಗಳನ್ನು ಬಡಿಯುತ್ತ, ಗಾಳಿಯನ್ನು ತಳ್ಳುತ್ತ ಅದು ಎತ್ತರಕ್ಕೆ ಹಾರಬೇಕು. ಯಾವ ಹಕ್ಕಿಗೂ ಮರಿಯಾಗಿರುವಾಗ ರೆಕ್ಕೆ ಮೂಡಿರುವುದಿಲ್ಲ ; ಹಾರಲಂತೂ ಕಲಿತಿರಲು ಸಾಧ್ಯವೇ ಇಲ್ಲ. ರೆಕ್ಕೆಗಳು ಮೂಡಿ, ಬಲಿತು, ತಾಯಿ ಹಕ್ಕಿಯನ್ನು ನೋಡುತ್ತ ಹಾರಲು ಕಲಿತು, ಹಲವು ಬಾರಿ ಬಿದ್ದು ಮೈ ಕೈ ಗಾಯ ಮಾಡಿಕೊಂಡು, ಕ್ರಮೇಣ ಹಕ್ಕಿಯು ಹಾರುವ ಕಲೆಯನ್ನು ರೂಢಿಸಿಕೊಳ್ಳುತ್ತದೆ. ದೇಹದ ಭಾರ, ವಾಯುವಿನ ಚಲನೆ, ರೆಕ್ಕೆಗಳ ಬೀಸುವಿಕೆ, ಸಮತೋಲನವನ್ನು ಕಂಡುಕೊಳ್ಳುವುದು ಇವೆಲ್ಲ ಸೇರಿದಾಗಲೇ ಅಲ್ಲಿ ಒಂದು ಲಯ ನಿರ್ಮಾಣವಾಗುತ್ತದೆ. ಆ ಲಯದಲ್ಲಿ ಹಕ್ಕಿ ತನ್ನ ಬಲವನ್ನು ಪ್ರಯೋಗಿಸಿ ಮುನ್ನುಗ್ಗಿದಾಗಲೇ ಅದು ಹಾರಾಡಲು ಕಲಿಯುತ್ತದೆ. ಇದೇ ರೀತಿ ಈಜುವ ಕಲೆ, ಸೈಕಲ್ ತುಳಿಯುವುದು ಮೊದಲಾದವನ್ನು ನಾವು ಕಲಿಯುತ್ತೇವೆ. ಇದೇ ಸಮತೋಲನ — ಅದನ್ನು ಕಂಡುಕೊಳ್ಳುವುದೇ ಕಲಿಕೆ. ಯಾವ ಕಡೆಗೆ ವಾಲಿದರೂ ಬೀಳುವುದು ತಪ್ಪದು. ಲಯವಾದರೂ ಅಷ್ಟೇ - ನಿಯಮಿತ ಕಾಲಾವಧಿಯ ಮಿತಿಯಲ್ಲಿ ಇದ್ದರೆ ಅದು ಲಯ. ಕವಿತೆಯಾಗಿರಲಿ, ಸಂಗೀತವಾಗಿರಲಿ, ಆ ಲಯಕ್ಕೆ ಬದ್ಧವಾಗಿ ಮುಂದೆ ಸಾಗಿದರೆ ಎಲ್ಲವೂ ಸಹಜ. ಇಲ್ಲದಿದ್ದರೆ ಎಲ್ಲವೂ ಏರುಪೇರು.

ಜೀವನ ಗತಿ, ಸಮತೋಲನ

ಜೀವನದ ಗತಿಯಲ್ಲಿ ಇಂಥದೇ ಒಂದು ಕಲಿಕೆಯಿದೆ. ಹಲವು ಬಾರಿ ಬೀಳುತ್ತೇವೆ, ಏಳುತ್ತೇವೆ. ಬಿದ್ದಷ್ಟೂ, ನೋವು ತಿಂದಷ್ಟೂ ನಾವು ಜಾಗರೂಕರಾಗುತ್ತೇವೆ. ಮತ್ತೆ ಬೀಳದಂತೆ, ಸಮತೋಲನದಿಂದ ಸಾಗಲು ಪ್ರಯತ್ನಿಸುತ್ತೇವೆ. ಆದರೆ ಸರಿಯಾದ ಲಯ ಸಿಗುವುದು ಯಾವಾಗ? ಎಲ್ಲ ಏರುಪೇರು, ದ್ವಂದ್ವ, ಗೊಂದಲಗಳ ನಡುವೆ ಸಮತೋಲನ ಸಾಧಿಸಿದಾಗ. ದ್ವಂದ್ವ, ಏರುಪೇರು ಎನ್ನುವುದು ಪ್ರಕೃತಿಯ ಗುಣ. ಪ್ರಪಂಚದ ಎಲ್ಲೆಡೆ, ಎಲ್ಲ ವಸ್ತುಗಳಲ್ಲಿ, ಎಲ್ಲ ಕ್ರಿಯೆಗಳಲ್ಲಿ ಈ ಅಸಮತೋಲನ ಕಂಡುಬರುತ್ತದೆ. ಅವು ಹಾಗಿರುವುದರಿಂದಲೇ ಪ್ರಪಂಚ ಮುಂದೆ ಸಾಗುತ್ತದೆ. ಮತ್ತೆ ಮತ್ತೆ ಪುನರಾವರ್ತಿಸುವ ಪ್ರಪಂಚದ ವಿದ್ಯಮಾನಗಳಲ್ಲಿ, ಹಲವು ಬಗೆಯ ಕ್ರಿಯೆಗಳಲ್ಲಿ ಒಂದು ಬಗೆಯ ಸೂಕ್ಷ್ಮ ಸಮತೋಲನ, ಲಯ ಅಡಗಿದೆ. ದ್ವಂದ್ವ-ಅಸಮತೋಲನಗಳಲ್ಲಿರುವ ವಿರುದ್ಧ ಶಕ್ತಿಗಳನ್ನು ಹಿಡಿದಿಟ್ಟಿರುವುದೇ ಆ 'ಲಯ'. ಅದನ್ನು ಅರಿತ ಮಾನವನು ದ್ವಂದ್ವಗಳನ್ನು ಮೀರುತ್ತಾನೆ, ಅಸಮತೋಲನವನ್ನು ಮೆಟ್ಟಿ ನಿಲ್ಲುತ್ತಾನೆ. 'ಆತ್ಮದಲ್ಲಿರುವ **ಅವನನ್ನು** ಯಾವ ವಿವೇಕಿಗಳು ನೋಡುತ್ತಾರೆಯೋ, ಅವರಿಗೇ ಶಾಶ್ವತವಾದ ಶಾಂತಿ, ಇತರರಿಗಿಲ್ಲ' ಎಂಬ ಉಪನಿಷತ್ತಿನ *(ಕಠ., ೫.೧೩)* ಮಾತಿನಂತೆ, ಅವನು ಎಲ್ಲೆಡೆ ಲಯವನ್ನೇ ಅನುಸರಿಸುತ್ತ ಶಾಂತಿಯನ್ನು ಕಾಣುತ್ತಾನೆ. ಜೀವನವನ್ನು ಕುರಿತ ಈ ವಿಚಾರ ಹಕ್ಕಿಯ ಚಲನೆ, ಸೈಕಲಿನ ಬ್ಯಾಲೆನ್ಸಿನಂತೆ ಕಣ್ಣಿಗೆ ಕಾಣುವಂತಹದಲ್ಲ ; ಅದು ಸೂಕ್ಷ್ಮವಾದ ಸಂಗತಿ. ತಾತ್ತ್ವಿಕತೆ, ವೇದಾಂತ, ಚಿಂತನೆಗಳು ಈ ಸೂಕ್ಷ್ಮ ಸಂಗತಿಯನ್ನು ಅರಿಯುವ ಪ್ರಯತ್ನವಷ್ಟೇ. ಮುಂದಿನ ಪ್ರಶ್ನೆ: ಜೀವನದ ಲಯವನ್ನು ಕಾಣುವ ಬಗೆ ಹೇಗೆ?

ಗೀತೆಯಲ್ಲಿ ಹೇಳಿರುವ 'ಸುಖದುಃಖಗಳನ್ನೂ ಲಾಭ-ನಷ್ಟಗಳನ್ನೂ ಸಮಾನವಾಗಿ ಭಾವಿಸಿಕೊಂಡು ಯುದ್ಧಮಾಡಲು ಸನ್ನದ್ಧನಾಗು' *(೨.೩೮)* ಎಂಬ ಮಾತಿನಲ್ಲಿ ಜೀವನದ ಸಮಸ್ಥಿತಿಯನ್ನು ಕಂಡುಕೊಳ್ಳುವ ವಿಧಾನವನ್ನು ಹೇಳಲಾಗಿದೆ. ಸಾಮಾನ್ಯವಾಗಿ ಎಲ್ಲರೂ ಸುಖವನ್ನೇ ಬಯಸುತ್ತಾರೆ; ತಮಗೆ ಹಿತವಾದುದೇ ಆಗಬೇಕೆಂದು ನಿರೀಕ್ಷಿಸುತ್ತಾರೆ. ಆದರೆ ಜಗತ್ತಿನಲ್ಲಿ ನಡೆಯುವ ಆಗುಹೋಗುಗಳಿಗೆ ಅನಂತ ಸಾಧ್ಯತೆಗಳಿವೆ. ಆದ್ದರಿಂದ ಒಂದನ್ನು

ಬಯಸಿ ಇನ್ನೊಂದನ್ನು ಪಡೆಯುವಾಗ ಉಂಟಾಗುವ ದುಃಖ, ನಿರಾಸೆ, ಭ್ರಮನಿರಸನ ಇವುಗಳನ್ನು ಹೇಗೆ ನಿವಾರಿಸುವುದು? ಏನನ್ನೂ ಬಯಸದೆ, ಸರ್ವವನ್ನೂ ತ್ಯಾಗ ಮಾಡುತ್ತ ಜೀವಿಸುವ ವಿಧಾನ ಎಲ್ಲರಿಗೂ ಹೇಳಿದ್ದಲ್ಲ. ಆದ್ದರಿಂದ ಸುಖ-ದುಃಖವೇ ಮೊದಲಾದ ದ್ವಂದ್ವಗಳನ್ನು ಸಮಾನವಾಗಿ ಸ್ವೀಕರಿಸುವುದೇ ಎಲ್ಲ ಸಂಕಟಗಳನ್ನೂ ಮೀರಿಹೋಗಲು ಉಪಾಯ. ಎಲ್ಲ ಏರುಪೇರುಗಳನ್ನೂ ದಾಟಿಹೋಗಿ ಶಾಂತಿಯ, ಆನಂದದ ಬಾಳನ್ನು ನಡೆಸಲು ಇದೇ ಅತ್ಯಂತ ಸುಲಭ ಹಾಗೂ ಯೋಗ್ಯವಾದ ಮಾರ್ಗ.

ಮಾನವನಲ್ಲಿರುವ ವಿಶೇಷ ಗುಣವೇ ಅವನ ಬುದ್ಧಿಶಕ್ತಿ. ಅಷ್ಟೇ ಅಲ್ಲದೆ, ಅವನು ಸ್ವತಂತ್ರವಾಗಿ ಆಲೋಚಿಸಿ, ಚಿಂತಿಸಿ, ವಿಶ್ಲೇಷಿಸಿ ಹೊಸ ಹೊಸ ಸಂಗತಿಗಳನ್ನು ಕಂಡುಕೊಳ್ಳಬಲ್ಲ. ನಮ್ಮ ಸುತ್ತಮುತ್ತಲಿನ ಜನರ ನಡುವೆ ಎಲ್ಲೋ ಕೆಲವರು ಜೀವನದ ಲಯವನ್ನು ಕಂಡುಕೊಂಡವರು ಇದ್ದೇ ಇರುತ್ತಾರೆ. ಅವರು ವೇದಾಂತಿಗಳಾಗಬೇಕಿಲ್ಲ , ಬುದ್ಧಿಜೀವಿಗಳಾಗಬೇಕಿಲ್ಲ. ತಮ್ಮೊಳಗಿನ ಹಲವು ಬಗೆಯ ಅರಿವಿನ ಪ್ರಕ್ರಿಯೆಗಳಿಂದ ಅವರು ಜೀವನದ ಲಯವನ್ನು ಕಂಡುಕೊಂಡಿರುತ್ತಾರೆ. ಅವರನ್ನು ದ್ವಂದ್ವಗಳು ವಿಚಲಿತಗೊಳಿಸಲಾರವು. ಅವರು ಎಲ್ಲವನ್ನೂ ಸಮಾನವಾಗಿ ಸ್ವೀಕರಿಸುವ ಮನಃಸ್ಥಿತಿಯನ್ನು ರೂಢಿಸಿಕೊಂಡಿರುತ್ತಾರೆ. ಎಲ್ಲ ನೋವುಗಳನ್ನೂ ನುಂಗಿಕೊಳ್ಳುವ, ಪ್ರತಿಯೊಂದು ಅನುಭವವನ್ನೂ ದೂರದಿಂದ ನೋಡುವ, ಸುಖ-ದುಃಖಗಳ ನಡುವೆ ಶಾಂತ ಭಾವವನ್ನು ಸಾಧಿಸುವ ಮನೋಭಾವ ಅವರಲ್ಲಿ ಕಂಡುಬರುತ್ತದೆ. 'ಯಾರು ಸ್ವಾಮಿ ಅಂಥವರು? ಸಾವಿರಕ್ಕೆ ಒಬ್ಬರಾದರೂ ಇದ್ದಾರೇನು?' ಎಂದು ಹುಬ್ಬೇರಿಸುವ ಮಂದಿ ಇದ್ದೇ ಇರುತ್ತಾರೆ. ಆದರೆ ತುಸು ಕಣ್ಣು ತೆರೆದು ನೋಡಬೇಕು; ಎಲ್ಲೋ ಒಬ್ಬರು ಸಿಕ್ಕೇ ಸಿಗುತ್ತಾರೆ. ಹಳ್ಳಿಯ ವೃದ್ಧೆಯರಿರಲಿ, ಅಂಗಡಿಯಲ್ಲಿ ವ್ಯಾಪಾರ ಮಾಡುವ ಮಧ್ಯವಯಸ್ಕನಿರಲಿ, ಸುಶಿಕ್ಷಿತ ಸರ್ಕಾರೀ ನೌಕರನಿರಲಿ - ಸ್ಥಾನಮಾನ, ಅಂತಸ್ತುಗಳ ಭೇದವಿಲ್ಲದೆ, ಎಲ್ಲೋ ಒಬ್ಬಾತ ಈ ಲಯವನ್ನು ಅರಿತಿರುತ್ತಾನೆ. ಅವನನ್ನು ಗುರುತಿಸುವ ಕಣ್ಣು ಮಾತ್ರ ನಮ್ಮದಾಗಿರಬೇಕು.

ಲಯರಹಿತ ಸ್ಥಿತಿ

ಯಾವುದೇ ವಸ್ತು ನಮಗೆ ಗೋಚರವಾಗಬೇಕಾದರೆ ಅಲ್ಲಿ ಆಕಾರ, ಗುಣ, ಚಲನೆ ಇತ್ಯಾದಿಗಳಿರಬೇಕು. ಇವೆಲ್ಲವೂ ಸೀಮಿತತೆಯನ್ನು ನಿರ್ಮಿಸುವ ಅಂಶಗಳು. ತಾತ್ತ್ವಿಕರು ಇವನ್ನೇ 'ನಾಮ-ರೂಪ-ಕ್ರಿಯೆ' ಎಂದು ಕರೆದರು. ಇವುಗಳನ್ನು ಮೀರಿದರೆ ನಾವು ಏನನ್ನೂ ಗ್ರಹಿಸಲಾರೆವು. ಉದಾಹರಣೆಗೆ: ಚೆಂಡು. ಅದರ ಆಕಾರವೇನು? ಕೆಂಪು ಬಣ್ಣ, ದುಂಡಗಿನ ಆಕೃತಿ, ರಬ್ಬರ್‌ನಿಂದ ತಯಾರಿಸಿದ್ದಾರೆ, ಮೃದುವಾಗಿದೆ - ಇತ್ಯಾದಿ. ಈ ಎಲ್ಲ ಗುಣಗಳನ್ನು ಒಂದೊಂದಾಗಿ ಕಳೆದರೆ, ಅದನ್ನು 'ಚೆಂಡು' ಎನ್ನಲಾಗದು. ಅದು ಅಗೋಚರವಾಗಿಬಿಡುತ್ತದೆ.

ಇದೇ ರೀತಿ ಲಯದ ವಿಚಾರ ಕೂಡ. ಕಾಲದಿಂದ, ಗತಿಯಿಂದ ಬದ್ಧವಾದ ಲಯವು ತನ್ನ ನಿಯಮಿತ ಆವರ್ತನೆಯನ್ನು ಕಳೆದುಕೊಂಡರೆ ಆಗುವುದು ಲಯರಹಿತ ಸ್ಥಿತಿ (ಅಂದರೆ, 'ತಾಳ ತಪ್ಪುವುದು'). ಆದರೆ ಲಯಬದ್ಧವಾದ ಗತಿಯಲ್ಲೇ ಮುಂದುವರಿಯುತ್ತ, ಒಂದು ರೀತಿಯ ಸಮಸ್ಥಿತಿಯನ್ನು ತಲುಪುವುದು ಸಾಧ್ಯ. ಅದನ್ನು 'ವಿಲಯ ಸ್ಥಿತಿ' ಎನ್ನಬಹುದು - ಲಯವೆಲ್ಲವೂ ಒಂದು ಬಗೆಯ ಏಕತೆಯಲ್ಲಿ ಕರಗಿಹೋಗುವ, ವಿಲೀನವಾಗುವ ಸ್ಥಿತಿ. ಲಯ ಅಥವಾ ತಾಳವೇ ಇಲ್ಲದ ಸ್ಥಿತಿಗೂ, ತಾಳದಲ್ಲೇ ಮುಂದುವರಿಯುತ್ತ ಅದನ್ನು ಮೀರಿ ಹೋಗುವ ಸ್ಥಿತಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಇದನ್ನೇ ಛಂದಸ್ಸಿನಲ್ಲಿ , ನೃತ್ಯದಲ್ಲಿ ಅಳವಡಿಸಿಕೊಂಡು ನೋಡಬಹುದು. ಹೀಗೆ ಮಿತಿಯನ್ನು ಮೀರಿದ, ಅತೀತ ಸ್ಥಿತಿಯನ್ನು ತಲುಪುವುದು ಹೇಗೆ?

ಅದೊಂದು ಬಗೆಯ ಅನುಭೂತಿ. ಕಲೆ, ಸಾಹಿತ್ಯ, ನೃತ್ಯಗಳಲ್ಲಿ ಅನುಭವಕ್ಕೆ ಬರುವ ತಲ್ಲೀನ ಅವಸ್ಥೆ ವಾಸ್ತವಿಕ ಪ್ರಪಂಚದ ಮಿತಿಯಲ್ಲೇ ಗ್ರಾಹ್ಯವಾಗುವುದು; ಜೀವನದ ವಿವಿಧ ಅನುಭವಗಳೂ ಇದೇ ರೀತಿ. ಆದರೆ ಜೀವನದ ಲಯವೆಂಬುದು ಈ ಗ್ರಾಹ್ಯ ಜಗತ್ತಿನ ಹಿಂದಿರುವ ಸೂಕ್ಷ್ಮಸ್ಥಿತಿಯೆಂಬುದನ್ನು ಮತ್ತೆ ನೆನಪಿಸಿಕೊಳ್ಳಬೇಕು. ಸಮತ್ವ , ಶಾಂತಿ, ಆನಂದಗಳನ್ನು ಹೊರಹೊಮ್ಮಿಸಬಲ್ಲ ಶಕ್ತಿ ಇದಕ್ಕಿದೆ. ಇದರ ಆಳದಲ್ಲಿ ಆಧ್ಯಾತ್ಮಿಕ ತತ್ತ್ವವಿದೆ, ಏಕತೆಯನ್ನು ಸಾರುವ ಆಳವಾದ ಭಾವವಿದೆ. ಇಂಥ ಸೂಕ್ಷ್ಮ ವಿಚಾರವನ್ನು ಕಂಡುಕೊಂಡ ವ್ಯಕ್ತಿ ಇನ್ನೂ ಆಳಕ್ಕಿಳಿಯಬೇಕು; ಅಖಂಡ ಸತ್ಯದ ದರ್ಶನ ಮಾಡಬೇಕು. ಆಗ ಲಯದ ಗತಿಯೆಲ್ಲವೂ ಅಖಂಡದಲ್ಲಿ ವಿಲೀನವಾಗುವುದು; ತಾನದ ನರ್ತನವೆಲ್ಲವೂ ನಾದದ ಏಕತೆಯಲ್ಲಿ ನೆಲೆನಿಲ್ಲುವುದು. ಹಕ್ಕಿಯ ಹಾರುವಿಕೆ, ಈಜಾಡುವ ಕ್ರಿಯೆ, ಸೈಕಲ್ ತುಳಿಯುವುದು ಇವೆಲ್ಲ ಆರಂಭದಲ್ಲಿ ಮಾತ್ರ ಕಠಿಣ. ಚೆನ್ನಾಗಿ ಅಭ್ಯಾಸವಾದ ಮೇಲೆ ಎಲ್ಲವೂ ಲೀಲಾಜಾಲ, ಅದೊಂದು ಬಗೆಯ ಆನಂದ. ಅಲ್ಲಿ ಬೀಳುವ ಭಯವಿಲ್ಲ, ಸಮತೋಲನ ತಪ್ಪುವ ಪ್ರಮೇಯವೇ ಇಲ್ಲ. ಯಾವುದೇ ಶ್ರಮವಿಲ್ಲದೆ ಎಲ್ಲವೂ ಸಹಜ; ಕ್ರಿಯೆ ನಡೆಯುತ್ತಿದೆ ಎಂದೇ ಅನಿಸದು. ಅದರಲ್ಲೊಂದು ಲಯವಿದೆ ಎಂಬ ಅರಿವೂ ಇರಲಾರದು. ಇದೇ 'ಲಯದಾಚಿನ' ಸ್ಥಿತಿ. ಜೀವನದಲ್ಲೂ ಹೀಗೆಯೇ. ಬದುಕಿನ, ಪ್ರಪಂಚದ ಆಳದಲ್ಲಿ ಅಡಗಿರುವ ಲಯವನ್ನು ಅರಿತವನು ಪ್ರತಿಯೊಂದನ್ನೂ ಉತ್ಸಾಹದಿಂದ ಎದುರಿಸುತ್ತಾನೆ. ಭವಸಾಗರದಲ್ಲಿ ಆನಂದದಿಂದ ಈಜಾಡುತ್ತ, ಅದರಾಚೆಯ ದಡದತ್ತ ಸಾಗುತ್ತಾನೆ.

ಮೇ ತಿಂಗಳ ಕಾರ್ಯಕ್ರಮಗಳು

೧೧	ಶುಕ್ರವಾರ	ಏಕಾದಶಿ
೨೫	ಶುಕ್ರವಾರ	ಏಕಾದಶಿ

ಪ್ರಾಯೋಗಿಕ ಧರ್ಮ

ಕಟ್ಟಿಗೆಯಲ್ಲಿ ಬೆಂಕಿ ನಿಶ್ಚಯವಾಗಿ ಇದೆ ಎಂಬ ನಂಬಿಕೆ ಒಂದು; ಕಟ್ಟಿಗೆಯಿಂದ ಬೆಂಕಿ ಉತ್ಪನ್ನ ಮಾಡಿ ಅನ್ನ ಬೇಯಿಸಿ ಊಟಮಾಡಿ ಶಾಂತಿ ಅಥವಾ ತೃಪ್ತಿಯನ್ನು ಪಡೆಯುವುದು ಇನ್ನೊಂದು. ಇವೆರಡಕ್ಕೂ ಅಜಗಜಾಂತರ ವ್ಯತ್ಯಾಸ.

ಒಂದರ ಮೇಲೆ ದೃಢವಿಶ್ವಾಸವುಳ್ಳವರಾಗಿ ಇರಬೇಕು. ಆಳಕ್ಕೆ ಮುಳುಗಿ, ಹಾಗೆ ಮಾಡದಿದ್ದರೆ ಸಮುದ್ರದೊಳಗಿನ ಮುತ್ತುಗಳನ್ನು ಪಡೆಯಲಾಗುವುದಿಲ್ಲ. ನೀರಿನ ಮೇಲೆಯೇ ಕೇವಲ ತೇಲುತ್ತಿದ್ದರೆ ಅದನ್ನು ಪಡೆಯಲಾಗುವುದಿಲ್ಲ.

ಎಲ್ಲರೂ ದೊಡ್ಡ ಮನುಷ್ಯನ ತೋಟವನ್ನು ನೋಡುವುದೇ ತಡ ಬೆರಗಾಗಿ ಬಿಡುತ್ತಾರೆ — ಎಷ್ಟು ಸುಂದರವಾದ ಗಿಡಗಳು, ಎಷ್ಟು ಸುಂದರವಾದ ಹೂವುಗಳು, ಎಷ್ಟು ಸುಂದರವಾದ ಕೊಳಗಳು, ಎಷ್ಟು ಸುಂದರವಾದ ಬೈಠಕ್‌ಖಾನೆ, ಅದರೊಳಗೆ ಎಷ್ಟು ಸುಂದರವಾದ ಪಟಗಳು ಇವುಗಳನ್ನೆಲ್ಲ ನೋಡಿಯೇ ಆಶ್ಚರ್ಯಚಕಿತರಾಗಿಬಿಡುತ್ತಾರೆ. ಆದರೆ ಎಲ್ಲಿ , ತೋಟದ ಯಜಮಾನ ಇದ್ದಾನಲ್ಲ ; ಆ ದೊಡ್ಡ ಮನುಷ್ಯ, ಆತ ಬೇಕೆಂದು ಇಚ್ಛಿಸುವವರು ಎಷ್ಟು ಜನ? ಆತ ಬೇಕು ಎನ್ನುವವರು ಎಲ್ಲೋ ಒಬ್ಬಿಬ್ಬರು. ವ್ಯಾಕುಲನಾಗಿ ಭಗವಂತನನ್ನು ಕರೆದರೆ ಆತನ ದರ್ಶನ ದೊರೆಯುತ್ತದೆ. ಆತನೊಡನೆ ನಾನು ನಿಮ್ಮೊಡನೆ ಈಗ ಮಾತುಕತೆಯಾಡುತ್ತಿರುವಂತೆ ಮಾತುಕತೆಯಾಡಬಹುದು. ಸತ್ಯವಾಗಿ ಹೇಳುತ್ತೇನೆ, ಆತನ ದರ್ಶನ ದೊರೆಯುತ್ತದೆ.

ಶಾಸ್ತ್ರಾಧ್ಯಯನದಿಂದ ಅಬ್ಬಬ್ಬ ಎಂದರೆ ಆತನ ಅಸ್ತಿಮಾತ್ರ ಸಿಗಬಹುದು. ಆದರೆ ತಾನೇ ಸ್ವತಃ ಮುಳುಗದೆ ಇದ್ದರೆ ಭಗವಂತ ಕಾಣಿಸಿಕೊಳ್ಳುವುದಿಲ್ಲ. ಮುಳುಗಿದ ನಂತರ ಆತ ತಾನಾಗಿಯೇ ತೋರಿಸಿಕೊಂಡರೆ ಆಗ ಸಂದೇಹ ನಿವೃತ್ತಿಯಾಗುತ್ತದೆ. ಲೆಕ್ಕವಿಲ್ಲದಷ್ಟು ಪುಸ್ತಕ ಓದು, ಬಾಯಿಂದ ಬೇಕಾದಷ್ಟು ಶ್ಲೋಕಗಳನ್ನು ಹೇಳು. ವ್ಯಾಕುಲನಾಗಿ ಮುಳುಗು ಹಾಕದೆ ಇದ್ದರೆ ಆತನ ಸಾಕ್ಷಾತ್ಕಾರ ಸಾಧ್ಯವಿಲ್ಲ. ಬರೇ ಪಾಂಡಿತ್ಯದಿಂದ ಮನುಷ್ಯನನ್ನು ಮುಗ್ಧಗೊಳಿಸಲು ಸಾಧ್ಯ, ಆದರೆ ಆತನನ್ನು ಪಡೆಯಲು ಸಾಧ್ಯವಿಲ್ಲ.

ಪ್ರಥಮದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು, ಅತ್ಯಂತ ನಿರ್ಜನಪ್ರದೇಶದಲ್ಲಿ ಇದ್ದು ಸಾಧನೆಮಾಡಬೇಕು. ಅಶ್ವತ್ಥವೃಕ್ಷ ಇನ್ನೂ ಸಸಿಯಾಗಿರುವಾಗ ಆಡು, ದನಕರುಗಳು ಅದನ್ನು ತಿಂದು ನಾಶಮಾಡದೆ ಇರಲಿ ಎಂದು ಅದರ ಸುತ್ತಲೂ ಬೇಲಿ ಹಾಕುತ್ತಾರೆ. ಆದರೆ ಬುಡ ದಪ್ಪವಾಯಿತೆಂದರೆ ಬೇಲಿಯ ಆವಶ್ಯಕತೆಯೇನಿರದು. ಆಗ ತೆಗೆದುಕೊಂಡು ಹೋಗಿ ಆನೆಯನ್ನು ಕಟ್ಟಿದರೂ ಅದಕ್ಕೆ ಏನೂ ಆಗದು. ನಿರ್ಜನಪ್ರದೇಶದಲ್ಲಿ ಸಾಧನೆ ಮಾಡಿ ಭಗವಂತನ ಪಾದಪದ್ಮಗಳನ್ನು ಭಕ್ತಿಯಿಂದ ಪೂಜಿಸಿ, ಶಕ್ತಿಯನ್ನು ವೃದ್ಧಿಮಾಡಿಕೊಂಡು ಮನೆಗೆ ಹೋಗಿ ಸಂಸಾರದಲ್ಲಿ ಇದ್ದರೆ ಕಾಮ ಕಾಂಚನ ನಿನ್ನನ್ನು ಏನೂ ಮಾಡಲಾರವು.

ಸಂಸಾರದಲ್ಲಿ ಇದ್ದು ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾದರೆ ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಂಡಿರಬೇಕು, ಇನ್ನೊಂದು ಕೈಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿರಬೇಕು. ಯಾವಾಗ ಕೆಲಸಕಾರ್ಯಗಳಿಂದ ಬಿಡುಗಡೆ ಹೊಂದುವೆಯೋ ಆಗ ಎರಡು ಕೈಗಳಿಂದಲೂ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಳ್ಳಬೇಕು. ನಿರ್ಜನ ಪ್ರದೇಶದಲ್ಲಿ ವಾಸಮಾಡಬೇಕು, ಕೇವಲ ಆತನ ಚಿಂತನೆ ಮತ್ತು ಸೇವೆಯಲ್ಲಿಯೇ ನಿರತನಾಗಿರಬೇಕು.

ಜ್ಞಾನೋದಯವಾದರೆ ಆತ ದೂರದಲ್ಲಿದ್ದಾನೆ ಎಂಬುದಾಗಿ ಅನಿಸುವುದಿಲ್ಲ. ಆಗ ಅವನು ಅವನಾಗಿ ತೋರುವುದಿಲ್ಲ. ಇವನಾಗಿಬಿಡುತ್ತಾನೆ. ಆಗ ಅವನನ್ನು ಹೃದಯದ ಮಧ್ಯದಲ್ಲಿ ನೋಡಬಹುದು. ಆತ ಎಲ್ಲರ ಅಂತರ್ಯದಲ್ಲಿಯೂ ಇದ್ದಾನೆ. ಅರಸಿದವರಿಗೆ ದೊರೆತುಬಿಡುತ್ತಾನೆ.

ವ್ಯಾಕುಲನಾಗಿ ಭಗವತಿಯನ್ನು ಕರೆ. ಆಕೆಯ ದರ್ಶನ ದೊರೆತರೆ ವಿಷಯರಸ ಒಣಗಿಹೋಗಿಬಿಡುತ್ತದೆ; ಕಾಮಕಾಂಚನ ಆಸಕ್ತಿ ಎಲ್ಲಾ ಬಿಟ್ಟು ಹೋಗುತ್ತದೆ. ಆಕೆ ನಿನ್ನ ಸ್ವಂತ ತಾಯಿ ಎಂಬ ಬೋಧೆ ಉಂಟಾದರೆ ಈ ಕ್ಷಣವೆ ಹಾಗಾಗಿಬಿಡುತ್ತದೆ.

ಮನುಷ್ಯನಿಗೆ ಭಗವಂತನಲ್ಲಿ ವಿಶ್ವಾಸವಿಲ್ಲ; ಅದಕ್ಕಾಗಿಯೇ ಆತ ಅಷ್ಟೊಂದು ದುಃಖವನ್ನು ಅನುಭವಿಸುವುದು. ಜನ ಹೇಳುತ್ತಾರೆ, 'ಗಂಗಾಸ್ನಾನದ ಸಮಯದಲ್ಲಿ ಜನರ ಪಾಪಗಳೆಲ್ಲ ಅವರವರನ್ನು ಬಿಟ್ಟು ಗಂಗೆಯ ತೀರದಲ್ಲಿರುವ ಗಿಡಗಳ ಮೇಲೆ ಕುಳಿತುಕೊಂಡಿರುತ್ತವೆ. ಸ್ನಾನ ಮುಗಿಸಿ ದಡಕ್ಕೆ ಬರುವುದೇ ತಡ ಒಡನೆಯೇ ಅವು ನೆಗೆದು ಅವರವರ ಹೆಗಲನ್ನು ಹತ್ತಿಬಿಡುತ್ತವೆ' ಎಂದು. ದೇಹತ್ಯಾಗದ ಸಮಯದಲ್ಲಿ ಭಗವಂತನ ಚಿಂತನೆ ಬರಬೇಕಾದರೆ, ಬದುಕಿರುವಾಗಲೆ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಿದ್ಧತೆ – ಅಭ್ಯಾಸಯೋಗ, ಭಗವಚ್ಚಿಂತನೆಯ ಅಭ್ಯಾಸವನ್ನು ಮಾಡಿದ್ದರೆ ಜೀವನದ ಕೊನೆಯ ದಿನವೂ ಆತನ ಭಾವನೆ ಮನಸ್ಸಿನಲ್ಲಿ ಏಳುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ

ನೋವಿನಿಂದ ಬಿಡುಗಡೆ

ಸ್ವಾಮಿ ನಿತ್ಯಸ್ಥಾನಂದ

ನೋವು ಎಂಬುದು ಜೀವನದಲ್ಲಿ ಅನಿವಾರ್ಯವಾಗಿ ಎದುರಿಸಲೇಬೇಕಾದ ಮಾನಸಿಕ ಅವಸ್ಥೆಗಳಲ್ಲಿ ಒಂದು. ವಿವಿಧ ಕಾರಣಗಳಿಂದ, ವಿವಿಧ ಬಗೆಗಳಲ್ಲಿ ಗೋಚರಿಸುವ ನೋವುಗಳು ಹಲವು ರೀತಿಯ ಭಾವವಿಕಾರಗಳನ್ನು ತಂದೊಡ್ಡಿ, ವ್ಯಕ್ತಿಯ ಸ್ವಭಾವಕ್ಕನುಗುಣವಾದ ಪ್ರತಿಕ್ರಿಯೆಗಳನ್ನು ಹೊರಹೊಮ್ಮಿಸುತ್ತವೆ. ಈ ನೋವುಗಳನ್ನು ವೇದಾಂತ, ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತ, ಅವುಗಳನ್ನು ಸರಿಯಾದ ರೀತಿಯಲ್ಲಿ ಎದುರಿಸುವುದರಿಂದ ಸಮಸ್ಯೆಗಳನ್ನು ಹೇಗೆ ನಿವಾರಿಸಿಕೊಳ್ಳಬಹುದು ಎಂಬುದನ್ನು ಇಲ್ಲಿ ನಿರೂಪಿಸಲಾಗಿದೆ. ಲೇಖಕರು ಈ ಪತ್ರಿಕೆಯ ಮೊದಲ ಸಂಪಾದಕರಾಗಿದ್ದರು; ಪ್ರಸ್ತುತ ದಾವಣಗೆರೆ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.

ಎಲ್ಲ ತತ್ತ್ವಶಾಸ್ತ್ರಗಳೂ ದುಃಖನಿವೃತ್ತಿಗಾಗಿಯೇ ಪ್ರಾರಂಭವಾದಂತೆ ಕಂಡುಬರುತ್ತದೆ. ಭಗವಾನ್ ಬುದ್ಧನು **ದುಃಖಂ ದುಃಖಂ ಸರ್ವಂ ದುಃಖಂ** ಎಂದು ಹೇಳಿ ಈ ದುಃಖನಿವಾರಣೆಯ ಉಪಾಯವನ್ನು ತೋರಿಸಿಕೊಟ್ಟನು. **ದುಃಖತ್ರಯಾಭಿಘಾತಾತ್ ಜಿಜ್ಞಾಸಾ** — 'ಮೂರು ಬಗೆಯ ದುಃಖಗಳಿರುವುದರಿಂದ ತತ್ತ್ವಜಿಜ್ಞಾಸೆಯನ್ನು ಮಾಡಬೇಕಾಗಿದೆ' ಎಂಬ ಹೇಳಿಕೆಯೊಂದಿಗೆ ಸಾಂಖ್ಯದರ್ಶನವು ಪ್ರಾರಂಭವಾಗುತ್ತದೆ. **ದುಃಖಮೇವ ಸರ್ವಂ ವಿವೇಕಿನಾಂ** ಎಂದು 'ಯೋಗಸೂತ್ರಗಳು' ಸಾರುತ್ತವೆ. **ಅನಿತ್ಯಮಸುಖಂ ಲೋಕಂ ಇಮಂ ಪ್ರಾಪ್ಯ ಭಜಸ್ವ ಮಾಂ** — 'ಅನಿತ್ಯವೂ ಅಸುಖವೂ ಆದ ಈ ಪ್ರಪಂಚವನ್ನು ಪಡೆದು ನನ್ನನ್ನು ಭಜಿಸು' ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ. **ತರತಿ ಶೋಕಂ ಆತ್ಮವಿತ್** — 'ಆತ್ಮವನ್ನರಿತವನು ದುಃಖವನ್ನು ಮೀರಿ ಹೋಗುತ್ತಾನೆ' ಎಂದು ಉಪನಿಷತ್ತುಗಳು ಘೋಷಿಸುತ್ತವೆ. ಹಿಂದೂ ಧರ್ಮದ ಆತ್ಯಂತಿಕ ಗುರಿಯಾದ ಮೋಕ್ಷವನ್ನು **ಆತ್ಯಂತಿಕ ದುಃಖನಿವೃತ್ತಿ** — ದುಃಖದಿಂದ ಸಂಪೂರ್ಣ ಬಿಡುಗಡೆ ಹೊಂದುವುದು — ಎಂದು ವಿವರಿಸಲಾಗಿದೆ. ಪಾಶ್ಚಾತ್ಯ ಚಿಂತಕರೂ ಮೂರು ಬಗೆಯ ದುಃಖಗಳನ್ನು ಗುರುತಿಸುತ್ತಾರೆ: ೧) **ಅನಿಶ್ಚಿತತೆ:** ಈ ಪ್ರಪಂಚದಲ್ಲಿ ಯಾವುದೂ ನಿಶ್ಚಿತವಲ್ಲ, ಯಾವಾಗ ಏನಾಗುತ್ತದೆ, ಹೇಗಾಗುತ್ತದೆ ಎಂದು ನಿರ್ದಿಷ್ಟವಾಗಿ ಯಾವುದರ ಬಗ್ಗೆಯೂ ಹೇಳುವಂತಿಲ್ಲ. ಮಳೆಯ ಭರವಸೆಯಿಂದ ರೈತನು ಬೆಳೆ ಬೆಳೆಯುತ್ತಾನೆ — ಅತಿವೃಷ್ಟಿಯೊ, ಅನಾವೃಷ್ಟಿಯೋ ಆಗಿ ಎಲ್ಲವೂ ನಾಶವಾಗಬಹುದು. ಯಾವಾಗ ಏನು ಖಾಯಿಲೆ ಬರುತ್ತದೆ, ಬಂದ ಖಾಯಿಲೆ ಗುಣವಾಗುವುದೆ ಇಲ್ಲವೆ ಎಂದು ವೈದ್ಯರಿಗೂ ಕೂಡ ನಿಶ್ಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಹೀಗೆ ಮನುಷ್ಯನು ಅನೇಕ ಅನಿಶ್ಚಿತ ಪರಿಸ್ಥಿತಿಗಳಲ್ಲಿ ತೊಳಲಾಡಬೇಕಾಗುತ್ತದೆ. ೨) **ಅಸಹಾಯಕತೆ** (powerlessness): ಅನೇಕ ಸನ್ನಿವೇಶಗಳಲ್ಲಿ ಮನುಷ್ಯನು ಅಸಹಾಯಕನಾಗುತ್ತಾನೆ. ಇದು ಸರಿಯಿಲ್ಲ, ಇದು ಬದಲಾಗಲೇಬೇಕು ಎಂದು ತಿಳಿದಿದ್ದರೂ ತಾನೇನೂ ಮಾಡಲಾಗದ ಪರಿಸ್ಥಿತಿಯಲ್ಲಿರುತ್ತಾನೆ. ಭ್ರಷ್ಟಾಚಾರವನ್ನು ಮಾಡಿಯೂ ಅದರ ದುಷ್ಪರಿಣಾಮವನ್ನು ಅನುಭವಿಸುತ್ತ ಸುಮ್ಮನಿರಬೇಕಾಗುತ್ತದೆ. ಮಕ್ಕಳು ಕೆಟ್ಟದಾರಿ ಹಿಡಿದಿದ್ದರೂ ಅವರನ್ನು ಬದಲಾಯಿಸಲಾಗದೆ ಸಂಕಟಪಡಬೇಕಾಗುತ್ತದೆ. ವ್ಯಕ್ತಿಯು ತನ್ನ ಪರಿಸ್ಥಿತಿಯ ಬಗ್ಗೆಯೂ

ಅಸಹಾಯಕನಾಗಿರುತ್ತಾನೆ. ಈ ರೀತಿಯ ಅಸಹಾಯಕ ಪ್ರಜ್ಞೆ ತುಂಬ ವೇದನಾಪ್ರದವಾದುದು. ೩) **ಕೊರತೆ**(scarcity): ಅನೇಕರು ಮೂಲಭೂತ ಆವಶ್ಯಕತೆಗಳ ಕೊರತೆಯಿಂದ ನರಳುತ್ತಾರೆ. ಎಲ್ಲ ಆವಶ್ಯಕತೆಗಳಿದ್ದರೂ ಮೌಲ್ಯಗಳ ಕೊರತೆಯಿಂದ ಮತ್ತನೇಕರು ದುಃಖಿಸುತ್ತಾರೆ. ಈಗಿನ ಸಾಮಾಜಿಕ ಸಂದರ್ಭದಲ್ಲಿ ಎಲ್ಲಕ್ಕಿಂತ ಅಧಿಕವಾಗಿ ಮಾನವೀಯ ಸಂಬಂಧಗಳ ಕೊರತೆಯು ಎದ್ದು ಕಾಣುತ್ತದೆ. ಪ್ರೀತಿ ಸಹಾನುಭೂತಿಗಳ ಕೊರತೆ, ಪ್ರಶಂಸೆಯ ಕೊರತೆ, ಗೌರವ ಮಾನ್ಯತೆಗಳ ಕೊರತೆ — ಹೀಗೆ ಅನೇಕ ಬಗೆಯ ಕೊರತೆಗಳು ಮನುಷ್ಯನನ್ನು ಕಾಡುತ್ತವೆ. ಈ ತಾಪತ್ರಯಗಳಿಂದ ಬಿಡುಗಡೆ ಸಾಧ್ಯವೆ? ಇವನ್ನು ಮೀರಿ ಹೋಗಲು ಸಾಧ್ಯವೆ? ಈ ಪ್ರಶ್ನೆಗಳೇ ತತ್ತ್ವಾನ್ವೇಷಣೆಗೆ ನಾಂದಿಯಾಗಿವೆ. ನೋವೇ ನವಾನ್ವೇಷಣೆಗೆ ನಾಂದಿ. ಈ ಪ್ರಪಂಚದಲ್ಲಿ ಬರಿ ಸುಖವೇ ಇದ್ದಿದ್ದರೆ ಸತ್ಯಾನ್ವೇಷಣೆ ಇರುತ್ತಿತ್ತೆ?

ಮೊದಲೇ ಸೂಚಿಸಿರುವಂತೆ ಹಿಂದೂಧರ್ಮದ ಪ್ರಕಾರ, ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಎಂಬ ಮೂರು ಬಗೆಯ ದುಃಖಗಳಿವೆ (ದುಃಖತ್ರಯ). ಇತರ ವ್ಯಕ್ತಿಗಳು, ಪ್ರಾಣಿಗಳ ಮೂಲಕ ಉಂಟಾಗುವ ದುಃಖವನ್ನು **ಆಧಿಭೌತಿಕ** ದುಃಖವೆನ್ನುತ್ತಾರೆ. ನಮಗೆ ಸೊಳ್ಳೆಕಾಟ, ಇಲಿಕಾಟ, ಮುಂತಾದವು ಯಾವಾಗಲೂ ಇರುವವೇ. ಅನೇಕ ವ್ಯಕ್ತಿಗಳೂ ನಮಗೆ ಅನೇಕ ರೀತಿಯಲ್ಲಿ ತೊಂದರೆ ಕೊಡುತ್ತಾರೆ. ಇವೆಲ್ಲ ಸ್ವಾಭಾವಿಕ. ಸ್ವಾಭಾವಿಕವಾದುದನ್ನು ಒಪ್ಪಿಕೊಳ್ಳಬೇಕು. ಅನಿವಾರ್ಯವಾದುದನ್ನು ಅನಿವಾರ್ಯವಾಗಿ ಸ್ವೀಕರಿಸಬೇಕು. ಇನ್ನೊಂದು ಬಗೆಯ ದುಃಖ **ಆಧಿದೈವಿಕ** — ಪ್ರಕೃತಿವಿಕೋಪದಿಂದ ಹವಾಮಾನ ವ್ಯತ್ಯಯದಿಂದ ಆಗುವ ದುಃಖಗಳು. ಇವೂ ಸ್ವಾಭಾವಿಕ ಮತ್ತು ಅನಿವಾರ್ಯವಾದುದರಿಂದ ಸಹಿಸಿಕೊಳ್ಳಬೇಕು. ಈ ವಿಷಯಗಳಲ್ಲಿ ಸಹನೆ ಮತ್ತು ಸ್ವೀಕಾರ ಮನೋಭಾವಗಳಿದ್ದರೆ ನೋವಿನ ತೀವ್ರತೆ ಕಡಿಮೆಯಾಗುತ್ತದೆ. ಇನ್ನೊಂದು ಸಾಮರ್ಥ್ಯವನ್ನು ನಾವು ಬೆಳೆಸಿಕೊಳ್ಳಬೇಕು: ನೋವನ್ನು ವಿಷಯೀಕರಿಸಿ ನೋಡುವುದು. ನಮಗೆ ಯಾವುದೇ ಬಗೆಯ ನೋವುಂಟಾದಾಗಲೂ, 'ಏನೀ ನೋವು? ಇದಕ್ಕೆ ಕಾರಣವೇನು? ಇದು ಯಾವುದಕ್ಕೆ ಸಂಬಂಧಪಟ್ಟುದು?' — ಈ ರೀತಿ ವಿಶ್ಲೇಷಣೆ ಮಾಡುತ್ತ ಹೋಗುವುದು. ಉದಾಹರಣೆಗೆ ಯಾರೋ ಮಾತಿನ ಮೂಲಕವೋ ವರ್ತನೆಯ ಮೂಲಕವೋ ನನ್ನ ಮನಸ್ಸಿಗೆ ನೋವನ್ನುಂಟುಮಾಡಿರುತ್ತಾರೆ, ಹೀಗಾಯಿತಲ್ಲ ಎಂದು ಮನಸ್ಸು ಕೊರಗುತ್ತಿರುತ್ತದೆ. ಎಷ್ಟೇ ಪ್ರಯತ್ನಿಸಿದರೂ ಮನಸ್ಸನ್ನು ಬೇರೆಡೆಗೆ ಹರಿಸಲಾಗುವುದಿಲ್ಲ. ತಾತ್ಕಾಲಿಕವಾಗಿ ಹರಿಸಿದರೂ ಮತ್ತೆ ಮನಸ್ಸು ಆ ಕಡೆಯೇ ಜಾರುತ್ತದೆ. ನನಗೇನೂ ನೋವೇ ಇಲ್ಲ ಎಂಬ ಧೋರಣೆಯೂ ಉಚಿತವಲ್ಲ. ಆಗ ನನ್ನಲ್ಲಿರುವ ನೋವನ್ನು ಗುರುತಿಸಬೇಕು, ಒಪ್ಪಿಕೊಳ್ಳಬೇಕು. ಅದರ ಕಾರಣವನ್ನು ನಾನು ವಿಶ್ಲೇಷಿಸಿ ನೋಡಿದಾಗ, ಇಷ್ಟು ಸಾಮಾನ್ಯ ವಿಷಯಕ್ಕೆ ನಾನು ದುಃಖಿಸಬೇಕೆ ಎಂದೆನಿಸುತ್ತದೆ. ನೋವನ್ನು ಗುರುತಿಸುವುದು, ವಿಶ್ಲೇಷಿಸುವುದು ಎಂದರೆ ಅದನ್ನು ಕುರಿತು ಮೆಲಕುಹಾಕುವುದರಲ್ಲಿ ಭಾವನಾತ್ಮಕ ಪ್ರತಿಕ್ರಿಯೆ ಇರುತ್ತದೆ. ಆದರೆ ವಿವೇಕಪೂರ್ಣ ವಿಶ್ಲೇಷಣೆಯಲ್ಲಿ ಭಾವಕ್ಕೆ ಎಡೆಯಿರುವುದಿಲ್ಲ.

ಮೂರನೆಯದು **ಆಧ್ಯಾತ್ಮಿಕ** ದುಃಖ. ಇದು ತನಗೆ ತಾನೇ ಸೃಷ್ಟಿಸಿಕೊಳ್ಳುವ, ತನಗೆ ತಾನೇ ಉಂಟುಮಾಡಿಕೊಳ್ಳುವ ನೋವು. ನಮ್ಮ ಅಚಾತುರ್ಯದಿಂದಲೂ ಅವಿವೇಕದಿಂದಲೂ ಅಹಂಕಾರದ ದೆಸೆಯಿಂದಲೂ ಅಜ್ಞಾನ-ವ್ಯಾಮೋಹದಿಂದಲೂ ನಾವು ಎಷ್ಟೋ ದುಃಖಗಳನ್ನೂ ಸಮಸ್ಯೆಗಳನ್ನೂ ನಮ್ಮ ಮೇಲೆ ಹೇರಿಕೊಳ್ಳುತ್ತೇವೆ — ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆತಂದಂತೆ. ಒಂದು ದೃಷ್ಟಿಯಿಂದ ನೋಡುವುದಾದರೆ ಎಲ್ಲ ದುಃಖಗಳೂ ಆಧ್ಯಾತ್ಮಿಕವೇ. ನಮ್ಮೊಳಗೆ ನಾವು ಸರಿಯಾಗಿದ್ದರೆ, ನಮ್ಮ ಅಂತರಂಗದಲ್ಲಿ ಬದಲಾವಣೆಯುಂಟಾದರೆ ಯಾವ ದುಃಖವೂ ನಮ್ಮನ್ನು ವಿಚಲಿತರನ್ನಾಗಿ ಮಾಡಲಾರದು. ಮನಸ್ಸು ಕಲ್ಲಿನಂತಿರಬೇಕು, ಹೃದಯ ಹೂವಿನಂತಿರಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ನನ್ನ ಒಪ್ಪಿಗೆಯಿಲ್ಲದೆ ಯಾರೂ ನನ್ನನ್ನು ದುಃಖಿಯನ್ನಾಗಿ ಮಾಡಲಾರರು.'' ಅನೇಕರು ತಮಗೇ ಅರಿವಿಲ್ಲದಂತೆ ದುಃಖವನ್ನು ಸ್ವಾಗತಿಸುತ್ತಾರೆ. ಏಕೆಂದರೆ ದುಃಖವು ಅವರ ಅಹಂಪ್ರಜ್ಞೆಗೆ ಆಶ್ರಯವಾಗಿರುತ್ತದೆ. ಅವರು ದುಃಖವಿಲ್ಲದೆ ಬದುಕಲಾರರು.

ನಿಜವಾಗಿಯೂ ನೋವು ನಮ್ಮೊಳಗೇ ಇರುತ್ತದೆ. ಹೊರಗಿನ ಸನ್ನಿವೇಶಗಳು ಅದನ್ನು ಕೆರಳಿಸುತ್ತವೆ. ನಮ್ಮೊಳಗೇ ನೋವಿದ್ದಾಗ ಹೊರಗಿನ ಸನ್ನಿವೇಶಗಳೆಲ್ಲವೂ ನೋವಿಗೆ ಕಾರಣವಾಗುತ್ತವೆ. ನಾವು ಒಳಗಿರುವ ಕಾರಣವನ್ನು ಹೊರಗೆ ಅರಸುತ್ತಿರುತ್ತೇವೆ. ನಮ್ಮೊಳಗೆ ನಾವು ಬದಲಾದರೆ ಹೊರಗಿನ ಸನ್ನಿವೇಶಗಳೆಲ್ಲವೂ ಬದಲಾದಂತೆ ಕಾಣುತ್ತವೆ. ಒಬ್ಬ ವ್ಯಕ್ತಿಯಿದ್ದ. ಅವನು ಒಂದು ದಿನ ವೈದ್ಯರೆಡೆಗೆ ಹೋಗಿ ತನ್ನ ದೇಹದ ಎಲ್ಲ ಭಾಗಗಳಲ್ಲಿಯೂ ನೋವಾಗುತ್ತಿದೆ ಎಂದು ತನ್ನ ಕಷ್ಟವನ್ನು ತೋಡಿಕೊಂಡನು. ವೈದ್ಯರಿಗೆ 'ಇದೆಂತಹ ಖಾಯಿಲೆಯಪ್ಪ!' ಎಂದು ಆಶ್ಚರ್ಯವಾಯಿತು. ತನ್ನ ತೋರ್ಬೆರಳಿನಿಂದ ಎಲ್ಲೆಲ್ಲಿ ನೋವಾಗುತ್ತಿದೆ ಎಂದು ತೋರಿಸಬೇಕೆಂದು ವೈದ್ಯರು ಅವನಿಗೆ ಹೇಳಿದರು. ಆತ ತನ್ನ ಬೆರಳಿನಿಂದ ದೇಹದ ಬೇರೆ ಬೇರೆ ಭಾಗಗಳನ್ನು ಪ್ರದರ್ಶಿಸುತ್ತ ತನ್ನ ನೋವನ್ನು ವ್ಯಕ್ತಪಡಿಸಿದನು. ಅವನು ನಿಜವಾಗಿಯೂ ನೋವನ್ನು ಅನುಭವಿಸುತ್ತಿರುವನು, ನಟಿಸುತ್ತಿಲ್ಲ ಎಂಬುದು ಸ್ಪಷ್ಟವೇ ಆಗಿತ್ತು. ವೈದ್ಯರು ಅವನನ್ನು ಎಲ್ಲ ಪರೀಕ್ಷೆಗಳಿಗೆ ಒಳಪಡಿಸಿ, ಕೊನೆಗೆ ತಿಳಿದುಬಂದದ್ದೇನೆಂದರೆ ಅವನ ನೋವು ಇರುವುದು ತನ್ನ ಬೆಟ್ಟಿನ ತುದಿಯಲ್ಲಿಯೇ! ಆ ನೋವನ್ನೇ ಆತ ಬೇರೆ ಬೇರೆ ಅಂಗಾಂಗಳ ಮೇಲೆ ಆರೋಪಿಸುತ್ತಿದ್ದ. ಹಾಗೆಯೇ ನಾವು ನಮ್ಮೊಳಗಿರುವ ನೋವನ್ನು ಹೊರಗಡೆ ಕಾಣುತ್ತೇವೆ.

ಆಧ್ಯಾತ್ಮಿಕ ದುಃಖ ಹೇಗೆ ಉಂಟಾಗಬಹುದೆಂಬುದಕ್ಕೆ ಒಂದು ಉದಾಹರಣೆಯನ್ನು ನೀಡಬಹುದು. ಪ್ರಸಿದ್ಧ ಅನ್ವಯಾತ್ಮಕ ಮನಃಶಾಸ್ತ್ರಜ್ಞರಾದ (positive psychologist) ಮಾರ್ಟಿನ್ ಸೆಲಿಗ್ಮನ್ ABC ಪರಿಣಾಮದ ಕುರಿತು ಹೇಳುತ್ತಾರೆ. ಒಂದು ವಿರುದ್ಧ ಸನ್ನಿವೇಶ (adversity) ಉಂಟಾಗುತ್ತದೆ. ಅದಕ್ಕೆ ನಿಷೇಧಾತ್ಮಕವಾಗಿ ಪ್ರತಿಕ್ರಿಯಿಸುತ್ತ, ಅದಕ್ಕೆ ಒಂದು ಕಾರಣವನ್ನು ಕಲ್ಪಿಸಿಕೊಂಡು ಅದರ ಬಗ್ಗೆಯೇ ಚಿಂತಿಸತೊಡಗುತ್ತೇನೆ. ಮುಂದೆ ಅದೊಂದು ನಂಬಿಕೆ (belief) ಆಗುತ್ತದೆ. ಕ್ರಮೇಣ ಆ ನಂಬಿಕೆ ದೃಢವಾಗಿ ಅದೇ ನನ್ನ ಪಾಲಿಗೆ ಸತ್ಯವಾಗುತ್ತದೆ. ಇದರ ಪರಿಣಾಮವಾಗಿ (consequence) ಮನಸ್ಸಿಗೆ ನೋವುಂಟಾಗುತ್ತದೆ. ಆ ನೋವು ಯಾವಾಗಲೂ ಮನಸ್ಸನ್ನು ಕೊರೆಯುತ್ತಿರುತ್ತದೆ. ಅದರ ಬಗ್ಗೆ ಯೋಚಿಸಿದಷ್ಟೂ ನೋವು ಅಧಿಕವಾಗುತ್ತ ಹೋಗುತ್ತದೆ. ಉದಾಹರಣೆಗೆ ನಾನು ಯಾರ ಮನೆಗೋ ಹೋದಾಗ ನನಗೆ ಉಚಿತವಾದ ಆತಿಥ್ಯ ದೊರೆಯುವುದಿಲ್ಲ (A). ಯಾರೋ ನನ್ನ ಬಗ್ಗೆ ಚುಚ್ಚಿಕೊಟ್ಟಿರಬೇಕು, ಅದಕ್ಕೇ ಇವರು ನನಗೆ ಇಷ್ಟೊಂದು ಅನಾದರ ತೋರಿಸುತ್ತಿರುವರು ಎಂದು ಭಾವಿಸಿ, ಅದೊಂದು ನಂಬಿಕೆ (B)ಯಾಗುತ್ತದೆ. ಈ ರೀತಿ ಚುಚ್ಚಿಕೊಟ್ಟ ವ್ಯಕ್ತಿ ಯಾರಿರಬಹುದು ಎಂದು ಯೋಚಿಸುತ್ತಾ ಯಾರೋ ನನಗಾಗದ ವ್ಯಕ್ತಿ ಇದಕ್ಕೆ ಬಲಿಯಾಗುತ್ತಾನೆ. ಇದರ ಪರಿಣಾಮಗಳು (C) ಏನಿರಬಹುದೆಂಬುದನ್ನು ನೀವೇ ಯೋಚಿಸಬಹುದು. ಇದು ಬೇರೆ ಬೇರೆ ಸನ್ನಿವೇಶಗಳಿಗೆ ಅನ್ವಯವಾಗುತ್ತದೆ.

ವೈಯಕ್ತಿಕ ದೃಷ್ಟಿಯಿಂದ ನೋಡಿದರೆ ಮೂರು ರೀತಿಯ ನೋವನ್ನು ನಾವು ಗುರುತಿಸಬಹುದು. ಭೌತಿಕ ನೋವು, ಮಾನಸಿಕ ನೋವು ಮತ್ತು 'ನಾನು'ವಿನ ನೋವು. ಭೌತಿಕವಾಗಿ ನಾವೆಲ್ಲರೂ ದೈಹಿಕ ವೇದನೆ, ಖಾಯಿಲೆ ಮುಂತಾದವುಗಳನ್ನು ಅನುಭವಿಸುತ್ತೇವೆ. ಇವು ಮಾನಸಿಕ ಸ್ವಾಸ್ಥ್ಯವನ್ನು ಕೆಡಿಸುತ್ತದೆ. ಮನಸ್ಸು ಹೆಚ್ಚು ಶಕ್ತಿಯುತವಾದುದು, ಅದು ದೇಹದ ಮೇಲೆ ಪರಿಣಾಮವನ್ನು ಉಂಟುಮಾಡುತ್ತದೆ ಎಂದೆಲ್ಲ ಎಷ್ಟೇ ಹೇಳಿದರೂ ದೇಹವೂ ಮನಸ್ಸಿನ ಮೇಲೆ ಪರಿಣಾಮವನ್ನು ಉಂಟುಮಾಡುವುದನ್ನು ನಾವು ಅಲ್ಲಗಳೆಯುವಂತಿಲ್ಲ. ನಾವು ವಾಸ್ತವವನ್ನು ಒಪ್ಪಿಕೊಳ್ಳಬೇಕು, ಬರಿ ಸಿದ್ಧಾಂತವನ್ನು ನೆಚ್ಚಿಕೊಂಡಿರುವಂತಿಲ್ಲ. ದೇಹ ಮನಸ್ಸುಗಳೆರಡೂ ಪ್ರಕೃತಿಯ ಉತ್ಪನ್ನಗಳು, ಮತ್ತು ಇವುಗಳ ನಡುವೆ ಪರಸ್ಪರ ಪರಿಣಾಮ ಸ್ವಾಭಾವಿಕವಾದುದು. ಪ್ರಕೃತಿಯಲ್ಲಿ ಎಲ್ಲವೂ ಕಾರ್ಯಕಾರಣ ಸರಪಳಿಯಿಂದ ಬದ್ಧವಾಗಿವೆ. ನಾವು ಇವುಗಳನ್ನು ಮೀರಿ ಹೋಗಬೇಕಷ್ಟೆ. ನಾವು ಇವುಗಳಿಂದ ಬೇರೆಯಾಗಿ ನಿಂತಾಗ, ಅವುಗಳು ಯಾವ ಸ್ಥಿತಿಯಲ್ಲೇ ಇರಲಿ, ಅವುಗಳ ಪ್ರಭಾವದಿಂದ ನಾವು ತಪ್ಪಿಸಿಕೊಳ್ಳಬಹುದು.

ನಿಜವಾಗಿಯೂ ಮಾನಸಿಕ ನೋವೇ ನಿಜವಾದ ನೋವು. ಮಾನವನು ನಾಗರಿಕತೆಯಲ್ಲಿ ಮುಂದುವರಿದಂತೆಲ್ಲ, ಮಾನಸಿಕ ನೋವು ಭೌತಿಕ ನೋವಿಗಿಂತ ಪ್ರಬಲವಾಗುತ್ತದೆ. ಪುರಾತನ ಕಾಲದಲ್ಲಿ ಈಗಿನ ಸಂದರ್ಭಗಳಲ್ಲಿ ಕಂಡುಬರುವ ಮಾನಸಿಕ ವ್ಯಾಧಿಗಳು ಅಷ್ಟೊಂದು ತೀವ್ರವಾಗಿಯೂ ವ್ಯಾಪಕವಾಗಿಯೂ ಇದ್ದಂತೆ ಕಂಡುಬರುವುದಿಲ್ಲ. ಆಗ ಮನುಷ್ಯನಿಗೆ ಭೌತಿಕ ಸಮಸ್ಯೆಗಳೇ ಪ್ರಧಾನವಾಗಿದ್ದವು. ಭೌತಿಕ ಉಳಿವಿಗಾಗಿ ಹೋರಾಟವೇ ಅವನ ಎಲ್ಲ ಗಮನವನ್ನೂ ಸೆಳೆದಿದ್ದವು. ಹೆಚ್ಚಾಗಿ ಅವನು ಭೌತಿಕ ಹಂತದಲ್ಲಿಯೇ ವಾಸಿಸುತ್ತಿದ್ದ. ನಾಗರಿಕತೆ ಮತ್ತು ಸಂಸ್ಕೃತಿ ಬೆಳೆದಂತೆಲ್ಲ ಭೌತಿಕ ನೋವು ಮಾನಸಿಕ ಹಂತಕ್ಕೆ ವರ್ಗಾಯಿಸಲ್ಪಟ್ಟಿತು. ಹಾಗಾಗಿ ಈಗ ಮಾನಸಿಕ ರೋಗಿಗಳು ಅಧಿಕವಾಗುತ್ತಿದ್ದಾರೆ. ಒಂದು ದೃಷ್ಟಿಯಿಂದ ನೋಡಿದರೆ ಇದು ಪ್ರಗತಿಯ ಚಿಹ್ನೆ, ಮನುಷ್ಯನು ಭೌತಿಕ ಹಂತದಿಂದ ಮಾನಸಿಕ ಹಂತಕ್ಕೆ ಏರುತ್ತಿದ್ದಾನೆ. ಅಂದಮಾತ್ರಕ್ಕೆ ಭೌತಿಕ ಖಾಯಿಲೆಗಳು ಕಡಿಮೆಯಾಗಿವೆ ಎಂದೇನೂ ಅಲ್ಲ. ಮಾನಸಿಕ ರೋಗದಿಂದಾಗಿ ಭೌತಿಕ ರೋಗಗಳೂ ಜಾಸ್ತಿಯಾಗುತ್ತಿವೆ. ಹೆಚ್ಚಿನ ಖಾಯಿಲೆಗಳಿಗೆ ಮನಸ್ಸೇ ಮೂಲವೆಂಬುದು ಈಗ ಹೆಚ್ಚು ಪ್ರಚಲಿತವಾಗಿರುವ ವಿಷಯ.

ಮಾನಸಿಕ ರೋಗಗಳಲ್ಲಿ ಈಗ ಹೆಚ್ಚು ವ್ಯಾಪಕವಾಗಿ ಕಂಡುಬರುವುದು ದುಗುಡತೆ (depression). ಅಮೇರಿಕದಲ್ಲಿ ಆರರಲ್ಲಿ ಒಬ್ಬನು ದುಗುಡತೆಯಿಂದ ನರಳುತ್ತಿರುವನಂತೆ. ಅನೇಕರು ಇದರಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಷ್ಟೇ ಅಲ್ಲದೆ ಇದು ಇನ್ನು ಅನೇಕ ಮಾನಸಿಕ ರೋಗಗಳಿಗೆ ಎಡೆಮಾಡಿಕೊಡುತ್ತದೆ. ಯುವಕರನೇಕರು ಜೀವನ ಯಾಂತ್ರಿಕತೆಯಿಂದಾಗಿ, ಉನ್ನತ ಆದರ್ಶಗಳ ಕೊರತೆಯಿಂದಾಗಿ ದುಗುಡತೆಗೆ ಒಳಗಾಗುತ್ತಾರೆ. ವಯಸ್ಸಾದವರು ಯಾವ ಕೆಲಸವೂ ಇಲ್ಲದೆ, ಎಲ್ಲರಿಗೂ ಬೇಡದವರಾಗಿ, ಜೀವನವು ನಿರರ್ಥಕವೆನಿಸಿ ದುಗುಡತೆಗೆ ಒಳಗಾಗುತ್ತಾರೆ. ನಿರಾಶಾವಾದವೂ ಅಸಹಾಯಕ ಸ್ಥಿತಿಯೂ ದುಗುಡತೆಗೆ ಕಾರಣವಾಗುತ್ತದೆ. ಏನೋ ಒಂದು ಕೊರತೆ ಮನಸ್ಸನ್ನು ಕೊರೆಯುತ್ತಿದ್ದರೆ ದುಗುಡತೆ ಉಂಟಾಗುವುದು ಸಹಜ. ನಾವು ತುಂಬುಜೀವನವನ್ನು (ಅಂದರೆ ಹೊಟ್ಟೆತುಂಬಿಸುವುದಲ್ಲ) ಸಾರ್ಥಕ ಜೀವನವನ್ನು ನಡೆಸಬೇಕು. ಹಣ ನಮ್ಮ ಜೇಬನ್ನು ತುಂಬಿಸಬಹುದು, ಬೊಕ್ಕಸ ತುಂಬಿಸಬಹುದು, ಆದರೆ ಹೃದಯವನ್ನು ತುಂಬಿಸಲಾಗದು.

ಜೀವನದಲ್ಲಿ ಏನಾದರೂ ದುರ್ಘಟನೆ ನಡೆದಾಗ ದುಗುಡತೆ ಉಂಟಾಗುವುದು ವಿಶೇಷವೇನಲ್ಲ. ಇಂತಹ ದುಗುಡತೆ ಎಲ್ಲರಿಗೂ ಉಂಟಾಗುತ್ತದೆ. ಆದರೆ ತೀವ್ರ ದುಗುಡತೆ ಒಂದು ಮಾನಸಿಕ ರೋಗ, ಇದಕ್ಕೆ ಔಷಧೋಪಚಾರ ಬೇಕಾಗುತ್ತದೆ. ಇದಕ್ಕೆ ಯಾವ ಘಟನೆಯೂ ಬೇಕಾಗಿಲ್ಲ. ಎಲ್ಲ ಸರಿಯಾಗಿದ್ದರೂ, ಅನುಕೂಲತೆಗಳಿದ್ದರೂ, ಯಶಸ್ವೀ ಜೀವನ ನಡೆಸುತ್ತಿದ್ದರೂ ಅನೇಕರು ತೀವ್ರ ದುಗುಡತೆಯನ್ನು ಅನುಭವಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ಮನಃಶಾಸ್ತ್ರಜ್ಞರ ಪ್ರಕಾರ ಜೀವನದ ಅರ್ಥಹೀನತೆ, ನಿರಾಶಾವಾದ, ಅಸಹಾಯಕತೆ ಮುಂತಾದವುಗಳು. ಆಧ್ಯಾತ್ಮಿಕ

ದೃಷ್ಟಿಯಿಂದ ಹೇಳುವುದಾದರೆ, ಜೀವನಕ್ಕೆ ಒಂದು ಉನ್ನತ ಉದ್ದೇಶವಿಲ್ಲದಿರುವುದೇ ಇದಕ್ಕೆ ಕಾರಣ. ಕೇವಲ ಗಳಿಸುವುದು, ಉಳಿಸುವುದು, ಮತ್ತು ಬಳಸುವುದು – ಇಡೀ ಜೀವನ ಇಷ್ಟಕ್ಕೇ ಸೀಮಿತವಾದರೆ ನಾವು ಬೆಳೆಯುವುದು ಯಾವಾಗ? ಜೀವನ ಕಳೆಯುವುದಲ್ಲ, ಬಾಳುವುದು. ಟಿಚ್ ನ್ಹಾಟ್ ಹನ್ ಹೇಳುವಂತೆ, ನಾವು ಬಾಳುವುದಿಲ್ಲ , ಬಾಳುವ ಸಿದ್ಧತೆಯಲ್ಲಿಯೇ ಜೀವನ ಕಳೆದುಹೋಗುತ್ತದೆ. ಭರ್ತೃಹರಿ ಹೇಳುವಂತೆ, ನಾವು ಪ್ರಪಂಚಕ್ಕೆ ಭೋಗಿಸಲು ಬರುತ್ತೇವೆ, ಆದರೆ ಪ್ರಪಂಚವೇ ನಮ್ಮನ್ನು ಭೋಗಿಸುತ್ತದೆ. ತುಂಬ ಶೋಚನೀಯ ವಿಷಯವೇನೆಂದರೆ ಪ್ರಪಂಚದಲ್ಲಿರುವ ಪ್ರತಿಯೊಂದಕ್ಕೂ ಒಂದು ಅರ್ಥವಿದೆ, ಆದರೆ ಮನುಷ್ಯ ಜೀವನಕ್ಕೆ ಯಾವ ಅರ್ಥವೂ ಇಲ್ಲದಂತಾಗಿದೆ. ಎಲ್ಲದಕ್ಕೂ ಅರ್ಥವನ್ನು ನೀಡುವವನೇ ಅರ್ಥಹೀನನಾಗಿದ್ದಾನೆ!

ಮಾರ್ಟಿನ್ ಸೆಲಿಗ್ಮನ್ ಪ್ರಕಾರ, ದುಗುಡತೆಯ ಮೂರು ಲಕ್ಷಣಗಳು: ನಿರುತ್ಸಾಹ (passivity) ನಿರ್ಣಯಸಾಮರ್ಥ್ಯದ ಕೊರತೆ (indecisiveness) ಮತ್ತು ಆತ್ಮಹತ್ಯಾಸಕ್ತಿ (suicidal action). ಅನೇಕರು ಅನೇಕ ಸಂದರ್ಭಗಳಲ್ಲಿ ನಿರುತ್ಸಾಹಿಗಳಾಗಿರುತ್ತಾರೆ – ತಮಸ್ಸಿನ ಪ್ರಭಾವದಿಂದಾಗಿ. ಆದರೆ ಅದು ತಾತ್ಕಾಲಿಕ. ಆದರೆ ದುಗುಡತೆ ಇರುವವರಿಗೆ ಅದೊಂದು ಜಾಡ್ಯವಾಗಿರುತ್ತದೆ. ಅವರಿಗೆ ಯಾವುದರಲ್ಲಿಯೂ ಆಸಕ್ತಿ ಇರುವುದಿಲ್ಲ. ಭೌತಿಕ ವಾಗಿಯೂ ನಿಷ್ಕ್ರಿಯರಾಗಿರುತ್ತಾರೆ. ಅವರು ಹೆಚ್ಚು ನಿಷ್ಕ್ರಿಯರಾದಷ್ಟೂ ಅವರ ದುಗುಡತೆ ಜಾಸ್ತಿಯಾಗುತ್ತಾ ಹೋಗುತ್ತದೆ. ದುಗುಡತೆ ಇರುವವರು ಪ್ರಯತ್ನಪೂರ್ವಕವಾಗಿ ಕಾರ್ಯನಿರತರಾಗಬೇಕು, ರಚನಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಸೋಮಾರಿತನಕ್ಕೆ ಅವಕಾಶವನ್ನೇ ಕೊಡಬಾರದು. ಈ ಪ್ರಪಂಚದಲ್ಲಿ ಯಾರೂ ಕೆಲಸಕ್ಕೆ ಬಾರದವರಲ್ಲ , ಎಲ್ಲರಲ್ಲೂ ಏನಾದರೂ ಒಂದು ಸಾಮರ್ಥ್ಯ ಇದ್ದೇ ಇರುತ್ತದೆ. ಹೀಗಾಗಿ ಯಾವುದೊಂದರಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದರಲ್ಲಿ ತಮ್ಮ ಜೀವನದ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು.

ಕಾರ್ಯನಿರತರಾಗಿರುವವರಲ್ಲಿಯೂ ಅನೇಕರು ದುಗುಡತೆಗೆ ಒಳಗಾಗುವುದನ್ನು ನೋಡುತ್ತೇವೆ. ಅವರು ಕೆಲಸವನ್ನು ಇಷ್ಟಪಟ್ಟು ಮಾಡುವುದಿಲ್ಲ , ಬಾಹ್ಯ ಒತ್ತಡದಿಂದಾಗಿ 'ಅಯ್ಯೋ ಮಾಡಬೇಕಲ್ಲ' ಎಂದು ಮಾಡುತ್ತಾರೆ. ಸಂತೋಷದಿಂದ ಕಾರ್ಯಕ್ಷೇತ್ರಕ್ಕೆ ಹೋಗಿ ಸಂತೃಪ್ತಿಯಿಂದ ಹಿಂದಿರುಗುವವರು ಎಷ್ಟು ಮಂದಿ? ಇಂತಹ ಕೆಲಸ ನಮ್ಮ ಜೀವನಕ್ಕೆ ನಿಜವಾಗಿಯೂ ಅರ್ಥವನ್ನು ನೀಡಲಾರದು. ಪ್ರತಿಯೊಂದು ಕೆಲಸಕ್ಕೂ ಒಂದು ಸಾಮಾಜಿಕ ಆಯಾಮ ಇರುತ್ತದೆ. ಒಂದು ಸರ್ಕಾರಿ ಕಛೇರಿಯಲ್ಲಿ ಕೆಲಸ ಮಾಡುವವನು ತನ್ನ ಜೀವನೋಪಾಯಕ್ಕಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಆತ ಭಾವಿಸಬಹುದು. ಆದರೆ ಅವನ ನಿಷ್ಠೆ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ಸಮಾಜದ ಅನೇಕರು ಅವನ ಕೆಲಸದ ಪ್ರಯೋಜನ ಪಡೆಯುತ್ತಿರುತ್ತಾರೆ. ತಾನು ಕೇವಲ ತನಗೋಸ್ಕರ ಕೆಲಸ ಮಾಡುತ್ತಿಲ್ಲ, ತನ್ನ ಕೆಲಸದ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಭಾವಿಸಿ ಆತ ಕೆಲಸ ಮಾಡುವುದಾದರೆ ಆಗ ಅವನು ತನ್ನ ಕೆಲಸದಲ್ಲಿ ಸಾರ್ಥಕತೆಯನ್ನು ಕಾಣಲು ಸಾಧ್ಯ. ಹೀಗೆ ವ್ಯಕ್ತಿಯು ಉನ್ನತ ಪ್ರಜ್ಞಾಸ್ತರಕ್ಕೆ ತನ್ನ ಮನಸ್ಸನ್ನು ತೆರೆದುಕೊಳ್ಳಬೇಕು. ಮನಸ್ಸು ಸಾಮಾಜಿಕವಾಗಿ ವಿಸ್ತರಣೆಗೊಳ್ಳಬೇಕು. ಆಧ್ಯಾತ್ಮಿಕವಾಗಿ ಉನ್ನತಿಗೇರಬೇಕು. ಆಗ ದುಗುಡತೆಗೆ ಅವಕಾಶವೇ ಇರುವುದಿಲ್ಲ. ಅರ್ಜುನನು ಯುದ್ಧದ ಪ್ರಾರಂಭದಲ್ಲಿ ದುಗುಡತೆಗೆ ಒಳಗಾದಾಗ, ಶ್ರೀಕೃಷ್ಣನು ಎಲ್ಲ ಕ್ರಿಯೆಗಳಿಗೂ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಆಯಾಮವಿದೆ ಯೆಂಬುದನ್ನು ತಿಳಿಸಿಕೊಟ್ಟು, ಅವನ ದೃಷ್ಟಿಕೋನವನ್ನೇ ಬದಲಾಯಿಸಿ, ಅವನು ಯುದ್ಧ ಕ್ರಿಯೆಯಲ್ಲಿ ತೊಡಗುವಂತೆ ಮಾಡಿದನು.

ಯಾವುದೇ ವಿಷಯದಲ್ಲಿ ಒಂದು ನಿರ್ಣಯಕ್ಕೆ ಬರುವ ಸಾಮರ್ಥ್ಯ ಆರೋಗ್ಯಕರ ಮನಸ್ಸಿನ ಲಕ್ಷಣ. ಅನಿರ್ಣಯ ಸ್ಥಿತಿ ಖಂಡಿತ ಒಳ್ಳೆಯದಲ್ಲ. ತಪ್ಪಾದರೂ ಪರವಾಗಿಲ್ಲ, ಕೂಡಲೇ ಒಂದು ನಿರ್ಣಯಕ್ಕೆ ಬರುವುದು ಒಳ್ಳೆಯದು. ಅನೇಕ ಸಂದರ್ಭಗಳಲ್ಲಿ ನಾವು ಬಾಧಕಗಳನ್ನೆಲ್ಲ ಪರಿಶೀಲಿಸಿ ನೋಡಬೇಕಾಗುತ್ತದೆ. ಆದರೆ ಕೆಲವರು ಸಾಧಕಗಳಿಗಿಂತ ಬಾಧಕಗಳ ಕಡೆಗೇ ಹೆಚ್ಚು ಗಮನವೀಯುತ್ತಾರೆ. ಹಾಗಾಗಿ ಅವರು ಯಾವುದೇ ನಿರ್ಣಯಕ್ಕೂ ಬರಲಾರರು. 'ಏನು ಮಾಡ್ಬೇಕೂಂತ ಗೊತ್ತಾಗೋದಿಲ್ಲ' – ಎಂಬ ಮನಸ್ಥಿತಿಯಲ್ಲಿಯೇ ಅವರಿರುತ್ತಾರೆ. ಒಂದು ಶಿಸ್ತಿನ ಜೀವನ ನಡೆಸುತ್ತಿದ್ದರೆ ಯಾವುದೇ ಸಂದರ್ಭದಲ್ಲಿ ಯಾವುದೇ ವಿಷಯದಲ್ಲಾದರೂ ಒಂದು ನಿರ್ಣಯಕ್ಕೆ ಬರುವುದು ಸುಲಭವಾಗುತ್ತದೆ. ಏಕೆಂದರೆ ಆಗ ಒಂದು ನಿರ್ದಿಷ್ಟತೆ ಇರುತ್ತದೆ, ನಾವೇನು ಮಾಡಬೇಕೆಂಬುದು ನಮಗೆ ಸ್ಪಷ್ಟವಾಗುತ್ತದೆ. ಇಷ್ಟೇ ಅಲ್ಲದೆ ನಮ್ಮ ಜೀವನಕ್ಕೆ ಒಂದು ಆದರ್ಶವಿರಬೇಕು. ಆಗ ಆ ಆದರ್ಶಕ್ಕೆ ಅನುಗುಣವಾಗಿ ನಿರ್ಣಯಕ್ಕೆ ಬರಲು ಸಾಧ್ಯವಾಗುತ್ತದೆ. ನಾವು ಯಾವುದೇ ನಿರ್ಣಯವನ್ನು ತೆಗೆದುಕೊಂಡರೂ ಅದು ನೆರವೇರುವುದು ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ಕೊನೆಗೆ ದೈವೇಚ್ಛೆಯಂತೆಯೇ ಎಲ್ಲವೂ ನಡೆಯುವುದು. ಹಾಗೆಂದು ಕೈಕಟ್ಟಿಕೊಂಡು ಕುಳಿತಿರಲಾಗುವುದಿಲ್ಲ. ನಿರ್ಣಯ ಮಾಡಿ, 'ನಿನ್ನಿಚ್ಛೆಯಂತಾಗಲಿ' ಎಂದು ಭಗವಂತನಿಗೆ ಶರಣಾಗುವುದು ಒಳ್ಳೆಯದು.

ಮೂರನೆಯ ಲಕ್ಷಣ ಆತ್ಮಹತ್ಯಾಕಾಂಕ್ಷೆ. ಇದು ತೀವ್ರ ದುಗುಡತೆಯ ಚಿಹ್ನೆ. ಒಂದು ವಸ್ತುವಿನ ಯಾವುದೇ ಮೌಲ್ಯವೂ ಇಲ್ಲವಾದಾಗ ನಾವದನ್ನು ಇಟ್ಟುಕೊಳ್ಳದೆ ಬಿಸಾಕುತ್ತೇವೆ. ಹಾಗೆಯೇ ಜೀವನಕ್ಕೂ ಯಾವುದೇ ಅರ್ಥವಿಲ್ಲದಾದಾಗ ಅದನ್ನು ವ್ಯರ್ಥಗೊಳಿಸುತ್ತೇವೆ. ಅದು ಬೇಡವೆನಿಸುತ್ತದೆ, ಹೊರೆಯಾಗುತ್ತದೆ. ನಮಗೆ ನಾವೇ ಹೊರೆಯಾಗಿರುವುದಕ್ಕಿಂತ ಬೇರೆಯವರಿಗೆ ಹೊರೆಯಾಗಿರುವುದು ಒಳ್ಳೆಯದೇನೊ!! ಯಾರಿಗೆ ಇತರರು ಹೊರೆ

ಯಾಗುತ್ತಾರೊ ಅವರೇ ದುಗುಡತೆಗೆ ಒಳಗಾಗುವ ಸಂಭವ ಅಧಿಕ. ಹೊರೆಯಾಗಿರುವವರು ಯಾವುದೇ ಪ್ರಜ್ಞೆಯಿಲ್ಲದೆ ಆರಾಮವಾಗಿರುತ್ತಾರೆ. ಸೂಕ್ಷ್ಮಮತಿಗಳಾದ ಕೆಲವರು, ತಾವು ಯಾರಿಗೂ ಹೊರೆಯಾಗಿರದೆ ಉತ್ತಮ ಜೀವನ ನಡೆಸುತ್ತಿದ್ದರೂ, ತಾವು ಇತರರಿಗೆ ಹೊರೆಯಾಗಿರಬಹುದೆಂದು ಭಾವಿಸುತ್ತ ಕೊರಗುವುದುಂಟು. ಒಳ್ಳೆಯ ಜೀವನ ನಡೆಸುವ ಅನೇಕರು ಕೆಟ್ಟವರು ಸುಖವಾಗಿರುವುದನ್ನು ಕಂಡು ದುಗುಡತೆಗೆ ಒಳಗಾಗುತ್ತಾರೆ. ಸಮಾಜದಲ್ಲಿರುವ ಅನ್ಯಾಯ, ಅತ್ಯಾಚಾರ, ಭ್ರಷ್ಟಾಚಾರಗಳನ್ನು ಕಂಡು ಬೇಸತ್ತು ಅಸಹಾಯಕ ಮನಸ್ಥಿತಿಯಿಂದ ದುಗುಡತೆಗೆ ಒಳಗಾಗುವವರೂ ಇದ್ದಾರೆ. ಹೀಗಾಗಿ ಅವರು ತಮಗಿರುವ ಸುಖವನ್ನೂ ಅನುಭವಿಸಲಾರರು.

ಮುಂದಿನದು 'ನಾನು'ವಿನ ನೋವು. ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಕಾರ್ಲ್ ಯುಂಗ್ ಪ್ರಕಾರ, ಈ 'ನಾನು' ಎಂಬುದು ರೋಗಿಷ್ಠವಾಗಿರುವುದಕ್ಕೆ ಕಾರಣ ಅದು ಪೂರ್ಣತೆಯಿಂದ ಪ್ರತ್ಯೇಕವಾಗಿರುವುದು. ಒಂದು ಕೊಂಬೆಯು ಮರದಿಂದ ಪ್ರತ್ಯೇಕವಾದರೆ ಅದು ಸೊರಗಿಹೋಗುತ್ತದೆ. ಈ ಅಹಂಗೆ ಹಸಿವು ಜಾಸ್ತಿ. ಅದು ಯಾವಾಗಲೂ ಮಾನ್ಯತೆ ಪ್ರಶಂಸಾದಿಗಳಿಗೆ ಹಾತೊರೆಯುತ್ತಿರುತ್ತದೆ. ಎಷ್ಟೇ ಸಿಕ್ಕಿದರೂ ಅದಕ್ಕೆ ತೃಪ್ತಿಯಿಲ್ಲ. ದೈಹಿಕಮಾನಸಿಕವಾಗಿ ಯಾವ ತೊಂದರೆಗಳೂ ಇಲ್ಲದಿದ್ದರೂ ಅಹಂನ ಸಂಕಟಕ್ಕೆ ಕೊನೆಯಿರುವುದಿಲ್ಲ. ಅದು ಸಮಷ್ಟಿಯೊಡನೆ ಒಂದಾದಾಗಲೇ ಅದರ ನೋವಿನ ಅಂತ್ಯ. ಆಗ ದೈಹಿಕ, ಮಾನಸಿಕ ನೋವುಗಳಿದ್ದರೂ ಅವು ವ್ಯಕ್ತಿಯನ್ನು ಬಾಧಿಸುವುದಿಲ್ಲ. ನಾವು ಸಮಷ್ಟಿಯೊಂದಿಗೆ ನಮ್ಮನ್ನು ಗುರುತಿಸಿಕೊಂಡಾಗ ನಮ್ಮ ವ್ಯಕ್ತಿತ್ವಕ್ಕೆ ವಿಶ್ವವಿಶಾಲತೆ ಬರುತ್ತದೆ. ನಾವು ವಿಶಾಲರಾದಷ್ಟೂ ಬಾಹ್ಯ ವಿಷಯಗಳು ನಮ್ಮನ್ನು ಹೆಚ್ಚು ಬಾಧಿಸುವುದಿಲ್ಲ. ಶ್ರೀರಾಮಕೃಷ್ಣರು ಹೇಳುವಂತೆ, ಆನೆಯು ಸಣ್ಣ ಕೊಳಕ್ಕೆ ಹೊಕ್ಕರೆ ನೀರು ಅಲ್ಲೋಲಕಲ್ಲೋಲವಾಗುತ್ತದೆ. ಅದೇ ಆನೆಯು ದೊಡ್ಡ ಸರೋವರವನ್ನು ಹೊಕ್ಕರೆ ಅದು ಶಾಂತವಾಗಿಯೇ ಇರುತ್ತದೆ. ನಮ್ಮ ವ್ಯಕ್ತಿತ್ವದ ಸೀಮಿತ ಪರಿಧಿಯೊಳಗೇ ನಾವು ಸಂಕುಚಿತರಾದರೆ ನೋವುಗಳೂ ಅಧಿಕ. ನಮ್ಮ ಮನೋಭಾವ ವಿಶಾಲವಾದರೆ ನೋವೂ ಹೂವಾಗಬಹುದು.

ರಾಮಕೃಷ್ಣ ತಪೋವನ

(ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್, ಬೇಲೂರು ಮಠ, ಪಶ್ಚಿಮ ಬಂಗಾಳ ಇದರ ಮಾರ್ಗದರ್ಶನದಲ್ಲಿ ನಡೆಯುವ **ಕರ್ನಾಟಕ ರಾಮಕೃಷ್ಣ-ವಿವೇಕಾನಂದ ಭಾವ ಪ್ರಚಾರ ಪರಿಷತ್** ಇದರ ಸದಸ್ಯತ್ವ ಹೊಂದಿದ ಸಂಸ್ಥೆ)

ರಾಮಕೃಷ್ಣ ತಪೋವನ ಬಾಲಕಾಶ್ರಮ, ಪೊಳಲಿಯಲ್ಲಿ ಉಚಿತ ವಸತಿ ಸೌಲಭ್ಯ

ಅರ್ಜಿ ಆಹ್ವಾನ

ಆರ್ಥಿಕವಾಗಿ ಹಿಂದುಳಿದ ಮತ್ತು ನಾನಾ ಕಾರಣಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗದ ಗ್ರಾಮೀಣ ಪ್ರತಿಭಾವಂತ ಹುಡುಗರಿಗೆ ಶಿಕ್ಷಣಕ್ಕೆ ನೆರವಾಗುವ ಅನ್ವಯ **ರಾಮಕೃಷ್ಣ ತಪೋವನ ಬಾಲಕಾಶ್ರಮವು** ಅರ್ಜಿ ಆಹ್ವಾನಿಸಿದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹಾಗೂ ನೆರೆಯ ಜಿಲ್ಲೆಗಳ, 7ನೇ ತರಗತಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು 8ನೇ ತರಗತಿಗೆ ಸೇರಬಹುದು. ಉಚಿತ ಶಿಕ್ಷಣ, ಊಟ ಮತ್ತು ವಸತಿ ಒದಗಿಸಲಾಗುವುದು. ಜೊತೆಗೆ ಭಜನೆ, ಸಂಗೀತ, ಯಕ್ಷಗಾನ, ತೋಟಗಾರಿಕೆ, ಕಂಪ್ಯೂಟರ್, ಯೋಗ, ಶ್ರಮಸೇವೆ, ಭರತನಾಟ್ಯ, ಕರಾಟೆ ಇತ್ಯಾದಿ ತರಬೇತಿ ನೀಡಲಾಗುತ್ತದೆ. ಸುಂದರ ಹಳ್ಳಿಯ ಪರಿಸರದಲ್ಲಿ ಈ ಬಾಲಕಾಶ್ರಮವಿದ್ದು, ಆಸಕ್ತಿಯಿದ್ದ ಹುಡುಗರು 7ನೇ ತರಗತಿಯ ಪರೀಕ್ಷೆ ಮುಗಿದ ಕೂಡಲೇ ವೈಯಕ್ತಿಕ ವಿವರಗಳೊಂದಿಗೆ ದೂರವಾಣಿ ಇಲ್ಲವೆ ಅಂಚೆಯ ಮೂಲಕ ಸಂಪರ್ಕಿಸಬಹುದು. ಬಾಲಕಾಶ್ರಮದ ಪರಿಚಯ-ಮಾಹಿತಿಗಾಗಿ ವಿದ್ಯಾರ್ಥಿಗಳು ಒಂದು ವಾರ ಬಾಲಕಾಶ್ರಮದಲ್ಲಿ ಉಳಿದುಕೊಳ್ಳಬೇಕಾಗುತ್ತದೆ. ಮಕ್ಕಳ ಮೇಲ್ವಿಚಾರಣೆಯನ್ನು ಸ್ವತಃ ಸ್ವಾಮೀಜಿಯವರೇ ವಹಿಸಿಕೊಳ್ಳುವರು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

ರಾಮಕೃಷ್ಣ ತಪೋವನ, ಶ್ರೀರಾಜರಾಜೇಶ್ವರಿ ದೇವಸ್ಥಾನದ ಬಳಿ,
ಕರಿಯಂಗಳ ಗ್ರಾಮ, ಪೊಳಲಿ ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ 574 219
ದೂರವಾಣಿ ಸಂಖ್ಯೆ : 9845165108, 0824-2016455, 2266655

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**
ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೧೬

ಗಣೇಂದ್ರನಾಥ, ಆಶುತೋಷ್ ಮಿತ್ರ (ಈ ಕೃತಿಯ ಲೇಖಕರು), ನಳಿನಿ, ಶ್ರೀಮಾತೆ, ರಾಧು, ಲಕ್ಷ್ಮೀದೇವಿ

ಅಷ್ಟರಲ್ಲಿ ರಾಧು ಅಲ್ಲಿಗೆ ಬಂದಳು. ಶ್ರೀಮಾತೆ ಅವಳಿಗೆ ಎರಡು ತಾಂಬೂಲ ತರಲು ಹೇಳಿದರು. ಆಕೆ ತಾಂಬೂಲ ತಂದು ಕೊಟ್ಟು, ಶ್ರೀಮಾತೆಯವರನ್ನು ತನ್ನೊಂದಿಗೆ ಕರೆದುಕೊಂಡು ಹೋಗಲು ಹಠ ಮಾಡಿದಳು. ಶ್ರೀಮಾತೆ, ''ತುಸು ಏಕಾಂತದಲ್ಲಿ ಕುಳಿತಿದ್ದೇನೆ. ನೀನು ಹೋಗು, ನಾನು ಸ್ವಲ್ಪಹೊತ್ತು ಬಿಟ್ಟು ಬರುತ್ತೇನೆ'' ಎಂದರು. ಆಕೆ ಕೋಪಿಸಿಕೊಂಡು ಹೋದಳು. ಆಗ ಶ್ರೀಮಾತೆ ಒಂದು ತಾಂಬೂಲವನ್ನು ಶಿಷ್ಯನಿಗೆ ಕೊಟ್ಟು, ಇನ್ನೊಂದನ್ನು ತಾನೇ ಮೆಲ್ಲುತ್ತ ಮತ್ತೆ ಹೇಳತೊಡಗಿದರು: ''ಹೇಳುತ್ತಾರೆ, 'ಮರಳಿ ಮರಳಿ ಬರುತ್ತೇನೆ ದುಃಖಗಳು ರಾಶಿ ರಾಶಿ, ಎಷ್ಟು ದಿನ ಯಾತನೆ ಸಹಿಸುವೆ?' ಅಂತ. ಇದೇನು ಬರೀ ಜೀವಗಳಿಗೆ ಮಾತ್ರವೆ? – ಠಾಕೂರರಿಗೂ ಅಲ್ಲವೆ! ಅದನ್ನೇ ಕುಳಿತುಕೊಂಡು ಯೋಚಿಸುತ್ತಿದ್ದೆ. ನಾನು ನೋಡುತ್ತೇನೆ, ಇದಕ್ಕೆ ಕೊನೆಯಿಲ್ಲ. ಎಂಥ ಕಷ್ಟ ಠಾಕೂರರದು! ಯಾರಿಗೆ ಇದು ಅರ್ಥವಾಗುವುದು?'' ನಾನೆಂದೆ: ''ಬರೀ ಠಾಕೂರರದೇನು? ನಿಮ್ಮದೂ ಕೂಡ ಅಲ್ಲವೆ?'' ಶ್ರೀಮಾತೆ ಹೇಳಿದರು, ''ಛಿ, ಇಂಥ ಮಾತನ್ನು ಆಡುವುದುಂಟೆ, ಪೆದ್ದ ಹುಡುಗ? ನೀನು ಓದಿಲ್ಲವೆ – 'ನೀನು ಯಂತ್ರಿ , ನಾನು ಯಂತ್ರ; ನೀನು ಮನೆಯೊಡೆಯ, ನಾನು ಮನೆ; ಹೇಗೆ ಮಾಡಿಸುತ್ತೀಯೋ, ಹಾಗೆ ಮಾಡುತ್ತೇನೆ' ಅಂತ? ಎಲ್ಲವೂ ಠಾಕೂರರೇ; ಠಾಕೂರರನ್ನು ಬಿಟ್ಟು ಬೇರೇನೂ ಇಲ್ಲ. ಒಂದೊಂದು ಬಾರಿ ಅನ್ನಿಸುವುದು, ಜೀವಿಗಳ ಸಾಲ ತೀರಿ ಹೋಗುವುದೇ ಇಲ್ಲವಲ್ಲ — ಅಂತ. ಮತ್ತೆ ಭಾವಿಸುತ್ತೇನೆ, ಈ ಸಲವಂತೂ ತೀರುವುದಿಲ್ಲ; ಏನೇ ಆದರೂ ತೀರುವುದಿಲ್ಲ ಅಂತ. ಜೀವಿಗಳೆಲ್ಲ ಅವರಿಗೇ ಸೇರಿದವು ತಾನೆ! ''

ನಾನು ಕೇಳಿದೆ: ''ಅದಕ್ಕೇ ಇರಬೇಕಲ್ಲವೆ, ಯಾರು ಮಂತ್ರ ದೀಕ್ಷೆಗಾಗಿ ಬರುತ್ತಾರೋ, ಅವರಿಗೆಲ್ಲ ಕೊಟ್ಟುಬಿಡುತ್ತೀರಿ?'' ಶ್ರೀಮಾತೆ ಹೇಳುತ್ತ ಹೋದರು, ''ಎಷ್ಟೊಂದು ದುಃಖ ದುಮ್ಮಾನಗಳನ್ನು ಅನುಭವಿಸಿ, ಎಷ್ಟೊಂದು ಬೇಗೆಗಳಲ್ಲಿ ಬೆಂದು ಒದ್ದಾಡುತ್ತ ಬರುತ್ತಾರೆ! ಅವರ ಬೇಗೆಯನ್ನು ಠಾಕೂರರಲ್ಲದೆ ಬೇರೆ ಯಾರು ಅಡಗಿಸುವರು? ಅವರೇ ಎಲ್ಲರ ನೋವುಗಳನ್ನು ನುಂಗುವವರು. ಯಾರು ಅವರ ಬೇಗೆಯನ್ನು ನೋಡಿ ಅವರಿಗಿಂತಲೂ ಹೆಚ್ಚಿನದನ್ನು ಅನುಭವಿಸುವರೋ ಅವರು ತಾನೇ ಆ ಬೇಗೆಯನ್ನು ಅರಿಯುವರು?''

ಒಳಗಿನಿಂದ ರಾಧು ಜೋರಾಗಿ ಕಿರುಚತೊಡಗಿದಳು. ಶ್ರೀಮಾತೆ, ''ಕುಳಿತುಕೋ, ರಾಧಿಗೆ ಊಟ ಕೊಟ್ಟು ಬರುತ್ತೇನೆ'' ಎಂದು ಹೇಳಿ ಹೊರಟುಹೋದರು. ಒಂದು ಸಲ ನನಗನ್ನಿಸಿತು, 'ಠಾಕೂರರಿಗೆ ಹೋಲಿಸಿದರೆ ಅವರಿಗಿಂತಲೂ ಹೆಚ್ಚಿನ ಕಷ್ಟವನ್ನು ನೀವು ಅನುಭವಿಸಬೇಕಾಯಿತು' ಎಂದು ಹೇಳಿಬಿಡುತ್ತೇನೆ, ಅಂತ. ಮತ್ತೆ ಭಾವಿಸಿದೆ, ಇಲ್ಲ ಅವರ ಭಾವಕ್ಕೆ ತಡೆಯುಂಟು ಮಾಡುವುದು ಒಳ್ಳೆಯದಲ್ಲ. ಏನು ಹೇಳುತ್ತಾರೋ ಹೇಳಲಿ, ನಾನು ಕೇಳುತ್ತ ಹೋಗುತ್ತೇನೆ ಎಂದುಕೊಂಡೆ.

ಶ್ರೀಮಾತೆ ಮರಳಿ ಬಂದು ಮತ್ತೆ ಹೇಳತೊಡಗಿದರು: ''ಹಾಂ, ಏನು ಹೇಳುತ್ತಿದ್ದೆ?'' ನಾನೆಂದೆ, ''ಠಾಕೂರರ ವಿಷಯ.'' ಅವರು ಹೇಳತೊಡಗಿದರು: ''ಒಂದು ಸಲ ಏನು ನೋಡಿದೆ, ಗೊತ್ತೆ? ನೋಡುತ್ತಿದ್ದೆ, ಠಾಕೂರರೇ ಎಲ್ಲವೂ ಆಗಿದ್ದಾರೆ ಎಂಬುದನ್ನು. ಯಾವ ಕಡೆ ನೋಡಲಿ, ಅತ್ತ ಠಾಕೂರರೇ ಇದ್ದಾರೆ – ಒಕ್ಕಣ್ಣನೂ ಠಾಕೂರರೆ, ಹೆಳವನೂ ಠಾಕೂರರೆ – ಠಾಕೂರರನ್ನು ಬಿಟ್ಟು ಇಲ್ಲ ಅಂತ. ಆಗ ನನಗರ್ಥವಾಯಿತು, ಅವರದೇ ಸೃಷ್ಟಿ , ಅವರೇ ಎಲ್ಲವೂ ಆಗಿದ್ದಾರೆ ಅಂತ. ಜೀವ ಯಾವುದೇ ಕಷ್ಟವನ್ನು ಅನುಭವಿಸುತ್ತಿಲ್ಲ , ಅವರೇ ಎಲ್ಲವನ್ನೂ ಅನುಭವಿಸುತ್ತಿದ್ದಾರೆ. ಅದಕ್ಕಾಗಿಯೇ, ಯಾರು ಬಂದು ಅಳುತ್ತಾರೋ ಅವರನ್ನೇ ಉದ್ಧಾರ

ಮಾಡಬೇಕಾಗಿದೆ. ಅವರದೇ ವಸ್ತುವಿಗೆ, ಅವರಿಗೋಸ್ಕರವೇ ಮಾಡುತ್ತೇನೆ!''

ಮತ್ತೆ ಹೇಳಿದರು: ''ಇವರೆಲ್ಲ ನಿದ್ದೆ ಮಾಡಲು ಹೇಳುತ್ತಾರೆ. ನಿದ್ದೆ ಇನ್ನೆಲ್ಲಿದೆ ಅಥವಾ ಎಲ್ಲಿಂದ ಬರುತ್ತದೆ? ನನಗನ್ನಿಸುತ್ತದೆ, ನಿದ್ದೆ ಮಾಡುವಷ್ಟು ಕಾಲ ಜಪ ಮಾಡಿದರೆ ಜೀವಿಗಳ ಕಲ್ಯಾಣ ವಾಗುತ್ತದೆ. ಒಂದೊಂದು ಬಾರಿ ನನಗನ್ನಿಸುತ್ತದೆ, ಇಷ್ಟು ಸಣ್ಣ ಶರೀರವಲ್ಲದೆ, ಬಹಳ ದೊಡ್ಡ ಒಂದು ಶರೀರವಿದ್ದಿದ್ದರೆ, ಆಗ ಎಷ್ಟೋ ಜೀವಿಗಳ ಕಲ್ಯಾಣವಾಗುತ್ತಿತ್ತಲ್ಲಾ ಅಂತ!''

ಮತ್ತೆ ಅವರೆಂದರು: '' ಒಂದು ಕಪ್ಪು ಇರುವೆ ಹೋಗುತ್ತಿತ್ತು, ರಾಧಿ ಅವುಗಳನ್ನು ಕೊಲ್ಲುತ್ತಿದ್ದಾಳೆ; ಏನು ನೋಡಿದೆ ಗೊತ್ತೇನು? ನೋಡಿದೆ, ಅದು ಇರುವೆಯಲ್ಲ – ಠಾಕೂರರು! ಠಾಕೂರರ ಅದೇ ಕೈ, ಕಾಲು, ಮುಖ, ಕಣ್ಣು, ಎಲ್ಲವೂ ಅವರೆ! ರಾಧಿಯನ್ನು ತಡೆದೆ – ಹಾಗೂ ಭಾವಿಸಿದೆ, ಇವುಗಳು ತಾನೇ ಠಾಕೂರರ ಎಲ್ಲ ಜೀವಿಗಳು? ನಾನು ಇನ್ನೇನು ಮಾಡಬಲ್ಲೆ, ಎಷ್ಟು ಜನರನ್ನು ನೋಡಿಕೊಳ್ಳಬಲ್ಲೆ? ಆದರೆ ಅವರು ಎಲ್ಲರ ಭಾರವನ್ನೂ ನನ್ನ ಮೇಲೆ ಹಾಕಿದ್ದಾರೆ! ಎಲ್ಲರನ್ನೂ ನೋಡಿಕೊಳ್ಳಲು ನನಗೆ ಸಾಧ್ಯ ವಿದ್ದರೆ, ಆಗ ನೋಡಿಕೊಳ್ಳುತ್ತಿದ್ದೆ!''

ದೇವಾಲಯದಿಂದ ಶಂಖ, ಗಂಟೆಗಳನ್ನು ಬಾರಿಸಿದ ಧ್ವನಿ ಕೇಳಿ ಬಂತು. ಶ್ರೀಮಾತೆ ಕನಸಿನಿಂದ ಎದ್ದವರಂತೆ ಏಳುತ್ತ ಹೇಳಿದರು, ''ಸಂಜೆಯಾಗಿ ಬಿಟ್ಟಿತು! ಠಾಕೂರರಿಗೆ ಸಂಧ್ಯಾರತಿ ಮಾಡುತ್ತೇನೆ. ಎಷ್ಟೊಂದು ಮಾತಾಡಿದೆ!'' ನಾನು ಉತ್ತರಿಸಿದೆ, ''ಅಮ್ಮಾ ಇಂದು ನೀವು ಆಡಿದ ಮಾತುಗಳೆಲ್ಲ ಕೇಳಬೇಕಾದ ವಿಷಯಗಳೆ!'' ಅವರು ನಗುತ್ತ ಕೇಳಿದರು, ''ಬರೆದಿಡುತ್ತಿದ್ದೀಯಾ, ಹೇಗೆ?'' ನಾನೆಂದೆ, ''ಹೌದಮ್ಮಾ, ನೀವು ಜಯರಾಮಬಾಟಿಯಲ್ಲಿದ್ದಾಗ, ನಾನು ಕಲ್ಕತ್ತೆಯಲ್ಲಿದ್ದರೆ, ಯಾವಾಗ ಸಮಯ ಸಿಗುವುದೋ ಆಗ ಇವ ನ್ನೆಲ್ಲ ನೋಡುತ್ತಿರುತ್ತೇನೆ.'' ಶ್ರೀಮಾತೆ ನಕ್ಕರು. ಅವರು ಹೊರ ಟಾಗ ಪ್ರಣಾಮ ಮಾಡಿದೆ. ಅವರು ಆಶೀರ್ವಾದ ಮಾಡಿದರು. ಹೋಗುವಾಗ ನಗುತ್ತ ಹೇಳಿದರು, ''ತಾಯಿ ಮತ್ತು ಮಗು, ತಾಯಿ ಮತ್ತು ಮಗು!'' ನಾನು ತಂಗಿದ್ದ ನ್ಯಾಯಾಲಯದ ಮನೆ ಯತ್ತ ಹೊರಟೆ. ನನ್ನ ಕಿವಿಗಳಲ್ಲಿ ಅದೇ ಮಾತು ಮೊಳಗುತ್ತಿತ್ತು, ''ತಾಯಿ ಮತ್ತು ಮಗು, ತಾಯಿ ಮತ್ತು ಮಗು!''

ನನ್ನ ಕೋಣೆಯಲ್ಲಿ ಸದ್ದಿಲ್ಲದೆ ಕುಳಿತು ನೋಟ್ಸ್ ಮಾಡಿ ಬರೆದುಕೊಳ್ಳುತ್ತಿದ್ದೆ. ಕೃಷ್ಣಲಾಲ್ ನನ್ನ ಹಿಂದಿನಿಂದ ಸದ್ದಿಲ್ಲದೆ ಬಂದು, ನಾನೇನು ಬರೆಯುತ್ತಿದ್ದೆ ಎಂಬುದನ್ನು ತಿಳಿಯಬಯಸಿ ದರು. ನಾನು ಅವರಿಗೆ ಹೇಳಲಾರೆ, ಅವರು ಬಿಡಲಾರರು. ಯಾರಿಗೂ ಇದನ್ನು ಹೇಳಬಾರದೆಂದು ಅವರಿಂದ ಮಾತು ತೆಗೆದುಕೊಂಡು, ಅವರಿಗೆ ನನ್ನ ನೋಟ್ಸ್ ಪುಸ್ತಕಗಳನ್ನು ಕೊಟ್ಟೆ. ಅದನ್ನು ಅವರು ಬಹಳ ಹೊತ್ತು ನೋಡಿ, ''ತಮ್ಮಾ, ನೀನು ಈ ಕೆಲಸವನ್ನು ಚೆನ್ನಾಗಿ ಮಾಡಿದ್ದೀಯೆ'' ಎಂದರು.

ರಾಮೇಶ್ವರ ಯಾತ್ರೆಗೆ ಭದ್ರಕ್ ಸ್ಟೇಷನ್‌ನಿಂದ ಮದ್ರಾಸ್ ಮೇಲ್ ಹಿಡಿದೆವು ಎಂದು ಆಗಲೇ ಹೇಳಿದೆ. ನಾನು ಬಹುಪಾಲು ಸಮಯವನ್ನು ಶ್ರೀಮಾತೆಯವರ ಗಾಡಿಯಲ್ಲಿಯೇ ಕಳೆಯ ಬೇಕಾಯಿತು. ಪುರಿಗೆ ಹೋಗುವುದಾಗಿ ಹೇಳಿದ ರಾಮ, ಸರಿ ಯಾದ ವೇಳೆಗೆ ಖುರ್ದಾ ರೋಡ್ ಸ್ಟೇಶನ್‌ನಲ್ಲಿ ಇಳಿದುಹೋದ. ರೈಲು ಮುಂದಕ್ಕೆ ಸಾಗಿತು.

ಪ್ರಾತಃಕಾಲ ರೈಲು ಪ್ರಸಿದ್ಧ ಚಿಲ್ಕಾ ಸರೋವರದ ತೀರದಲ್ಲೇ ಸಾಗಿತು. ಈ ಸರೋವರದಲ್ಲಿ ಎಲ್ಲಿ ನೋಡಿದರೂ ಬೆಳ್ಳಕ್ಕಿಗಳು ಸಾಲು ಸಾಲಾಗಿ ತಮ್ಮ ಗೂಡುಗಳಿಂದ ಹೊರಕ್ಕೆ ಮೈಚಾಚು ತ್ತಿದ್ದವು; ಕೆಲವೆಡೆ ಅವು ಆಹಾರವನ್ನು ಹುಡುಕಿ ಹಾರಾಡುತ್ತಿದ್ದವು; ಸಮೀಪದ ಬೆಟ್ಟಗಳಿಂದ ಒಂದು ಸಲ ಹಕ್ಕಿಗಳು ಹಾರಾಡುತ್ತ ಬಂದು ಸರೋವರದಲ್ಲಿ ಇಳಿಯುತ್ತಿದ್ದವು.

ಶ್ರೀಮಾತೆ ಈ ಅಪೂರ್ವ ದೃಶ್ಯವನ್ನು ನೋಡಿ, ಚಿಕ್ಕ ಹುಡುಗಿ ಯಂತೆ ಆನಂದದಿಂದ ನಮಗೆ ತೋರಿಸಿದರು. ಅಂತೆಯೇ ಅನೇಕ ನೀಲಕಂಠ ಪಕ್ಷಿಗಳನ್ನು(ಗರುಡ) ನೋಡಿ ಕೈಜೋಡಿಸಿ ನಮಸ್ಕರಿಸಿದರು. ಇರಲಿ, ರೈಲುಗಾಡಿ ಗುಡುಗುಡು ಸದ್ದು ಮಾಡುತ್ತ, ಎಂಟು ಗಂಟೆಯ ಹೊತ್ತಿಗೆ ಗಂಜಾಂ ಜಿಲ್ಲೆಯ ಬಹರಂಪುರ ಸ್ಟೇಶನನ್ನು ತಲುಪಿತು.

ಅಲ್ಲಿ ಶಶಿ ಮಹಾರಾಜರ ವ್ಯವಸ್ಥೆಯಂತೆ ಕೇಲ್ನಾರ್ ಕಂಪೆ ನಿಯ ಬಂಗಾಳಿ ಮ್ಯಾನೇಜರನು ಕೆಲವು ಮಂದಿ ಮದ್ರಾಸಿನ ಭಕ್ತರನ್ನು ಕರೆದುಕೊಂಡು, ನಮ್ಮನ್ನು ಆಹ್ವಾನಿಸಿದನು. ಅವರು ನಮ್ಮನ್ನು ಇಳಿಸಿ, ಮೊದಲೇ ತಿಳಿಸಿದ್ದ ಒಂದು ಮನೆಗೆ ಕರೆದು ಕೊಂಡು ಹೋದರು. ಅಲ್ಲಿ ಮೇಲೆ ಹೇಳಿದ ಮ್ಯಾನೇಜರ್ ಬಾಬು ಆಹಾರ, ವಿಶ್ರಾಂತಿ ಇತ್ಯಾದಿ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದ. ಆತ, ನಿರಾಡಂಬರ ವ್ಯಕ್ತಿಯಾಗಿದ್ದ. ಮಧ್ಯಾಹ್ನ ಶ್ರೀಮಾತೆಯವರ ದರ್ಶನ ಮಾಡಲು ಕೆಲವು ಮಂದಿ ಮದ್ರಾಸಿನ ಹಾಗೂ ಗಂಜಾಂ ನಿವಾಸಿಗಳಾದ ಭಕ್ತರು ಬಾಳೆಹಣ್ಣು, ತೆಂಗಿನ ಕಾಯಿಗಳೊಂದಿಗೆ ಬಂದರು. ಅಂದು ರಾತ್ರಿ ಅಲ್ಲೇ ತಂಗಿದ್ದು, ಮರುದಿನ ಬೆಳಿಗ್ಗೆ ಮತ್ತೆ ಮದ್ರಾಸ್ ಮೇಲ್ ಗಾಡಿಯನ್ನೇರಿದೆವು. ಹಗಲು ಹಾಗೂ ರಾತ್ರಿ ರೈಲಿನಲ್ಲೇ ಕಳೆದು, ಮರುದಿನ ಮಧ್ಯಾಹ್ನ ಮದ್ರಾಸನ್ನು ತಲುಪಿದೆವು.

ದಾರಿಯ ನಡುವೆ ಮಧ್ಯಾಹ್ನದ ಹೊತ್ತಿಗೆ ಪ್ರಸಿದ್ಧ ಆರೋಗ್ಯ ಕೇಂದ್ರವಾದ ವಾಲ್ಟೇರ್ ಬರುತ್ತದೆ. ಪರ್ವತದಲ್ಲಿ ಕಟ್ಟಡಗಳ ಸಾಲನ್ನು ನೋಡಿ ಶ್ರೀಮಾತೆ ಆನಂದಪಟ್ಟರು. ಅವರೆಂದರು, ''ನೋಡು, ನೋಡು; ನಿಜವಾಗಿಯೂ ಚಿತ್ರಗಳಂತಿವೆ.'' ರಾತ್ರಿ ಶ್ರೀಮಾತೆ ರೈಲಿನ ಕೆಳಗಿನ ಹಾಸಿಗೆಯಲ್ಲಿ ಮಲಗಲು ಒಪ್ಪಲಿಲ್ಲ. ಯಾಕೋ ಗೊತ್ತಿಲ್ಲ ; ಕೆಲವು ದಿನಗಳ ಮುನ್ನ ಒಂದು ಬಾರಿ ಅವರು ಅದೇ ರೀತಿ ಮಲಗಿದ್ದರು. ಗಾಢ ನಿದ್ರೆಯಲ್ಲಿ ಅವರ ಕೈ ಕಿಟಕಿಯ ಹೊರಗೆ ಚಾಚಿಕೊಂಡಿತ್ತು. ಆ ಕೈಯಲ್ಲೇ ಠಾಕೂರರ

ಕವಚವಿತ್ತು. ಠಾಕೂರರು ಕಾಣಿಸಿಕೊಂಡು ಅವರನ್ನು ಎಚ್ಚರಿಸಿದರು. ಅನಂತರ ಅವರು ಮೇಲಿನ ಹಾಸಿಗೆಯಲ್ಲೇ ಮಲಗ ಬಯಸಿದರು. ಅವರನ್ನು ಎತ್ತಿ ಅಲ್ಲಿ ಮಲಗಿಸಬೇಕಾಯಿತು. ಇಳಿಯಬೇಕಾದಾಗ, ಅವರನ್ನು ಇಳಿಸಬೇಕಾಗಿ ಬಂತು.

ಮದ್ರಾಸ್ ರೈಲ್ವೇ ಸ್ಟೇಶನ್ನಿನಲ್ಲಿ ಶಶಿ ಮಹಾರಾಜರು ಕೆಲವು ಮಂದಿ ಭಕ್ತರೊಂದಿಗೆ ಶ್ರೀಮಾತೆಯವರನ್ನು ಕರೆದುಕೊಂಡು ಹೋಗಲು ಬಂದಿದ್ದರು. ಅವರು ಮೂರು ಮೋಟಾರ್ ಗಾಡಿಗಳನ್ನು ತಂದಿದ್ದರು. ಶ್ರೀಮಾತೆ ಹಾಗೂ ನಾವು ಇಂದೇ ಮೊದಲ ಬಾರಿಗೆ ಮೋಟಾರ್ ಗಾಡಿಗಳನ್ನು ನೋಡಿದ್ದೆವು, ಮೊದಲ ಬಾರಿಗೆ ಅದನ್ನು ಹತ್ತಿ ಕುಳಿತೆವು. ಮದ್ರಾಸ್ ಮಠದ ಸಮೀಪ ಮೈಲಾಪುರ ಎಂಬ ಸ್ಥಳದಲ್ಲಿ ಎರಡಂತಸ್ತಿನ ಒಂದು ಮನೆಯನ್ನು ಶ್ರೀಮಾತೆಯವರಿಗಾಗಿ ಬಾಡಿಗೆಗೆ ತೆಗೆದುಕೊಂಡಿದ್ದರು. ನಾವು ಅಲ್ಲಿಗೆ ಹೋಗಿ, ಅಲ್ಲಿ ತಂಗಿದೆವು. ಸುಮಾರು ಒಂದು ತಿಂಗಳು ನಾವು ಅಲ್ಲೇ ಇದ್ದೆವು. ಶ್ರೀಮಾತೆ ಅಲ್ಲಿದ್ದಷ್ಟು ಕಾಲ, ಅವರ ಆದೇಶದಂತೆ ಶಶಿಮಹಾರಾಜ್ ಎರಡು ಹೊತ್ತು ಮಠದಲ್ಲಿ ಊಟಮಾಡದೆ, ಈ ಮನೆಯಲ್ಲಿ ನಮ್ಮೊಂದಿಗೆ ಊಟ ಮಾಡುತ್ತಿದ್ದರು.

ಶ್ರೀಮಾತೆ ಅಲ್ಲಿದ್ದಾಗ ಮಹಿಳಾ ವಿದ್ಯಾಲಯದ ಮಹಿಳೆಯರು ತಮಿಳು ಭಜನೆಗಳನ್ನು ಹಾಗೂ ಹೆಣ್ಣುಮಕ್ಕಳು ಪಿಟೀಲಿನೊದಿಗೆ ಅತ್ಯಂತ ಸುಲಲಿತವಾದ ಧ್ವನಿಯೊಂದಿಗೆ ಹಾಡಿದರು. ಪ್ರಾಯಶಃ ಪ್ರತಿದಿನವೂ ಸಾಯಂಕಾಲ ಶ್ರೀಮಾತೆಯವರನ್ನು ನಗರದಲ್ಲೆಲ್ಲ ಸುತ್ತಾಡಿಸಲು ಹೊರಗೆ ಕರೆದುಕೊಂಡು ಹೋಗುತ್ತಿದ್ದೆವು. ಒಂದು ದಿನ ಸಮುದ್ರತೀರಕ್ಕೆ ಹೋದೆವು. ಅಲ್ಲಿ ಸುತ್ತಾಡಲು ಹಾಗೂ ಕುಳಿತುಕೊಳ್ಳಲು ಒಳ್ಳೆಯ ವ್ಯವಸ್ಥೆಯಿದೆ. ಒಂದು ದಿನ ನಾವು ಹೊಸ ಮತ್ಸ್ಯಾಗಾರ(ಎಕ್ವೇರಿಯಂ)ವನ್ನು ನೋಡಲು ಹೋದೆವು. ಮತ್ಸ್ಯಾಗಾರದ ನಿರ್ಮಾಣಕಾರ್ಯ ಇನ್ನೂ ಪೂರ್ಣಗೊಂಡಿರಲಿಲ್ಲ. ಆದರೂ ಅಲ್ಲಿ ಆಗ ಹಲವು ಬಣ್ಣಗಳಿಂದ ಕೂಡಿದ, ಹಲವು ಆಕಾರದ ಸಮುದ್ರದ ಮೀನುಗಳನ್ನು ಸಂರಕ್ಷಿಸಲಾಗಿತ್ತು. ಒಂದು ದಿನ ಮೈಲಾಪುರದ ಶಿವಮಂದಿರ (ಕಪಾಲೀಶ್ವರ) ಹಾಗೂ ಇನ್ನೊಂದು ದಿನ ಟ್ರಿಪ್ಲಿಕೇನಿನ ಪಾರ್ಥಸಾರಥಿ ಮಂದಿರವನ್ನು ದರ್ಶನ ಮಾಡಿದೆವು. ಮದ್ರಾಸಿನಲ್ಲಿ ಶೈವ ಹಾಗೂ ವೈಷ್ಣವ ಸಂಪ್ರದಾಯದ ಈ ಎರಡು ದೇವಾಲಯಗಳು ಪ್ರಸಿದ್ಧವಾಗಿವೆ. ಒಂದು ದಿನ ಕೋಟೆ ನೋಡಲು ಹೋಗಿದ್ದೆವು. ಅದು ಭಾರತದಲ್ಲಿ ಬ್ರಿಟಿಷರ ಮೊದಲ ಕೋಟೆಯಾಗಿತ್ತು. ಇಲ್ಲಿ ಮೊದಲನೆಯ ರಿಕ್ಷಾಗಾಡಿಯನ್ನು ಕಾಣಬಹುದು. ಶ್ರೀಮಾತೆ ಅದನ್ನು ಒಂದು ದಿನ ಹತ್ತಿ ಕುಳಿತರು. ಇಲ್ಲಿ ಕುದುರೆ ಗಾಡಿಗಳೇ ಹೆಚ್ಚಾಗಿವೆ; 'ಬ್ರುಹಾಮ್ ಕಂಪಾಸ್' ಗಾಡಿ ಇಲ್ಲವೆಂದೇ ಹೇಳಬಹುದು. ಗಾಡಿ ಚಾಲಕರಿಗೆ ಹಿಂದಿ ಬಾರದು; ನಮಗೂ ತಮಿಳು ತಿಳಿಯದು. ಹೀಗಾಗಿ ಇಂಗ್ಲಿಷಿನಲ್ಲೇ ಮಾತನಾಡಬೇಕಾಯಿತು.

ಇಲ್ಲಿ ಅತ್ಯಂತ ಕೆಳಜಾತಿಯವರನ್ನು ಬಿಟ್ಟರೆ, ಬೇರೆ ಯಾವ ಜಾತಿಯವರೂ ತಂಬಾಕನ್ನು ಯಾವ ರೂಪದಲ್ಲೂ ಸೇವಿಸುತ್ತಿರಲಿಲ್ಲ.

ಶ್ರೀಮಾತೆಯವರಿಗೆ ಹಲ್ಲನ್ನು ಸ್ವಚ್ಛಗೊಳಿಸುವುದಕ್ಕಾಗಿ ಹೊಗೆಸೊಪ್ಪನ್ನು ಸಂಗ್ರಹಿಸಲು ಹೊರಟ ನಮಗೆ, ಅದು ಲಭಿಸದೆ ತುಂಬಾ ತೊಂದರೆಯಾಯಿತು. ಒಂದು ಅಂಗಡಿಯಲ್ಲಿ ಹೊಗೆಸೊಪ್ಪನ್ನು ನೋಡಿ, ಅದರ ಬೆಲೆಯನ್ನು ಕೇಳಿದರೆ, ಅದು ಹೊಗೆಸೊಪ್ಪಲ್ಲವೆಂದು ಅಂಗಡಿಯಾತ ಹೇಳಿದ. ಕೈಯಿಂದ ಅದರತ್ತ ತೋರಿಸಿದಾಗಲೂ ಅವನು ಅದನ್ನು ಮಾರಲಿಚ್ಛಿಸುತ್ತಿರಲಿಲ್ಲ. ಅದಕ್ಕೆ ಕಾರಣ ತಿಳಿದು, ಕೆಲವು ಎಲೆಗಳನ್ನು ತೆಗೆದುಕೊಂಡು ಹೋಗಲು ಮುಂದಾಗಿ, ಅದರ ಬೆಲೆಯನ್ನು ನೀಡಲು ಒಂದು ರೂಪಾಯಿ ಕೊಟ್ಟಾಗ, ಅವನು ಅದರ ಬೆಲೆಯನ್ನು ಕಳೆದು ಉಳಿದ ಹಣವನ್ನು ಹಿಂದಿರುಗಿಸಿದ.

ಇಲ್ಲಿ ಮದ್ರಾಸಿನ ವಿಷಯವಾಗಿ ಕೆಲವು ಸಂಗತಿಗಳನ್ನು ಹೇಳುವುದು ಅನುಚಿತವಾಗದು. ಕಲ್ಕತ್ತೆಗೆ ಹೋಲಿಸಿದರೆ, ಮದ್ರಾಸ್ ವಿಸ್ತೀರ್ಣದಲ್ಲಿ ದೊಡ್ಡದು. ಆದರೂ ಜನಸಂಖ್ಯೆ ಕಡಿಮೆಯಾದ್ದರಿಂದ ಎಲ್ಲೆಡೆ ಖಾಲಿ ಖಾಲಿ ಕಾಣಿಸುತ್ತದೆ. ಇಲ್ಲಿ ಹೈಕೋರ್ಟ್ ಹಾಗೂ ವಿಶ್ವವಿದ್ಯಾಲಯ ಇರುವುದರಿಂದ ತಮಿಳು, ತೆಲುಗು, ಕನ್ನಡವೇ ಮೊದಲಾದ ಕೆಲವು ಭಾಷೆಗಳೂ ಇಲ್ಲಿ ಪ್ರಚಲಿತವಾಗಿವೆ. ಆದರೂ ತಮಿಳು ಭಾಷೆಯೇ ಪ್ರಧಾನ. ಸಂಸ್ಕೃತವೂ ಬಹಳ ಪ್ರಚಲಿತವಾಗಿದೆ. ಬ್ರಾಹ್ಮಣರೇ ಮೊದಲಾದ ನಾಲ್ಕು ವರ್ಗಗಳ ಜನರನ್ನಿಲ್ಲಿ ಕಾಣಬಹುದು. ಆದರೂ ಎರಡು ವರ್ಗಗಳ ಜನರು ಇಲ್ಲಿ ಮುಖ್ಯ – ಬ್ರಾಹ್ಮಣರು ಹಾಗೂ ಅಬ್ರಾಹ್ಮಣರು. ಈ ಸೀಮೆಯಲ್ಲಿ ಜಾತಿವಿಚಾರ ಪ್ರಬಲವಾಗಿರುವುದನ್ನೂ ಕಾಣಬಹುದು. ಇಲ್ಲಿ ಕೇಳಿಬಂದದ್ದೇನೆಂದರೆ, ಬ್ರಾಹ್ಮಣರು ಆಹಾರ ಅಥವಾ ಅಡುಗೆ ಮಾಡುವುದನ್ನು ಯಾರಾದರೂ 'ಪರಯ' ಜನರು, ಅಥವಾ ಶೂದ್ರರು ಕಂಡರೆ, ಅವರು ಆ ಆಹಾರವನ್ನೆಲ್ಲ ಬಿಸುಟು, ಅಡುಗೆಮನೆಯನ್ನು ಸ್ವಚ್ಛಗೊಳಿಸಿ, ಸ್ನಾನಮಾಡಿ ಬಂದ ಮೇಲೆ ಮತ್ತೆ ಅಡುಗೆ ಮಾಡುವರಂತೆ. ಅದೇ ಮಹಾ ವಿಚಾರವಂತನಾದ ಬ್ರಾಹ್ಮಣ ಹಣೆಯ ಮೇಲೆ ತಮ್ಮ ಸಂಪ್ರದಾಯದ ಚಿಹ್ನೆಯನ್ನು ಧರಿಸಿಕೊಂಡು, ಬರಿಗಾಲಿನಲ್ಲಿ ನ್ಯಾಯಾಲಯಕ್ಕೆ ಹೋದ; ತಿಂಡಿಸಮಯವಾದರೆ ಅವನಿಗೆ ಶೂದ್ರ ಸೇವಕ 'ದಧ್ಯೋಧನ'(ಮೊಸರನ್ನ)ವನ್ನು ತೆಗೆದುಕೊಂಡು ಹೋದ – ಆತ ಯಾವುದೇ ಅಳುಕಿಲ್ಲದೆ ಅದನ್ನು ತಿನ್ನತೊಡಗಿದ. ಅನ್ನಕ್ಕೆ ಮೊಸರನ್ನು ಮಿಶ್ರ ಮಾಡಿದರೆ ಅದರಲ್ಲೇನೂ ದೋಷವಿಲ್ಲ! ಇನ್ನು, ಈ ಭಾಗದಲ್ಲಿ ವಿವಾಹ ಪದ್ಧತಿಗಳಲ್ಲಿ ಹೊಸತು ಕಂಡು ಬರುತ್ತದೆ — ವರನ ಮಾವನ ಮಗಳೇ ಉಳಿದೆಲ್ಲರಿಗಿಂತಲೂ ಯೋಗ್ಯ ಕನ್ಯೆ. ಅಂಥ ಕನ್ಯೆ ಇಲ್ಲದಿದ್ದರೆ ಮಾತ್ರ ಬೇರೆ ಹೆಣ್ಣನ್ನು ನೋಡುತ್ತಾರೆ. ಮದ್ರಾಸಿನ ಅಡುಗೆಯ ವಿಶೇಷತೆಯೇನೆಂದರೆ, ಬಹುಪಾಲು ಪಲ್ಯ ಪದಾರ್ಥಗಳಿಗೆ ಕೊಬ್ಬರಿ ಎಣ್ಣೆಯನ್ನು ಉಪ

ಮದ್ರಾಸ್ (ಇಂದಿನ ಚೆನ್ನೈ) : ಹಳೆಯ ಚಿತ್ರ

ಯೋಗಿಸುತ್ತಾರೆ. ಈ ಕಡೆ ಹೇರಳವಾಗಿ ತೆಂಗಿನಕಾಯಿ ಬೆಳೆಯುವುದೇ ಇದಕ್ಕೆ ಕಾರಣವಿರಬೇಕು. ಹುಣಿಸೆ ಹಾಗೂ ಮೆಣಸಿನ ಕಾಯಿ ಇವುಗಳಿಂದ ತಯಾರಿಸಿದ ಮದ್ರಾಸಿನ 'ರಸಂ' ಒಂದು ಅದ್ಭುತ ಪದಾರ್ಥ. ಅಂತೆಯೇ ಅಕ್ಕಿಯಿಂದ ಮಾಡಿದ ಹಪ್ಪಳ (ದೋಸೆ)ವನ್ನು ನಾನು ಜೀವನದಲ್ಲಿ ಮೊದಲ ಬಾರಿಗೆ ಇಲ್ಲೇ ತಿಂದೆ. ಮದ್ರಾಸಿನಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಹೆಚ್ಚು ಪ್ರಚಾರದಲ್ಲಿದೆ. ಇಲ್ಲಿ ಚಳಿ ಇಲ್ಲವೆಂದೇ ಹೇಳಬಹುದು.

ಮದ್ರಾಸಿನಲ್ಲಿ ಒಬ್ಬಾಕೆ ಮಹಿಳೆ ಹಾಗೂ ಒಬ್ಬ ಭಕ್ತ ಶ್ರೀಮಾತೆಯವರಿಂದ ದೀಕ್ಷೆ ಪಡೆದರು. ಮದ್ರಾಸ್ ಮಠದಲ್ಲಿದ್ದ ಬ್ರಹ್ಮಚಾರಿ ಅಮೃತಾನಂದ ಎಂಬ ವಿದೇಶಿ ಕೂಡ ದೀಕ್ಷೆ ಪಡೆದ. ಇವರೆಲ್ಲ ಶ್ರೀಮಾತೆಯವರೊಂದಿಗೆ ಮಾತನಾಡುವಾಗ ನಾವು ದ್ವಿಭಾಷಿಗಳ ಕೆಲಸ ಮಾಡಬೇಕಾಯಿತು. ಆದರೆ ದೀಕ್ಷೆಯ ಸಮಯದಲ್ಲಿ ಮಂತ್ರ ಅಥವಾ ಕರಜಪ ಇತ್ಯಾದಿಗಳ ವಿಷಯದಲ್ಲಿ ಅವರಿಗೆ ನಮ್ಮ ಸಹಾಯ ಬೇಕಾಗಿರಲಿಲ್ಲ. ಎಲ್ಲರೂ ಶ್ರೀಮಾತೆಯವರ ಮಾತನ್ನು ಅರ್ಥಮಾಡಿಕೊಂಡರು. ಇದು ಗಮನಿಸಬೇಕಾದ ಸಂಗತಿ.

ರಾಮಲಾಲ್ ದಾದಾ (ಶ್ರೀರಾಮಕೃಷ್ಣರ ಅಣ್ಣನ ಮಗ) ರಾಮೇಶ್ವರ ದರ್ಶನ ಮಾಡುವ ಬಯಕೆಯಿಂದ ಕಲ್ಕತ್ತೆಯಿಂದ ಬಂದಿದ್ದರು. ಆದರೆ ನಿತಾಯಿಯ ತಾಯಿಗೆ ಅನಾರೋಗ್ಯವುಂಟಾದ್ದರಿಂದ, ನಾವು ತುಸು ಕಾಯಬೇಕಾಯಿತು. ಅವರ ಕಾಯಿಲೆ ವಾಸಿಯಾಗದ್ದರಿಂದ, ಅವರ ಸೇವೆಗಾಗಿ ವ್ಯವಸ್ಥೆ ಮಾಡಿ, ನಾವು ಎಸ್.ಆರ್.ರೈಲ್ವೆಯ ಎರಡನೇ ದರ್ಜೆಯಲ್ಲಿ ಕುಳಿತು ಯಾತ್ರೆ ಮಾಡಿದೆವು. ಗಾಡಿಗಳಲ್ಲಿ ಒಳ್ಳೆಯ ವ್ಯವಸ್ಥೆಯಿತ್ತು. ಸಣ್ಣ ಸಣ್ಣ ಕೋಣೆಗಳಿಂದ ಕೂಡಿದ್ದ ಆ ಗಾಡಿಯಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಸಣ್ಣ ವರಾಂಡವಿತ್ತು. ಅದರಲ್ಲೊಬ್ಬ ರಕ್ಷಕ ಬೀಗಗಳೊಂದಿಗೆ ರಾತ್ರಿಹೊತ್ತು ಓಡಾಡುತ್ತ ಇರುತ್ತಿದ್ದ. ಯಾರಾದರೂ ಗಾಡಿಯನ್ನು ಏರಿದರೆ ರಕ್ಷಕನು ಕೋಣೆಯ ಬೀಗ ತೆಗೆದುಕೊಡುತ್ತಿದ್ದ. ಜಾಗ ಸಾಲದೆ ಹೋದರೆ ಇನ್ನೊಂದು ಗಾಡಿಯನ್ನು ತೋರಿಸಿಕೊಡುತ್ತಿದ್ದ. ಪ್ರತ್ಯೇಕ ಕೋಣೆಗಳಲ್ಲಿ ಒಂದರ ಮೇಲೆ ಇನ್ನೊಂದು ಸ್ಥಳ ಮಲಗಲು ಇರುತ್ತಿತ್ತು; ಅಲ್ಲಿ ಇನ್ನೊಬ್ಬರು ಮಲಗಬಹುದಾಗಿತ್ತು. ಇಬ್ಬರ ಸ್ಥಳದಲ್ಲೂ ಮೇಲ್ಭಾಗದಲ್ಲಿ ಸಣ್ಣ ಫ್ಯಾನ್ ಇರುತ್ತಿದ್ದವು. ಸ್ವಾಮಿ ರಾಮಕೃಷ್ಣಾನಂದರು ನಮ್ಮೊಂದಿಗೆ ಹೊರಟರು. ರಾತ್ರಿ ಹೊತ್ತು ನಾವು ಹೊರಟು, ಮರುದಿನ ಬೆಳಿಗ್ಗೆ ಮದುರೈ ತಲುಪಿದೆವು. ಅಂದು ಅಲ್ಲಿ ಒಬ್ಬ ಮುನಿಸಿಪಾಲಿಟಿ ಚೇರ್‌ಮ್ಯಾನ್ ಮದ್ರಾಸೀ ಭಕ್ತನ ಅತಿಥಿಯಾಗಿ ಉಳಿದುಕೊಂಡೆವು.

(ಮುಂದುವರಿಯುವುದು)

ಉಪಾಸನೆ

''ಉಪಾಸನೆಯೆಂದರೆ, ಉಪಾಸನೆ ಮಾಡಬೇಕಾದ ವಸ್ತುಗಳನ್ನು ಶಾಸ್ತ್ರದಲ್ಲಿ ಹೇಳಿರುವಂತೆ ವಿಷಯವಾಗಿಸಿಕೊಂಡು, ಸಮೀಪಕ್ಕೆ ಬಂದು ಸೇರಿ, ತೈಲಧಾರೆಯಂತೆ ಒಂದೇ ಪ್ರತ್ಯಯವನ್ನು ಹರಿಸುತ್ತಾ ಬಹಳ ಹೊತ್ತು ಇರುವುದು. ಇದನ್ನೇ ಉಪಾಸನೆಯೆನ್ನುತ್ತಾರೆ.''

— ಶ್ರೀಶಂಕರಾಚಾರ್ಯ (ಗೀತಾಭಾಷ್ಯ, ೧೨.೩)

ಸೋದರಿ ನಿವೇದಿತಾ

(ನಾಟಕ)

ರಚನೆ

ಪಾಂಡುರಂಗ ಜೋಯಿಸ್ ಕೆ.ಎನ್.

ಸರಗೂರು ರಮೇಶ್

ಭಾಗ ೩

ದೃಶ್ಯ -೧೦

(ಪ್ಲೇಗು; ಕಸಗುಡಿಸುವುದು ; ಹಸಿದವರಿಗೆ ಊಟ – ತೊಡೆಯ ಮೇಲೆ)

ನಿವೇದಿತಾ : ಹೇ ಭಾರತವೇ! ನೀನೆಷ್ಟು ಕರುಣಾಮಯಿ! ನಿನ್ನ ರಕ್ತದ ಕಣಕಣವೂ ಇತರರ ಮೇಲಿನ ಕರುಣೆಯಿಂದ ಮಿಡಿಯುತ್ತಿದೆ. ನಾನೆಷ್ಟು ಜನ್ಮವೆತ್ತಿದರೂ ನನ್ನ ಬಾಳನ್ನು ಭರತ ವರ್ಷದ ಸೇವೆಗೆ ಸಮರ್ಪಿಸುತ್ತೇನೆ. ನನ್ನ ಗುರುದೇವನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹಗಲಿರುಳೂ ಶ್ರಮಿಸುತ್ತೇನೆ.

(ಸ್ವಾಮೀಜಿಯವರ ದೇಹತ್ಯಾಗ ; ನಿವೇದಿತಾ ಕಣ್ಣಿಗೆ ಬಟ್ಟೆ)

ವಾಣಿ: *೧೯೦೨ ಜುಲೈ ೪ರಂದು ಸ್ವಾಮೀಜಿಯವರು ದೇಹತ್ಯಾಗ ಮಾಡಿದರು. ಏನಾಶ್ಚರ್ಯ! ಆ ಚಿತಾಗ್ನಿಯಿಂದ ಸ್ವಾಮೀಜಿಯವರ ವಸ್ತ್ರವೊಂದು ಹಾರಿ ಬಂದು ಅವಳ ಪಾದದ ಹತ್ತಿರ ಬಿದ್ದಿತು. ಸ್ವಾಮಿ ವಿವೇಕಾನಂದರು ಶಾಶ್ವತವಾಗಿ ಸೋದರಿ ನಿವೇದಿತಾಳೊಡನೆ ಇರುವರು ಎಂದು ಸೂಚಿಸುವ ಈ ಅದ್ಭುತ ಘಟನೆ ಆಗ ಸಂಭವಿಸಿತು.*

ದೃಶ್ಯ -೧೧

(ನಿವೇದಿತಾ – ಸ್ವಾಮೀಜಿಯ ವಸ್ತ್ರದೊಂದಿಗೆ)

ನಿವೇದಿತಾ: ನನ್ನ ಗುರುದೇವ ದೇಹತ್ಯಾಗ ಮಾಡಿ ನಮ್ಮಿಂದ ಅಗಲಿದರು. ಇದು ನನ್ನ ಜೀವನದ ಅತ್ಯಂತ ಕರಾಳ ದಿನ. ತಾಯಿಯನ್ನು ಕಳೆದುಕೊಂಡ ಅನಾಥ ಮಗುವಿನಂತೆ ದುಃಖಿಸುತ್ತಾ ಅವರ ಚಿತೆಯನ್ನೇ ನೋಡುತ್ತಿದ್ದೆ. ಅವರು ಹೊದ್ದುಕೊಳ್ಳುತ್ತಿದ್ದ ಉತ್ತರೀಯ ಚಿತೆಯಿಂದ ಗಾಳಿಯಲ್ಲಿ ಹಾರಿ, ನನ್ನ ಕಡೆಗೆ ಬಂದು ಬಿದ್ದಿತು. ನಿನ್ನ ಬಾಳಿನುದ್ದಕ್ಕೂ ನಾನು ನಿನ್ನೊಂದಿಗಿರುವೆ ಎಂದು ಅವರು ಮಾತು ಕೊಟ್ಟಿದ್ದರು. ನನ್ನ ಗುರುದೇವ ನನ್ನ ಕೈ ಬಿಡಲಿಲ್ಲ. ಈ ರೂಪದಲ್ಲಿ ಇಂದಿಗೂ ನನ್ನೊಂದಿಗಿದ್ದಾರೆ ನನ್ನ ಗುರುದೇವ. (ಉತ್ತರೀಯವನ್ನು ಕಣ್ಣಿಗೊತ್ತಿಕೊಳ್ಳುವಳು)

ವಾಣಿ: *(ರಾಜಕೀಯ ಪ್ರವೇಶ) ಗುರುವಿನ ವಿಯೋಗದ ನಂತರ ನಿವೇದಿತಾ ಗುರುವಿನ ಆದರ್ಶವನ್ನು ಪೂರ್ಣಗೊಳಿಸಬೇಕು – ಅವರು ನೆಟ್ಟ ಸಸಿಗೆ ನೀರೆರೆದು ಬೆಳಸಬೇಕು ಎಂದು ಭಾವಿಸಿದಳು. ಇದಕ್ಕೆ ರಾಜಕೀಯ ಸ್ವಾತಂತ್ರ್ಯ ಆವಶ್ಯಕ ಎಂಬುವುದು ಅವಳ ನಿಲುವಾಗಿತ್ತು. ರಾಷ್ಟ್ರ ನಿರ್ಮಾಣವೇ ನನ್ನ ಗುರಿ ಎಂದು ಅವಳು ಹೇಳುತ್ತಿದ್ದಳು. ಭಾರತಕ್ಕೆ ರಾಷ್ಟ್ರಪ್ರಜ್ಞೆಯು ಜಾಗೃತವಾಗಿ ದೇಶವು ಸ್ವತಂತ್ರವಾಗಬೇಕು ಎಂಬುದು ಅವಳ ಭಾವನೆ. ಇದಕ್ಕೆ ತನ್ನ ತನು, ಮನವನ್ನು ಅರ್ಪಿಸಿದಳು. ಭಾಷಣ, ಲೇಖನಗಳ ಮೂಲಕ ರಾಷ್ಟ್ರೀಯತೆಯನ್ನು ಎಚ್ಚರಿಸಲು ಶ್ರಮವಹಿಸಿದಳು. ಯುವಕರಲ್ಲಿ ರಾಷ್ಟ್ರ ಪ್ರಜ್ಞೆಯನ್ನು ಬಿತ್ತಿದಳು.*

ದೃಶ್ಯ -೧೨

(ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ – ಭಾರತಮಾತೆಯ ಭಕ್ತಳಾಗಿ ಸ್ವದೇಶಿ ಚಳುವಳಿ ಅವಳ ಅಸ್ತ್ರವಾಯಿತು)

ನಿವೇದಿತಾ : ಈಗ ದಾಸ್ಯದಲ್ಲಿ ಬಿದ್ದು ನರಳುತ್ತಿರುವ ನಮ್ಮ ಭಾರತ ದೇಶದ ಏಕೈಕ ಕರ್ತವ್ಯವೆಂದರೆ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು. ಮುಂದಿನ ೫೦ ವರ್ಷಗಳವರೆಗೆ, ಉಳಿದ ದೇವರುಗಳನ್ನು ಕುರಿತು ಚಿಂತಿಸುವುದನ್ನು ನಿಲ್ಲಿಸಿ. ಭರತವರ್ಷವೇ ನಮ್ಮ ದೇವರಾಗಲಿ. ನೀವು ಮದ್ರಾಸಿ, ಗುಜರಾತಿ, ಬಂಗಾಳಿ... ಯಾರೇ ಆಗಿರಲಿ. ನಮ್ಮೆಲ್ಲರ ಗುರಿ ಒಂದೇ. ನಮ್ಮ ಇಂದಿನ ಕಾರ್ಯಸಾಧನೆ ಒಂದೇ. ಎಲ್ಲರೂ ಒಂದಾಗಿ. ನಿಮ್ಮ ಸರ್ವಶಕ್ತಿಗಳನ್ನೂ ಈ ಮಹತ್ತರ ಸಾಧನೆಗೆ ಅರ್ಪಿಸಿ. ಸ್ವತಂತ್ರ ಭಾರತದ ಕಲ್ಪನೆಯನ್ನು ನಿಮ್ಮ ಹೃನ್ಮನಗಳಲ್ಲಿ ಸ್ಥಾಪಿಸಿ ಒಂದಾಗಿ ದುಡಿಯಿರಿ.

ದೃಶ್ಯ -೧೩

(ಸಹೋದರಿಯರ ಮನೆ)

ವಾಣಿ: ನಿವೇದಿತಾ ವಾಸಿಸುತ್ತಿದ್ದ ಮನೆ '**ಭಗಿನಿಯರ ನಿವಾಸ**' ವೆಂದು *ಕಲ್ಕತ್ತೆಯಲ್ಲಿ ಪ್ರಸಿದ್ಧವಾಗಿತ್ತು. ಇಲ್ಲಿ ನಿವೇದಿತಾ ಸೋದರಿ ಕ್ರಿಸ್ಟೀನ್ ಜೊತೆಗೆ ವಾಸವಾಗಿದ್ದರು. ಅನೇಕ ಜನ ಪ್ರಖ್ಯಾತ ವ್ಯಕ್ತಿಗಳು ಅವಳನ್ನು ಕಾಣಲು ಅಲ್ಲಿಗೆ ಬರುತ್ತಿದ್ದರು. ಶ್ರೀಮಾತೆ, ಸಂನ್ಯಾಸೀ ಭಕ್ತರು ಮತ್ತು ಗೃಹಸ್ಥ ಭಕ್ತರು ಅಲ್ಲಿಗೆ ಬರುತ್ತಿದ್ದರು. ಕವಿಗಳು, ಚಿತ್ರಕಾರರು, ವಿಜ್ಞಾನಿಗಳಿಗೆ ಅದು ಬಿಡಾರವಾಗಿತ್ತು. ಅವರಲ್ಲಿ ಪ್ರಮುಖರೆಂದರೆ ಅರವಿಂದ ಘೋಷ್, ಸುಭಾಷ್ ಚಂದ್ರ ಬೋಸ್, ಬಿಪಿನ್ ಚಂದ್ರ ಪಾಲ್, ನಂದ ಲಾಲ್ ಬೋಸ್. ಆಕೆಯ ಪರಮ ಆಪ್ತ ಸ್ನೇಹಿತರು ವಿಶ್ವವಿಖ್ಯಾತ ವಿಜ್ಞಾನಿಯಾದ ಜಗದೀಶ ಚಂದ್ರ ಬೋಸ್ ಮತ್ತು ಅವರ ಪತ್ನಿ ಅಬಲಾ ಬೋಸ್. ಗುರುದೇವ ರವೀಂದ್ರನಾಥ್ ಠಾಕೂರರು ನಿವೇದಿತಾಳನ್ನು* '**ಲೋಕಮಾತಾ**' *ಎಂದು ಕರೆದು ಗೌರವಿಸುತ್ತಿದ್ದರು.*

***ವಾಣಿ :** (ಸ್ವಾಮೀಜಿ ಪ್ರತ್ಯಕ್ಷರಾಗುವರು) ಬಿಡುವಿಲ್ಲದ ಕೆಲಸಗಳಿಂದ ಸೋದರಿ ನಿವೇದಿತಾಳ ಆರೋಗ್ಯ ಶಿಥಿಲವಾಗತೊಡಗಿತು. ನಿವೇದಿತಾ ಬೋಸ್ ದಂಪತಿಗಳೊಡನೆ ಡಾರ್ಜಿಲಿಂಗಿಗೆ ಹೋದಳು. ಒಂದು ದಿನ ಡಾರ್ಜಿಲಿಂಗ್ ನಲ್ಲಿ.......*

ದೃಶ್ಯ -೧೪

(ಬಳಲಿದ ನಿವೇದಿತಾ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ - ಸ್ವಾಮೀಜಿ ಕಾಣಿಸಿಕೊಳ್ಳುವರು)

ಸ್ವಾಮೀಜಿ: ಮಗು ನಿವೇದಿತಾ! ಎಷ್ಟೊಂದು ದಣಿದಿರುವೆ ಕಂದಾ! ನಿನ್ನ ದೇಹದ ಕಣ ಕಣದಲ್ಲಿರುವ ಶಕ್ತಿಯನ್ನು ಭಾರತಕ್ಕಾಗಿ ಬಸಿದುಬಿಟ್ಟಿರುವೆ. ವಿದೇಶಿ ವಸ್ತ್ರ ಧರಿಸಿರುವ ಸಾಕ್ಷಾತ್ ಸರಸ್ವತಿಯ ಒಂದು ರೂಪವೇ ನೀನು ಎನಿಸಿತ್ತು ನನಗೆ, ನಿನ್ನನ್ನು ಮೊದಲು ಕಂಡಾಗ! ನಾನು ಆಗಬೇಕೆಂದುಕೊಂಡ ಅನೇಕ ಕೆಲಸಗಳನ್ನು

ಶ್ರದ್ಧಾಭಕ್ತಿಗಳಿಂದ ನೆರವೇರಿಸಿರುವೆ. ಬಾ ನಿವೇದಿತಾ....! ಬಂದು ಬಿಡು. ಶ್ರೀ ರಾಮಕೃಷ್ಣರ ಸನ್ನಿಧಿಯಲ್ಲಿ ವಿಶ್ರಾಂತಿ ಪಡೆಯುವೆಯಂತೆ. ಬಾ ಮಗು - ನಿವೇದಿತಾ...! ನಿನ್ನ ಜೀವನವು ದೇವರಿಗೆ ಅರ್ಪಿತವಾಗಿ ಸಾರ್ಥಕವಾಗಿದೆ! ಬಂದುಬಿಡು ನಿವೇದಿತಾ.....! ಬಂದು ಬಿಡು... (ಮಾಯವಾಗುವರು)

***ವಾಣಿ:** ೧೯೧೧ ಅಕ್ಟೋಬರ್ ೧೩ ರ ಬೆಳಿಗ್ಗೆ ೭ ಘಂಟೆ.. ಹಿಮಾಲಯದ ಸೂರ್ಯನನ್ನು ನೋಡುತ್ತಾ ಡಾರ್ಜಿಲಿಂಗ್‌ನಲ್ಲಿ **'ಅಸತ್ಯದಿಂದ ಸತ್ಯಕ್ಕೆ, ಅಜ್ಞಾನದಿಂದ ಜ್ಞಾನಕ್ಕೆ, ಮೃತ್ಯುವಿನಿಂದ ಅಮೃತತ್ವಕ್ಕೆ ನನ್ನನ್ನು ಕರೆದುಕೊಂಡು ಹೋಗು'** ಎನ್ನುವ ಪ್ರಾರ್ಥನೆಯೊಂದಿಗೆ ನಿವೇದಿತಾ ತನ್ನ ಕೊನೆಯುಸಿರನ್ನೆಳೆದಳು. ಹಿಂದೂ ಪದ್ಧತಿಯಂತೆ ಅಂತ್ಯಸಂಸ್ಕಾರವನ್ನು ಮಾಡಿದರು. ನಿವೇದಿತಾ ಈ ಪ್ರಪಂಚದ ತೆರೆಯ ಹಿಂದೆ ಇರುವ ಅವ್ಯಕ್ತ ಪ್ರಪಂಚಕ್ಕೆ ಸಂತಸದಿಂದ ಹಾರಿದಳು.*

ನಿವೇದಿತಾ ಎಂಬ ಜೀವಹನಿ ಪರಬ್ರಹ್ಮ ಸಾಗರದಲ್ಲಿ ಸಂಗಮವಾಯಿತು. ಭಾರತಕ್ಕಾಗಿ ತನ್ನ ಜೀವನವನ್ನೇ ಮುಡಿಪಿಟ್ಟು ತ್ಯಾಗಮೂರ್ತಿಯಾದಳು ಈಕೆ. ಭಾರತ ತನ್ನದು, ಭಾರತೀಯರು ತನ್ನವರೆಂದು ನಿವೇದಿತಾ ಭಾವಿಸಿದಳು. ಅವಳ ಸಂಸ್ಕಾರ ನಡೆದ ಜಾಗದಲ್ಲಿ ಅವಳ ಸ್ಮಾರಕವಾಗಿ ಸಾರ್ವಜನಿಕರು ಒಂದು ದೇವಸ್ಥಾನವನ್ನು ನಿರ್ಮಿಸಿದರು.

'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' *ಎಂಬ ಸ್ವಾಮೀಜಿಯವರ ಧ್ಯೇಯಕ್ಕೆ ನಿದರ್ಶನವಾದಳು ನಿವೇದಿತಾ. ವಿದೇಶದಿಂದ ನಮ್ಮ ದೇಶಕ್ಕೆ ಆಗಮಿಸಿ, ತನ್ನ ಜೀವನ ಸಮಸ್ತವನ್ನೂ ಸಮರ್ಪಿಸಿಕೊಂಡ ಸೋದರಿ ನಿವೇದಿತಾಗೆ ನಮ್ಮೆಲ್ಲರ ಗೌರವ ಸಲ್ಲಬೇಕು. ನಾವೂ ಸಹ ಅವಳಂತೆಯೇ ಮನುಕುಲದ ಏಳಿಗೆ ಮತ್ತು ದೇಶದ ಪ್ರಗತಿಗಾಗಿ ಅರ್ಪಣ ಭಾವದಿಂದ ದುಡಿಯೋಣ.*

(ಮುಗಿಯಿತು)

ಶ್ರೀಮಾತೆಯವರ ಉಪದೇಶಗಳು

ಶಿಷ್ಯ : ಚಿತ್ರದಲ್ಲಿ ಶ್ರೀರಾಮಕೃಷ್ಣರು ನಿಜವಾಗಿಯೂ ಇದ್ದಾರೇನು?

ಶ್ರೀಮಾತೆ: ಇಲ್ಲವೇ ಮತ್ತೆ? ನೆರಳು ಮತ್ತು ದೇಹ ಎರಡೂ ಒಂದೇ. ಭಾವಚಿತ್ರ ಅವರ ನೆರಳೇ ಆಗಿದೆ.

ಶಿಷ್ಯ : ಎಲ್ಲ ಚಿತ್ರಗಳಲ್ಲೂ ಅವರಿದ್ದಾರೆಯೆ?

ಶ್ರೀಮಾತೆ: ಹೌದು, ಅವರನ್ನು ನಿರಂತರ ಪ್ರಾರ್ಥಿಸುತ್ತ ಹೋದರೆ ಅವರು ಚಿತ್ರದ ಮೂಲಕ ಆವಿರ್ಭವಿಸುವರು. ಅವರ ಚಿತ್ರವನ್ನಿಟ್ಟ ಸ್ಥಳವೇ ದೇವರಕೋಣೆಯಾಗುವುದು. ಉದಾಹರಣೆಗೆ ಆ ಜಾಗದಲ್ಲಿ ('ಉದ್ಬೋಧನ'ದ ಉತ್ತರ ದಿಕ್ಕಿಗಿದ್ದ ಬಯಲನ್ನು ತೋರಿಸುತ್ತ) ಯಾರಾದರೂ ಅವರನ್ನು ಪೂಜಿಸಿದರೆ, ಅದು ಅವರ ಪುಣ್ಯಸ್ಥಳವಾಗುವುದು.

ಶಿಷ್ಯ : ಅಂದರೆ ಆ ಸ್ಥಳದಲ್ಲಿ ಪುಣ್ಯಸ್ಮೃತಿಗಳ ಸಂಸರ್ಗವುಂಟಾಗುವುದು ಎಂದು ಅನ್ನಿಸುತ್ತದೆ.

ಶ್ರೀಮಾತೆ : ಹಾಗೇನಲ್ಲ, ಆ ಸ್ಥಳದಲ್ಲಿ ಅವರ ವಿಶೇಷ ದೃಷ್ಟಿ ಬೀಳುವುದು.

ಶಿಷ್ಯ : ಸರಿ, ಶ್ರೀರಾಮಕೃಷ್ಣರಿಗೆ ಅರ್ಪಿಸುವ ನೈವೇದ್ಯವನ್ನೆಲ್ಲ ಅವರು ನಿಜವಾಗಿಯೂ ತಿನ್ನುತ್ತಾರೇನು?

ಶ್ರೀಮಾತೆ: ಹೌದು, ತಿನ್ನುತ್ತಾರೆ.

ಶಿಷ್ಯ : ಎಲ್ಲಿ, ಅವರು ತಿಂದ ಗುರುತು ಕಾಣಿಸುವುದಿಲ್ಲವಲ್ಲ?

ಶ್ರೀಮಾತೆ: ಅವರ ಕಣ್ಣಿನಿಂದ ಒಂದು ಬೆಳಕು ಹೊರಬಂದು ನೈವೇದ್ಯವನ್ನೆಲ್ಲ ಸ್ಪರ್ಶಿಸುವುದು. ಅವರ ಅಮೃತಸ್ಪರ್ಶದಿಂದ ಅದು ಮತ್ತೆ ಪರಿಪೂರ್ಣವಾಗುವುದು. ಆದ್ದರಿಂದ ಅದು ಕಡಿಮೆಯಾಗದು.

'ಶ್ರೀಶಾರದಾದೇವಿ ವಚನವೇದ' ದಿಂದ *(ಪು.೧೬೫)*

ಮಾನವನ ಬದುಕಿನಲ್ಲಿ ಭಗವದ್ಗೀತೆಯ ಪ್ರಭಾವ

ಸಿ.ಎಸ್. ಮಂಗಳಮ್ಮ

ಶ್ರೀಮದ್ಭಗವದ್ಗೀತೆಯು ತಾತ್ತ್ವಿಕ, ಧಾರ್ಮಿಕ, ಆಧ್ಯಾತ್ಮಿಕ ಗ್ರಂಥವಾಗಿ ವಿಶ್ವಪ್ರಸಿದ್ಧ. ಆದರೆ ಅದರ ಶ್ರೇಷ್ಠತೆಯಿರುವುದು ಅದು ಎಷ್ಟೊಂದು ಪ್ರಾಯೋಗಿಕ ಎಂಬ ಕಾರಣದಿಂದ; ಹಾಗೂ ಅದರಲ್ಲಿ ದೈನಂದಿನ ಜೀವನಕ್ಕೆ ಅಗತ್ಯವಾದ ನೀತಿ, ಮೌಲ್ಯ, ಆದರ್ಶಗಳಿರುವುದರಿಂದ. ಈ ಅಂಶಗಳನ್ನು ಕುರಿತು ಇಲ್ಲಿ ವಿವರಿಸಿರುವ ಲೇಖಕಿ, ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಮೈಸೂರು ನಿವಾಸಿಯಾಗಿರುವ ಅವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿ ಕೂಡ ಹೌದು.

ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ ।
ಯತ್ಕೃಪಾ ತಮಹಂ ವಂದೇ ಪರಮಾನಂದ ಮಾಧವಮ್ ॥

ಶ್ರೀಮದ್ಭಗವದ್ಗೀತೆಯ ಫಲಶ್ರುತಿಯಲ್ಲಿ ಬರುವ ಮೇಲಿನ ಶ್ಲೋಕದಿಂದ ಭಗವದ್ಗೀತೆಯ ಪ್ರಭಾವ ಬದುಕಿನಲ್ಲಿ ಎಷ್ಟು ಮಹತ್ತರ ಸ್ಥಾನವನ್ನು ಪಡೆದಿದೆಯೆಂದು ಅರಿವಾಗುತ್ತದೆ. ದಾಸಶ್ರೇಷ್ಠರಾದ ಪುರಂದರದಾಸರು, 'ಮಾನವ ಜನ್ಮ ದೊಡ್ಡದು, ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರಾ' ಎಂದು ಜನ್ಮಸಾರ್ಥಕತೆಗೆ ಏನು ಮಾಡಬೇಕು ಎಂಬುದನ್ನು ಸಾರಿದ್ದಾರೆ. ಬದುಕು ಕೇವಲ ಶರೀರ ಪೋಷಣೆ, ಶರೀರ ಸುಖಕ್ಕಲ್ಲ, ಬದುಕು ಮಾನವಧರ್ಮದ ತಳಹದಿಯ ಮೇಲೆ ಕಟ್ಟಿಕೊಳ್ಳುವ ಸುಂದರ ಶಿಲ್ಪವಾಗಬೇಕು. ಇದು ಸುಲಭಸಾಧ್ಯವಲ್ಲ. ಅದಕ್ಕಾಗಿ ಹೋರಾಡಬೇಕು. ಹೋರಾಟದಿಂದ ಗೆದ್ದು, ನಮ್ಮ ಬದುಕಿಗೆ ನೆಲೆಯಾದ ಸಮಾಜದ ಋಣವನ್ನು ತೀರಿಸಬೇಕು.

ಬದುಕು ಸುಖ-ದುಃಖ; ಒಳಿತು-ಕೆಡಕು; ಶುಭ್ರ-ಅಶುಭ್ರ ಇತ್ಯಾದಿ ದ್ವಂದ್ವಗಳಿಂದ ಕೂಡಿರುವಂತಹದು. ಬದುಕಿನಲ್ಲಿ ಬರುವ ಅಡೆ ತಡೆಗಳನ್ನು ಎದುರಿಸಬೇಕು. ಇದು ಹೇಗೆ? ಇದಕ್ಕೆ ಮಾರ್ಗದರ್ಶನ ಹಿರಿಯರ ಅನುಭವ! ಸಾಹಿತ್ಯದಿಂದ ಸಮಾಜದ ಕಲ್ಯಾಣವಾಗುವುದು. ಒಂದು ವಸ್ತುವಿಗೆ ಅಂಟಿದ ಕೊಳೆಯನ್ನು ಕೆಲವು ವಸ್ತುಗಳ ಸಹಾಯದಿಂದ ನೀರಿನ ಮೂಲಕ ತೊಳೆದು ಶುಭ್ರಗೊಳಿಸಬಹುದು. ಅದರಂತೆಯೇ ಮನುಷ್ಯನ ಬದುಕಿನಲ್ಲಿ ಜೊತೆ-ಜೊತೆಗೇ ಅಂಟುವ ನಾನಾ ರೀತಿಯ ಕೊಳೆಗಳನ್ನು ಹಿರಿಯರ ಅನುಭವದ (ಸಾಹಿತ್ಯ) ಮೂಲಕ ಶುಚಿಗೊಳಿಸಿಕೊಂಡು ಶುಭ್ರವಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದೆ, ವ್ಯಾಸ ಮಹರ್ಷಿಗಳ ಮಹಾಭಾರತ! ಆ ಮಹಾಕಾವ್ಯದ ಮಧ್ಯಭಾಗದಲ್ಲಿದೆ 'ಶ್ರೀಮದ್ಭಗವದ್ಗೀತೆ'! ಇದು ಕೇವಲ ಪಠಣ ಮಾಡಿ, ಪೂಜಿಸುವುದಕ್ಕೆ ಮಾತ್ರ ಸೀಮಿತವಲ್ಲ. ಮಾನವ ತನ್ನ ಬದುಕಿನಲ್ಲಿ ಅಳವಡಿಸಿಕೊಂಡು, ಜೀವನಯಾತ್ರೆಯನ್ನು ಸುಗಮಗೊಳಿಸಿಕೊಳ್ಳಲು ಶ್ರೀಕೃಷ್ಣನಿಂದ ನೀಡಲ್ಪಟ್ಟಿರುವ ಸಂದೇಶ.

ಭಗವದ್ಗೀತೆಯಲ್ಲಿ ಮುಖ್ಯ ಪಾತ್ರಗಳು ನಾಲ್ಕು. ಧೃತರಾಷ್ಟ್ರ, ಸಂಜಯ, ಅರ್ಜುನ, ಕೃಷ್ಣ. ಸಂವಾದರೂಪದಲ್ಲಿ ಬದುಕಿನ ಓರೆ-ಕೋರೆಗಳನ್ನು ತಿದ್ದಿ, ಜಾಗೃತಗೊಳಿಸುವ ರೀತಿ ಪ್ರತಿಯೊಬ್ಬರಿಗೂ ಅನ್ವಯವಾಗುತ್ತದೆ. ವಿಶೇಷವಾಗಿ ಮಾನಸಿಕವಾಗಿ ಸೋತು, ನಿರಾಶೆ ಹೊಂದಿದವರಿಗೆ ಪುನರ್ಜೀವನವನ್ನು ನೀಡುವ ಮಹದ್ಗ್ರಂಥ ಇದಾಗಿದೆ!

ಕೌರವರು-ಪಾಂಡವರು ಕುರುಕ್ಷೇತ್ರದಲ್ಲಿ ಯುದ್ಧ ಸನ್ನದ್ಧರಾಗಿದ್ದಾರೆ. ಕುರುವಂಶದ ರಾಜ ಧೃತರಾಷ್ಟ್ರ ದೃಷ್ಟಿಹೀನ. ಯುದ್ಧದಲ್ಲಿ ಏನಾಗುವುದೋ ಅದನ್ನು ತಿಳಿಯಬೇಕೆಂಬ ಕುತೂಹಲ. ಅದಕ್ಕೆ ತನ್ನ ಆಪ್ತ ಪರಿಚಾರಕನಾದ ಸಂಜಯನನ್ನು ಕೇಳುತ್ತಾನೆ. ಈ ಮೊದಲನೆ ಶ್ಲೋಕವೇ ಭಗವದ್ಗೀತೆಯ ಪ್ರಾರಂಭ ಶ್ಲೋಕ:

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥

ಧೃತರಾಷ್ಟ್ರ ಕಣ್ಣಿನಿಂದ ಮಾತ್ರ ಕುರುಡನಲ್ಲ. ಮಮತೆಯೆಂಬ ತೆರೆಯಲ್ಲಿ ಹೃದಯವೂ ಕುರುಡಾಗಿದೆ. ಈ ಯುದ್ಧಕ್ಕೆ ತನ್ನ ಮೋಹ, ಮಕ್ಕಳ ಮೇಲಿನ ಮಮತೆ ಕಾರಣವೆಂದು ಅಂತರಾಳದಲ್ಲಿ ಚುಚ್ಚುತ್ತಿದೆ. ಅವನೇ ಹೇಳುವಂತೆ 'ಧರ್ಮಕ್ಷೇತ್ರೇ ಕುರುಕ್ಷೇತ್ರೇ' ಎಂಬ ಮಾತು, ಅವನ ಪ್ರಶ್ನೆಗೆ ಉತ್ತರವನ್ನು ತನ್ನಿಂದಲೇ ಪಡೆಯಬಹುದಾಗಿತ್ತು. ಆದರೆ ಅದನ್ನು ಒಪ್ಪಿಕೊಳ್ಳುವ ದೊಡ್ಡತನ ಅವನಲ್ಲಿಲ್ಲ. ಅಂದರೆ ಧರ್ಮಕ್ಕೇ ಜಯವೆಂಬುದು ಈ ಶ್ಲೋಕದಿಂದ ಅರ್ಥವಾಗುತ್ತದೆ. ಎರಡನೇ ಸಾಲಿನಲ್ಲಿ 'ಮಾಮಕಾಃ - ಪಾಂಡವಾಃ' ಎಂದು ಹೇಳುತ್ತಾನೆ. ಇಲ್ಲಿಯೂ ನನ್ನವರು ಎಂಬ ಸ್ವಾರ್ಥದ ಭಾವ ಎದ್ದುಕಾಣುತ್ತದೆ. ಏನು ಮಾಡಿದರು? ಎಂದು ಕೇಳುವುದು ದಡ್ಡತನವನ್ನು ತೋರಿಸುತ್ತದೆ. ರಣರಂಗದಲ್ಲಿ ನಡೆಯುವುದೇನು? ಹೊಡಿ, ಬಡಿ, ತಿವಿ, ಕೊಲ್ಲು, ಇಷ್ಟೇ ಅಲ್ಲವೆ? ಧೃತರಾಷ್ಟ್ರನ ಮನಸ್ಸು ಸಮಸ್ಥಿತಿಯಲ್ಲಿ ಇಲ್ಲ. ಇಂತಹ ಸಮಯದಲ್ಲಿ ಆಪ್ತರೊಬ್ಬರಿಂದ ಹಿತವಾದುದನ್ನು ಕೇಳಲು ಮನಸ್ಸು ಬಯಸುತ್ತದೆ. ಇದು ಪ್ರತಿಯೊಬ್ಬರ ಜೀವನದಲ್ಲಿಯೂ ಸಮಯಾನುಸಾರ ಉಂಟಾಗುವ ಪರಿಸ್ಥಿತಿ. ಆಗ ಸ್ವಲ್ಪ ವಿವೇಚನೆಯಿಂದ ಪ್ರಶ್ನೆ ಕೇಳಿದರೆ, ಉತ್ತರ ಹೇಳುವವರ ಅವಹೇಳನದ ಮಾತುಗಳಿಂದ ತಪ್ಪಿಸಿಕೊಳ್ಳಬಹುದು.

ಸಂಜಯ ವಿವೇಕಿ. ತನ್ನ ಧಣಿಯ ಪ್ರಶ್ನೆಗೆ ನೇರವಾಗಿ ಉತ್ತರ ಕೊಡುವುದಿಲ್ಲ. ಅವನಿಗೂ ಗೊತ್ತಿದೆ, ಕೌರವರ ಅಧರ್ಮದ ಕಥೆ.

ಆದ್ದರಿಂದ ಕೃಷ್ಣ-ಅರ್ಜುನರ ಸಂವಾದದ ಮೂಲಕ ಎಲ್ಲವನ್ನೂ ತಿಳಿಸುತ್ತಾನೆ. ಇಲ್ಲಿ ಯಾವ ಮಾತೂ ಸಂಜಯನದಲ್ಲ. ಕೇವಲ ವೀಕ್ಷಕವಿವರಣೆ ಮಾಡುತ್ತಾನೆ. ವ್ಯಾಸರ ಕೃಪೆಯಿಂದ ಅವನಿಗೆ ರಣಭೂಮಿಯ ದೃಶ್ಯ ಯಥಾವತ್ತಾಗಿ ಗೋಚರಿಸುತ್ತದೆ. ಮೊದಲು ರಣರಂಗದಲ್ಲಿ ಸೇರಿದ್ದ ಎರಡೂ ಪಕ್ಷಗಳ ಸೇನೆಯ ವಿವರಣೆ ಹೇಳುತ್ತಾನೆ. ನಂತರ ಅರ್ಜುನನು ರಥದಲ್ಲಿ ನಿಂತು ಸೇನೆಯನ್ನು ನೋಡುತ್ತಾ, ಶತ್ರುಪಕ್ಷದಲ್ಲಿದ್ದ ಗುರುಹಿರಿಯರು ಬಾಂಧವರನ್ನು ಕಂಡು, ಮಮತೆಯ ಮಾಯೆಯಲ್ಲಿ ಸಿಲುಕಿ, ತನ್ನ ಕರ್ತವ್ಯವನ್ನು ಮರೆತು, ಹೇಡಿಯಂತೆ ಕುಸಿದು ಕುಳಿತುಬಿಡುತ್ತಾನೆ. ಇಲ್ಲಿಯೂ ಮಮತೆಯೇ ಅವನನ್ನು ವಿಸ್ಮೃತನನ್ನಾಗಿ ಮಾಡಿತು. ಆಗ ತನ್ನ ರಥದ ಸಾರಥಿಯಾದ (ಬದುಕಿನ ಸಾರಥಿ) ಕೃಷ್ಣನ ಮಾತಿನಿಂದ ಚುಚ್ಚಲ್ಪಟ್ಟವನಾಗಿ, 'ನನಗೆ ಏನು ಮಾಡ ಬೇಕೆಂದು ತೋರುತ್ತಿಲ್ಲ. ನನಗೆ ದಾರಿತೋರಿಸು. ನೀನು ಹೇಳಿದಂತೆ ಕೇಳುತ್ತೇನೆ – ಶರಣಾಗಿದ್ದೇನೆ' ಎನ್ನುತ್ತಾನೆ. ಅರ್ಜುನನ ಮಮತೆ, ಮಾನವಧರ್ಮಕ್ಕೆ ಸೇರಿದ್ದು. ಆದರೂ ಅದು ಆ ಸಮಯಕ್ಕೆ ತಕ್ಕುದಲ್ಲ. ಶ್ರೀಕೃಷ್ಣ ಅವನಿಗೆ ನೀಡುವ ಉಪದೇಶವೇ ಭಗವದ್ಗೀತೆ.

ಧೃತರಾಷ್ಟ್ರನಿಗೆ ಸಂಜಯನ ಮೂಲಕ ಕೃಷ್ಣವಾಣಿ ತಲುಪಿದೆ. ಇನ್ನು ಕುರುಕ್ಷೇತ್ರದಲ್ಲಿ ನಡೆಯುವ ಯುದ್ಧದಲ್ಲಿ ಜಯ ಯಾರಿಗೆ ಎಂಬುದನ್ನು ಸ್ವತಃ ನಿರ್ಧರಿಸಿಕೊಳ್ಳಬಹುದು. ಧರ್ಮಕ್ಕೆ ಜಯ, ಅಧರ್ಮಕ್ಕೆ ನಾಶ ಎಂಬುದು ಅಂಗೈ ಮೇಲಿನ ನೆಲ್ಲಿಕಾಯಿನಂತೆ ಸ್ಪಷ್ಟ. ಕೃಷ್ಣನ ವಾಣಿ ಕೇವಲ ಅರ್ಜುನನ್ನು ಜಾಗೃತಗೊಳಿಸುವುದಕ್ಕಾಗಿ ಅಲ್ಲ. ಪ್ರತಿಯೊಬ್ಬನ ಬದುಕಿಗೂ ಸಂಬಂಧಪಡುತ್ತವೆ. ಸಂಕ್ಷಿಪ್ತವಾಗಿ ಭಗವದ್ಗೀತೆಯ ಶ್ಲೋಕಗಳು ಹೇಗೆ ಮಾನವನ ಬದುಕಿನಲ್ಲಿ ಪ್ರಭಾವ ಬೀರುತ್ತದೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಪ್ರಸ್ತುತ ಪಡಿಸುವುದೇ ಈ ಲೇಖನದ ಉದ್ದೇಶ. ಕೃಷ್ಣನ ದಿವ್ಯಮುಖದಿಂದ ಹೊರಟಿರುವ ವಾಣಿ ಪ್ರತಿಯೊಂದೂ ಅಮೃತಪಾನ ಮಾಡಿಸುವಂತಿದೆ. ಅದನ್ನು ಸವಿಯಲು ಈ ಬರಹ ಪ್ರೋತ್ಸಾಹಿಸಲಿ. ಗೀತಾಮೃತದ ಸವಿಯನ್ನು ಸಂಪೂರ್ಣವಾಗಿ ಅನುಭವಿಸಿ ಉತ್ತಮ ಬದುಕನ್ನು ಬಾಳುವಂತಾಗಲಿ ಎಂಬುದು ಮನದಾಳದ ಮಾತು.

ಕೃಷ್ಣ ಅರ್ಜುನನಿಗೆ ಶರೀರ ಅಶಾಶ್ವತ ಎಂಬುದನ್ನು ಮೊದಲನೆಯದಾಗಿ ಮನದಟ್ಟು ಮಾಡಿಕೊಡುತ್ತಾನೆ. ಅರ್ಜುನ ಬಂಧು-ಬಾಂಧವರನ್ನು ಕೊಲ್ಲಲಾರೆ, ಕೊಂದರೆ ಪಾಪ ಇತ್ಯಾದಿ ಪಾಂಡಿತ್ಯದ ಮಾತುಗಳನ್ನು ಹೇಳುತ್ತಾನೆ. ಆಗ ಕೃಷ್ಣನು ಹೇಳುವ 'ಜಾತಸ್ಯ ಹಿ ಧ್ರುವೋ ಮೃತ್ಯುಃ..' *(ಗೀತೆ, ೨-೨೭)* – ಈ ಶ್ಲೋಕವನ್ನು ಪ್ರತಿಯೊಬ್ಬ ವ್ಯಕ್ತಿಯೂ ಆಳವಾಗಿ ಯೋಚಿಸಬೇಕು. ನಾವು ಪ್ರಪಂಚದಲ್ಲಿ ಎಂದೆಂದಿಗೂ ಶಾಶ್ವತ ಎಂಬ ರೀತಿಯಲ್ಲಿ ಸಂಗ್ರಹಣೆ ಮಾಡುತ್ತೇವೆ. ಅಧಿಕಾರ ಚಲಾಯಿಸುತ್ತೇವೆ. ಕಣ್ಣೆದುರಿಗೇ ಸಾಯುವವರನ್ನು ಕಾಣುತ್ತೇವೆ. ಆಗ ಎಲ್ಲಿಲ್ಲದ ವೈರಾಗ್ಯದ ಮಾತುಗಳನ್ನೂ ಆಡುತ್ತೇವೆ. ಕಾಲಕ್ರಮೇಣ ಮರೆತುಬಿಡುತ್ತೇವೆ. ಅದಕ್ಕೆ ಎಚ್ಚರಿಕೆ ಇದು. ಹುಟ್ಟು ಸಾವು ಅಗೋಚರ ಶಕ್ತಿಯ ಕೈವಾಡ. ಅದಕ್ಕಾಗಿ ಹಿಗ್ಗುವುದೂ ತರವಲ್ಲ, ಕುಗ್ಗುವುದೂ ಸರಿಯಲ್ಲ. ಶಾಶ್ವತವಲ್ಲ ಎಂದರಿತು ಬದುಕನ್ನು ಒಂದು ಕರ್ಮಭೂಮಿಯನ್ನಾಗಿ ಮಾಡಿಕೊಳ್ಳುವುದು ಉತ್ತಮ. ಇದರ ಜೊತೆಗೆ ಇನ್ನೂ ನಾಲ್ಕಾರು ಶ್ಲೋಕಗಳ ಮೂಲಕ ಮನಸ್ಸಿನ ಮೇಲೆ ಪ್ರಭಾವ ಬೀರುವಂತೆ ಮಾಡಿದ್ದಾನೆ. ಸುಖ-ದುಃಖಗಳೂ ಸಹ ಬಂದುಹೋಗುವುವು. ಅದಕ್ಕಾಗಿ ಮನಸ್ಸನ್ನು ಸಮಾಧಾನದಿಂದ ಇರುವಂತೆ ಮಾಡಿಕೊಂಡಾಗ ಬದುಕಿನ ಬಂಡಿ ಸುಗಮವಾಗಿ ಸಾಗಬಲ್ಲದು.

ಸುಖ-ದುಃಖಕ್ಕೆ ಕಾರಣ ಮನಸ್ಸು. ಇದಕ್ಕೆ ಮೂಲ ಆಸೆ. ಆಸೆಯಿಂದ ಮುಕ್ತರಾದವರು ಯಾರೂ ಇಲ್ಲ. ದುಃಖಕ್ಕೆ ಕಾರಣ ಸ್ವಾರ್ಥ. ಇದರಲ್ಲಿ ಆಸೆ ಎರಡು ಬಗೆ. ತನಗಾಗಿ-ಪರರಿಗಾಗಿ ಎಂದು. ಕೇವಲ ತನಗಾಗಿ ಎನ್ನುವ ಜೀವನ ಸಂಕಟಮಯವಾಗುತ್ತದೆ. ಅದಕ್ಕೇ ಶ್ರೀಕೃಷ್ಣನು ಹೇಳುತ್ತಾನೆ :

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಭಿಜಾಯತೇ॥
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥

(ವಿಷಯಗಳನ್ನು ಚಿಂತಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಆಸಕ್ತಿ ಹುಟ್ಟುತ್ತದೆ. ಆಸಕ್ತಿಯಿಂದ ಕಾಮವು ಹುಟ್ಟುತ್ತದೆ. ಕಾಮದಿಂದ ಕ್ರೋಧವುಹುಟ್ಟುತ್ತದೆ. ಕ್ರೋಧದಿಂದಸಂಮೋಹವುಂಟಾಗುತ್ತದೆ. ಸಂಮೋಹದಿಂದ ಸ್ಮೃತಿಯ ಭ್ರಮೆಯುಂಟಾಗುತ್ತದೆ. ಸ್ಮೃತಿಭ್ರಮೆಯಿಂದ ಬುದ್ಧಿನಾಶವಾಗುತ್ತದೆ; ಬುದ್ಧಿನಾಶದಿಂದ ಪುರುಷನು ನಾಶವಾಗುತ್ತಾನೆ.) *(ಗೀತೆ, ೨-೬೨, ೬೩)*

ಮನುಷ್ಯ ಸದಾ ಕ್ರಿಯಾಶೀಲನಾಗಿರಬೇಕು. ಆಗ ಮನಸ್ಸು ವ್ಯರ್ಥ ವಿಷಯಗಳಿಗೆ ಗಮನಕೊಡಲಾರದು. ದೇಹದಲ್ಲಿ ನಡೆಯುವ ಕ್ರಿಯೆ ನಿರಂತರ. ಹುಟ್ಟಿನಿಂದ ಸಾವಿನವರೆಗೂ ಕ್ರಮಬದ್ಧವಾಗಿ ಅದು ನಡೆಯುತ್ತದೆ. ಅದು ಕಣ್ಣಿಗೆ ಕಾಣದು. ದೇಹದ ಹೊರಗೆ ಕಾಣುವ ಇಂದ್ರಿಯಗಳ ಕೆಲಸದ ಮೇಲೆ ಮನಸ್ಸು ಅಧಿಕಾರ ಚಲಾಯಿಸುತ್ತದೆ. ಚಂಚಲವಾದ ಮನಸ್ಸಿನಲ್ಲಿ ದುಷ್ಟಭಾವನೆಗಳು ಮೂಡಿ, ನಮ್ಮ ಕಾರ್ಯಗಳೂ ಕ್ರೌರ್ಯರೂಪವನ್ನು ಪಡೆಯುತ್ತವೆ. ಇದರಿಂದ ಸಮಾಜಕ್ಕೂ ಹಾನಿ. ಮನಸ್ಸನ್ನು ಸದ್ವೃತ್ತಿಯ ಕಡೆಗೆ ತಿರುಗಿಸುವುದಕ್ಕಾಗಿ ಪ್ರಯತ್ನಿಸಬೇಕು. ಇದಕ್ಕಾಗಿ ಶ್ರೀಕೃಷ್ಣನು ಸತ್ಸಂಗದ ಬಗ್ಗೆ ತಿಳಿಸುತ್ತಾನೆ.

ಮನುಷ್ಯ ಸಮಾಜದ ಒಂದು ಅಂಗ. ಪರಸ್ಪರ ಸಹಕಾರವಿಲ್ಲದೆ ಬಾಳು ಸಾಗುವುದಿಲ್ಲ. ಸಹಕಾರದ ಬಗ್ಗೆ 'ದೇವಾನ್ ಭಾವಯತಾನೇನ.. ಪರಮವಾಪ್ಸ್ಯಥ' *(೩-೧೧)* ಎನ್ನುವ ಮೂಲಕ ಹೊಂದಿ ಬಾಳುವುದನ್ನು ತಿಳಿಯಲು ಅನುಕೂಲವಾಗುವುದಿಲ್ಲವೆ? ಶ್ರೀಮಾತೆ ಶಾರದಾದೇವಿಯವರು ಇದನ್ನೇ ತಮ್ಮ 'ಯಾರನ್ನೂ ಪರರೆಂದು ಭಾವಿಸಬೇಡ' ಎಂಬ ಅಂತಿಮವಾಣಿಯಲ್ಲಿ ಸೂಚಿಸಿ

ದ್ದಾರೆ. ನಾವು ಮಾಡುವ ಪ್ರತಿಯೊಂದು ಕೆಲಸವೂ ಶ್ರದ್ಧೆಯಿಂದ ಆಸಕ್ತಿಯಿಂದ ಕೂಡಿದ್ದರೆ, ನಿಷ್ಕಾಮವಾಗಿದ್ದರೆ ಅದು ಉತ್ತಮ ಫಲವನ್ನು ಕೊಟ್ಟೇ ಕೊಡುತ್ತದೆ. **'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'**. ನಮ್ಮ ಪ್ರತಿ ಕೆಲಸದ ಹಿಂದೆಯೂ ಅಗೋಚರ ಶಕ್ತಿಯ ಕೈವಾಡವಿದೆ. ಆ ಶಕ್ತಿಯನ್ನು ನಾವು 'ದೇವರು' ಎನ್ನುತ್ತೇವೆ. ಶರೀರದ ಒಳಗಿನ ಕ್ರಿಯೆ ನಡೆಯುವುದೂ ಆ 'ಅಗೋಚರ ಶಕ್ತಿ'ಯಿಂದಲೇ. ಆದ್ದರಿಂದ 'ನಾನು' ಎನ್ನುವುದು ಕೇವಲ ಸ್ವಾರ್ಥ, ಎಲ್ಲವೂ 'ಅವನದು' ಎನ್ನುವುದು ನೆಮ್ಮದಿಗೆ ಮೂಲ. ಅದನ್ನು ಅರಿಯುವುದೇ 'ಜ್ಞಾನ'! ಇದನ್ನೇ ಶ್ರೀರಾಮಕೃಷ್ಣರು 'ಮೂರುಕಾಸಿನ ರೊಟ್ಟಿ ಸಂಪಾದನೆ ವಿದ್ಯೆ' ಅಂದದ್ದು. ನಮ್ಮನ್ನು ನಾವು ಅರಿಯಲು ಪ್ರಯತ್ನಿಸಿದಾಗ, ನಮ್ಮ ಕರ್ತವ್ಯವೇನು ಎಂಬುದರ ಅರಿವಾಗುತ್ತದೆ.

ಧರ್ಮ-ಅಧರ್ಮಗಳ ಪರಿಚಯದಿಂದ, ನಿರಹಂಕಾರಿಗಳಾಗಿ, ಮಾನವನಗುರಿ ಯಾವುದು ಎಂದು ತಿಳಿಯಲಪೇಕ್ಷಿಸುತ್ತೇವೆ. ಗುರುವಿನ ಆವಶ್ಯಕತೆಯನ್ನು ಅನುಭವಿಸುತ್ತೇವೆ. ಗುರುವಿನ ಬಳಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿಸುತ್ತಾ, ಗುರುವಿನಿಂದ ಪಡೆದ ಅರಿವನ್ನು ಹಂಚುವುದೇ ಗುರುವಿಗೆ ಸಲ್ಲಿಸುವ 'ಗುರುದಕ್ಷಿಣೆ' ಎಂದು, ಪಡೆದದ್ದನ್ನು ಹಂಚಬೇಕೆಂಬ ನೀತಿಯನ್ನು ಹೇಳುತ್ತಾನೆ. ಹೇಗೆ ಸಲ್ಲಿಸಬಹುದು? ವಿಶ್ವವೆಲ್ಲ ಭಗವಂತನದು, ಪ್ರತಿಯೊಂದಕ್ಕೂ ಸಲ್ಲಿಸುವ ಸೇವೆ ಅವನಿಗೆ ಸಲ್ಲುತ್ತದೆ ಎಂದು, ಅರ್ಜುನನಿಗೆ ತನ್ನ ವಿಶ್ವರೂಪವನ್ನು ತೋರಿಸುತ್ತಾನೆ. ಅಂದರೆ ಬ್ರಹ್ಮಾಂಡವೆಲ್ಲ ದೈವಾಂಶದಿಂದ ಕೂಡಿದೆ. ಯಾವ ರೀತಿಯಾದರೂ ಆ ಶಿವನಿಗೇ ಸಲ್ಲುತ್ತದೆ. ಆದ್ದರಿಂದ ಜೀವ ಸೇವೆ - ಶಿವಸೇವೆ ಎಂಬ ಸಾರ್ವತ್ರಿಕ ಸೇವಾಮನೋಭಾವನೆಗೆ ಪುಷ್ಟಿ ಕೊಡುತ್ತಾನೆ.

ಕೃಷ್ಣನ ಉದ್ದೇಶ ಧರ್ಮಸ್ಥಾಪನೆ - ಅಧರ್ಮನಾಶ. ಒಂದು ನೀತಿ, ರೀತಿ, ಕಟ್ಟುಪಾಡಿನಲ್ಲಿ ತನ್ನ-ತನ್ನ ಧರ್ಮ, ಅರ್ಥಾತ್ ಬದುಕಿನ ವೃತ್ತಿಯನ್ನು ಶ್ರದ್ಧೆಯಿಂದ ಮಾಡುವುದು ಧರ್ಮ. ಅದಕ್ಕೆ ವ್ಯತಿರಿಕ್ತವಾದ ನಡೆ ಅಧರ್ಮ. ಅಧರ್ಮದಿಂದ ವ್ಯಕ್ತಿ-ಸಮಾಜಕ್ಕೆ ಕಷ್ಟ ಒದಗಿ ಜೀವನ ಗೊಂದಲಮಯವಾಗುತ್ತದೆ. ಅಂತಹ ಸಮಯದಲ್ಲಿ ಒಬ್ಬ ಅವತಾರ ಪುರುಷನಿಂದ ಗೊಂದಲ ನಾಶವಾಗಿ, ಶಾಂತಿ ನೆಲೆಸುತ್ತದೆ. ಇದನ್ನು **'ಯದಾ ಯದಾ ಹಿ ಧರ್ಮಸ್ಯ ..'** *(೪-೭)* ಎನ್ನುವ ಮೂಲಕ ತಿಳಿಸುತ್ತಾನೆ. ವಿಶ್ವ ದೊಡೆಯನೊಬ್ಬನಿದ್ದಾನೆ ಎಂದು ನಂಬಬೇಕು. ಅವನ ಶಕ್ತಿ ಗುಪ್ತ. ಅವನನ್ನು ಆರಾಧಿಸಿ, ತನ್ನ ಕಷ್ಟ ಸುಖಗಳನ್ನು ಒಪ್ಪಿಸಿ ಬಿಡುವುದು ಬದುಕಿಗೆ ನೆಮ್ಮದಿಯನ್ನು ನೀಡುತ್ತದೆ. ಈ ರೀತಿಯ ಬದುಕನ್ನು 'ಶರಣಾಗತ' ಎನ್ನುತ್ತೇವೆ. ಅದಕ್ಕಾಗಿ ವೈಯಕ್ತಿಕ 'ತ್ಯಾಗ'ದ ಆವಶ್ಯಕತೆ ಇದೆ. ತ್ಯಾಗ ಎಂದರೆ 'ಬಿಡು' ಎಂಬರ್ಥದಿಂದ 'ಆಸೆ'ಯನ್ನು ಮಿತಿಗೊಳಿಸಿಕೊಂಡು, ಲೋಕಕಲ್ಯಾಣಕ್ಕಾಗಿ ದುಡಿಯಬೇಕು. ಇದರಿಂದ ನೆಮ್ಮದಿ ಇದೆ. ಸತ್ಯ, ನೀತಿ, ಧರ್ಮಗಳು ನಿಃಸ್ವಾರ್ಥ ಬದುಕಿಗೆ ಸಹಕಾರಿ. ಮಾನವೀಯ ಗುಣಗಳಾದ ದಯೆ, ವಾತ್ಸಲ್ಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ರೀತಿಗಳನ್ನು ಶ್ರೀಕೃಷ್ಣನು ತಿಳಿಸಿದ್ದಾನೆ. ಶರೀರದಲ್ಲಿ ವ್ಯಾಧಿಯಿಂದ ಒಂದು ಹುಣ್ಣಾದಾಗ, ಅದನ್ನು ನಿಷ್ಕರುಣೆಯಿಂದ ಕತ್ತರಿಸಿ ಹಾಕಬೇಕು. ಅಂತೆಯೇ ಸಮಾಜದ ಹಿತಕ್ಕೆ ಧಕ್ಕೆ ಉಂಟುಮಾಡುವ ಅಧರ್ಮಿಗಳನ್ನು ನಾಶಮಾಡುವುದು ಪಾಪಕಾರ್ಯವಲ್ಲ. ಜಗತ್ತಿನಲ್ಲಿ ನಡೆಯುವ ಕಾರ್ಯಗಳ ನ್ಯಾಯಾನ್ಯಾಯಗಳ ವಿಮರ್ಶಕ ಭಗವಂತ. ನಾವು ಅವನ ಕೈಗೊಂಬೆ. ನಮಗೆ ಸಿಕ್ಕಿರುವ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸುವದಷ್ಟೇ ನಮ್ಮ ಕೆಲಸವೆಂದು ಭಾವಿಸಬೇಕು.

ಆ ರೀತಿಯ ಸಾಧನೆಯ ಜೀವನ ನಡೆಸಲು ಬೇಕಾದ ಧ್ಯಾನ, ತಪಸ್ಸುಗಳ ಬಗ್ಗೆ ತಿಳಿಸುತ್ತಾ, ಇವು ಯಾವುದೂ ಸಾಧ್ಯವಾಗದೆ ಹೋದರೂ, ದೈವ ನಂಬಿಕೆ ಒಂದಿದ್ದರೆ ಸಾಕು. ಆ ಭಗವಂತ ಸರಿದಾರಿಯಲ್ಲಿ ನಡೆಸಿ ದಡಸೇರಿಸುತ್ತಾನೆ. ಭಗವಂತನಲ್ಲಿ ಶರಣಾಗುವುದು ಸುಲಭಸಾಧ್ಯವಿಲ್ಲ. ಉಳಿಪೆಟ್ಟುಗಳನ್ನು ತಿಂದ ಕಲ್ಲು ಸುಂದರ ಮೂರ್ತಿಯಾಗುತ್ತದೆ. ಅಂತೆಯೇ ಜೀವನದ ಕಷ್ಟ ಕೋಟಲೆಗಳನ್ನು ಅನುಭವಿಸಿದಾಗ, ಬಿಡುಗಡೆಯ ಬಗ್ಗೆ ಚಿಂತೆ ಮೂಡುತ್ತದೆ. ಆಗ ಮನಸ್ಸು ಕವಲಾಗಿ, ದಾರಿ ತಿಳಿಯದೆ, ಪತನದ ಕಡೆಗೂ ಜಾರಬಹುದು. ಜಾಗ್ರತರಾಗಿ ಉದ್ಧಾರದ ಕಡೆ ಗಮನ ಕೊಡುವುದೇ ಉತ್ತಮ ಬದುಕು. ಇದನ್ನೇ ಸಂಸಾರವೆಂಬ ಕೊಳೆಯಿಂದ ಶುಚಿಯಾಗುವುದಕ್ಕೆ, ಬೇಡುವ ಪ್ರಾರ್ಥನೆ. ಭಗವದ್ಗೀತೆಯ ಶ್ಲೋಕಗಳು ಶುದ್ಧೀಕರಣ ವಸ್ತುಗಳೋಪಾದಿಯಲ್ಲಿವೆ.

ಭಗವಂತನಲ್ಲಿ ಶರಣಾದಾಗ 'ಅಹಂ' ಇರುವುದಿಲ್ಲ. ಅವನ ಜವಾಬ್ದಾರಿಗೆ ಸೇರಿದ್ದು ನಮ್ಮ ರಕ್ಷಣೆ. ಗಿರೀಶಚಂದ್ರ ಘೋಷ್ ತನ್ನ ಪರವಾಗಿ ಭಗವಂತನ ನಾಮಸ್ಮರಣೆ ಮಾಡಲು ಶ್ರೀರಾಮಕೃಷ್ಣರಿಗೆ ವಕಾಲತ್ತು ವಹಿಸಿದ ಮೇಲೆ, ಅವನ ಜೀವನದಲ್ಲಿ ನಡೆದ ದುಷ್ಕಾರ್ಯದ ಪಾಪಗಳನ್ನೆಲ್ಲ ತೊಳೆದು, ಭಗವಂತನಿಗೆ ಅರ್ಪಿಸುವ ಸುಂದರ ಪುಷ್ಪವನ್ನಾಗಿಸಲಿಲ್ಲವೆ? 'ಸಂಕಟ ಬಂದಾಗ ವೆಂಕಟರಮಣ'ನನ್ನು ಕರೆಯುತ್ತೇವೆ. ಖಂಡಿತ ಅವನಿಂದ ನಮ್ಮ ದುಃಖ ನಿವಾರಣೆಯಾಗುತ್ತದೆ. ಐಹಿಕ ಸುಖಭೋಗಗಳ ದೃಷ್ಟಿಯಿಂದಲ್ಲ. ಹುಟ್ಟು-ಸಾವಿನ ನಡುವಣ ಗೊಂದಲದ ಬದುಕಿನಲ್ಲಿ ಶಾಂತಿ ಸಿಗುತ್ತದೆ. ಬದುಕು ದುರ್ಭರವಾಗುವುದಿಲ್ಲ ; ಕಡೆ ಹಾಯಿಸುತ್ತಾನೆ.

ಭಗವಂತನ ಕೃಪೆಯಿಂದ ನಮ್ಮ ಬದುಕು ಸಾಗುವ ದಾರಿಗೆ ಅಡ್ಡಗಾಲಾಗುವ ಕಲ್ಲು, ಮುಳ್ಳು, ಹಳ್ಳ-ಕೊಳ್ಳಗಳನ್ನು ದಾಟುವಂತೆ ಪ್ರಭಾವ ಬೀರುವುದರಲ್ಲಿ 'ಭಗವದ್ಗೀತೆ'ಯ ಶ್ಲೋಕಗಳು ಪ್ರೇರಣೆ ನೀಡುತ್ತವೆ; ಇದರಲ್ಲಿ ಸಂದೇಹವಿಲ್ಲ. ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ, ಸದಾಕಾಲವೂ ಉಲ್ಲಸಿತರಾಗಿ ಇರುವುದಕ್ಕೆ ಪ್ರೋತ್ಸಾಹಿಸುವ ಶ್ಲೋಕಗಳಿಗೆ ಇಲ್ಲಿ ಕೊರತೆ ಇಲ್ಲ. ಬದುಕನ್ನು ಹಸನುಗೊಳಿಸಿಕೊಳ್ಳಲು, ಉತ್ತಮ ಜೀವನಕ್ಕೆ ಅತ್ಯಂತ ಅವಶ್ಯಕವಾದದ್ದು ಭಗವದ್ಗೀತೆಯಲ್ಲಿ ದೊರಕುತ್ತದೆ.

ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ
ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೧೭

ಸ್ವಾಮಿ ವಿರಜಾನಂದರು ಕರಾಚಿಯಲ್ಲಿದ್ದಾಗ ಅಕಸ್ಮಾತ್ತಾಗಿ ಮಠದ ಸಂನ್ಯಾಸಿಗಳಾದ ಬುಡೋ ಬಾಬಾ (ಸ್ವಾಮಿ ಸಚ್ಚಿದಾನಂದ) ಹಾಗೂ ಸುರೇಶ್ವರಾನಂದರ ಭೇಟಿಯಾಯಿತು. ಅವರಿಬ್ಬರೂ ದ್ವಾರಕಾ ಯಾತ್ರೆಗೆ ಹೋಗುತ್ತಿದ್ದರು. ಸ್ವಾಮಿ ವಿರಜಾನಂದರಿಗೂ ಆ ತೀರ್ಥವನ್ನು ನೋಡುವ ಇಚ್ಛೆಯಿದ್ದುದರಿಂದ, ಕರಾಚಿಯ ಕೆಲಸವನ್ನು ಮುಗಿಸಿಕೊಂಡು ಅವರೊಡನೆ ಹೊರಟು, ಸ್ಟೀಮರಿನಲ್ಲಿ ಪೋರ್‌ಬಂದರನ್ನು ತಲುಪಿದರು. ಪೋರ್‌ಬಂದರಿನ ಆಗಿನ ದಿವಾನರಾದ ಮಣಿಲಾಲ್ ಠಾಕೂರ್ ಎಂಬುವರು ರಾಮಕೃಷ್ಣ ಸಂಘದ ಹಿತಾಕಾಂಕ್ಷಿ ಬಂಧುಗಳು. ಅವರು ತಮ್ಮ ಖರ್ಚಿನಲ್ಲೇ ಇವರೆಲ್ಲರೂ ದ್ವಾರಕೆಗೆ ಹೋಗಿ ಬರಲು ಗಾಡಿಯ ವ್ಯವಸ್ಥೆಯನ್ನು ಮಾಡಿದರು. ಅರುವತ್ತು ಮೈಲಿಯ ಪ್ರಯಾಣ; ರಸ್ತೆ ಅಲ್ಲಲ್ಲಿ ಬಹಳ ಕೆಟ್ಟಿತ್ತು. ಎರಡು ಹಗಲು, ಎರಡು ರಾತ್ರಿ ಎತ್ತಿನ ಗಾಡಿಯ ಕುಲುಕಾಟದಿಂದ ಮೂಳೆಗಳೆಲ್ಲ ನಜ್ಜುಗುಜ್ಜಾದಂತಾಯಿತು! ದ್ವಾರಕೆಯಲ್ಲಿ ಸ್ವಾಮಿ ಭಜನಾನಂದರೆಂಬ ವೃದ್ಧ ವೈಷ್ಣವ ಸಾಧುಗಳನ್ನು ಕಂಡು ವಿರಜಾನಂದರಿಗೆ ತುಂಬ ಹರ್ಷವಾಯಿತು. ಆ ಸಾಧುವು ಎಂಭತ್ತು ವರ್ಷಗಳಿಂದಲೂ ಅಲ್ಲಿಯೇ ವಾಸವಾಗಿದ್ದರು. ಯಾರೊಂದಿಗೂ ಹೆಚ್ಚಾಗಿ ಬೆರೆಯುತ್ತಿರಲಿಲ್ಲ; ಸದಾ ಅಂತರ್ಮುಖಿಗಳು. ಮುಖಮಂಡಲದಲ್ಲಿ ಸ್ನಿಗ್ಧ ಶಾಂತಿಯೂ ಶಿಶುವಿನ ಸರಳತೆಯೂ ದೇದೀಪ್ಯಮಾನವಾಗಿತ್ತು. ಇವರು ಅಲ್ಲಿಗೆ ಹೋದಾಗ ಅವರಿಗೆ ಜ್ವರ ಮತ್ತು ಕಣ್ಣುಬೇನೆಯಿಂದಾಗಿ ಆರೋಗ್ಯ ಚೆನ್ನಾಗಿರಲಿಲ್ಲ. ಈ ಸಂನ್ಯಾಸಿಗಳನ್ನು ನೋಡಿ ಮುಗ್ಧ ಬಾಲಕನಂತೆ, ''ನನ್ನ ಈ ಜ್ವರ, ಕಣ್ಣುಬೇನೆ ಬಿಟ್ಟುಹೋಗುತ್ತೆ ತಾನೆ?'' ಎಂದು ಪ್ರಶ್ನಿಸಿದ್ದರು. ''ಹೌದು ಬಿಟ್ಟು ಹೋಗದೆ ಏನು?'' ಎಂದು ಸಾಂತ್ವನ ನೀಡಿದಾಗ ಅವರು ಮಗುವಿನಂತೆ ಅವರ ಮಾತಿನಲ್ಲಿ ನಂಬಿಕೆಯಿಟ್ಟು, ನಿರಾಳಗೊಂಡರು. ಸ್ವಾಮಿ ವಿರಜಾನಂದರು ದ್ವಾರಕೆಯಿಂದ ಜುನಾಗಢಕ್ಕೆ ಬಂದು, ಅಲ್ಲಿಯ ದಿವಾನರ ಮ್ಯಾನೇಜರಾಗಿದ್ದ ಶ್ರೀಯುತ ಛಗನ್‌ಲಾಲ್ ಪಾಂಡೆಯವರ ಮನೆಯಲ್ಲಿ ಇಳಿದುಕೊಂಡರು. ಸ್ವಾಮಿ ವಿವೇಕಾನಂದರು ೧೮೯೧-೧೮೯೨ರಲ್ಲಿ ಜುನಾಗಢಕ್ಕೆ ಬಂದಿದ್ದಾಗ ದಿವಾನರಾದ ಹರಿದಾಸ್-ವಿಹಾರಿದಾಸ್‌ರವರಲ್ಲಿ ಉಳಿದುಕೊಂಡಿದ್ದರು; ಆಗ ಛಗನ್‌ಲಾಲರು ಸ್ವಾಮೀಜಿಯವರ ನಿಕಟ ಭಕ್ತರೂ ಅನುರಕ್ತ ಬಂಧುಗಳೂ ಆಗಿಬಿಟ್ಟರು. ಈಗ ಕಾಳೀಕೃಷ್ಣರಿಗೆ ಬಹಳ ಆದರೋಪಚಾರ ಮಾಡಿ, ಅವರ ಕೆಲಸದಲ್ಲಿ ನೆರವಾಗತೊಡಗಿದರು. ದಿವಾನರೊಂದಿಗೂ ಸ್ವಾಮಿ ವಿರಜಾನಂದರ ಭೇಟಿಯಾಯಿತು. ಅವರೂ ಸಹ ಸ್ವಾಮೀಜಿಯವರ ಪ್ರಿಯ ಸ್ನೇಹಿತ ಹಾಗೂ ಅಭಿಮಾನಿ. ಅಮೆರಿಕೆಗೆ ಹೋಗುವ ಮುನ್ನ ಪರಿವ್ರಾಜಕರಾಗಿದ್ದ ಸ್ವಾಮೀಜಿಯವರು ಜುನಾಗಢದಲ್ಲಿ ಅನೇಕ ದಿನಗಳನ್ನು ಈ ದಿವಾನರೊಂದಿಗೆ ಕಳೆದಿದ್ದರು ಮತ್ತು ಇವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಸ್ವಾಮೀಜಿಯವರು ಅಮೆರಿಕದಿಂದ ಬರೆದ ಪತ್ರಗಳ ಪೈಕಿ ಬಹಳಷ್ಟು ವಿಹಾರಿದಾಸ್‌ಜಿಗೆ ಬರೆದವುಗಳಾಗಿವೆ. ಸ್ವಾಮೀಜಿ ಹಾಗೂ ದಿವಾನರಲ್ಲಿ ಪರಸ್ಪರ ಪ್ರೀತಿ-ವಿಶ್ವಾಸಗಳು ಎಷ್ಟು ಆಳವಾಗಿತ್ತೆಂಬುದು ಈ ಪತ್ರಗಳನ್ನು ಓದಿದರೆ ತಿಳಿಯು ತ್ತದೆ. ಸ್ವಾಮಿ ವಿರಜಾನಂದರು ಸ್ವಾಮೀಜಿಯವರ ಸಂನ್ಯಾಸಿ ಶಿಷ್ಯರಲ್ಲೊಬ್ಬರೆಂದು ತಿಳಿದು ದಿವಾನ್‌ಜೀ ಅವರನ್ನು ತುಂಬ ಪ್ರೀತ್ಯಾದರಗಳಿಂದ ಬರಮಾಡಿಕೊಂಡರು. ಜುನಾಗಢದಲ್ಲಿ ಸ್ವಾಮೀಜಿಯವರ ಅನೇಕ ಗುಣಗ್ರಾಹಿ ಭಕ್ತರಿದ್ದರು. ಅವರೆಲ್ಲ ಸ್ವಾಮೀಜಿಯವರು ಅಲ್ಲಿದ್ದಾಗ ನಡೆದ ಅನೇಕ ಘಟನೆಗಳನ್ನು ರಸವತ್ತಾಗಿ ವರ್ಣಿಸುತ್ತಿದ್ದರು. ಅವರಿಗೆ ಸ್ವಾಮೀಜಿಯವರಲ್ಲಿದ್ದ ಅದ್ಭುತವಾದ ಶ್ರದ್ಧಾಭಕ್ತಿಗಳನ್ನು ಕಂಡು ಸ್ವಾಮಿ ವಿರಜಾನಂದರು ಆಶ್ಚರ್ಯಚಕಿತರಾದರು.

ಜುನಾಗಢದಲ್ಲಿದ್ದಾಗಲೇ ಸ್ವಾಮಿ ವಿರಜಾನಂದರು ಪ್ರಸಿದ್ಧ ಜೈನತೀರ್ಥವಾದ ಗಿರ್ನಾರಿನ ದರ್ಶನ ಮಾಡಲು ಹೋದರು. ಪರ್ವತದ ಮೇಲೆ ಅರಣ್ಯದಿಂದ ಆವೃತವಾದ ಗಿರ್ನಾರಿನ ರಮಣೀಯ ದೃಶ್ಯವು ಅವರಿಗೆ ತುಂಬ ಆನಂದವನ್ನು ತಂದಿತು. ಹಿಂದೆ ಸಾಧುಗಳೊಬ್ಬರು ಇಲ್ಲಿ ತಪಸ್ಸು ಮಾಡುತ್ತ ವಾಸವಾಗಿದ್ದು, ಜನರ ಕಣ್ಣಿಗೆ ಬೀಳುತ್ತಿರಲಿಲ್ಲವೆಂದೂ, ಎಲ್ಲಿಂದಲೋ ಒಂದು ಹಸು ನಿತ್ಯವೂ ಈ ಸಾಧುವಿನ ಬಳಿ ಬರುತ್ತಿದ್ದು, ಅದು ಕೊಡುತ್ತಿದ್ದ ಹಾಲಿನಿಂದಲೇ ಜೀವನ ಧಾರಣೆ ಮಾಡಿಕೊಂಡಿದ್ದರೆಂಬ ಕಿಂವದಂತಿ ಇತ್ತು. ಇದನ್ನು ಕೇಳಿದ ಸ್ವಾಮಿ ವಿರಜಾನಂದರು ಆಶ್ಚರ್ಯಚಕಿತರಾದರು. ಗಿರ್ನಾರಿನ ಅರಣ್ಯದಲ್ಲಿ ತುಂಬ ಸಿಂಹಗಳಿರುವುದಾಗಿ ತಿಳಿದುಬಂತು. ಜುನಾಗಢದ ನವಾಬನ ಮೃಗಾಲಯದಲ್ಲಿದ್ದ ೨೦-೨೫ ಭೀಮಾಕಾರದ ಸಿಂಹಗಳನ್ನು ನೋಡಿ ಸ್ವಾಮಿ ವಿರಜಾನಂದರು ಖುಷಿಪಟ್ಟರು.

ಜುನಾಗಢದ ಕೆಲಸ ಮುಗಿಸಿದ ಸ್ವಾಮಿ ವಿರಜಾನಂದರು ಅಹಮದಾಬಾದಿಗೆ ಬಂದರು. ಅಲ್ಲಿಯ ಕೆಲಸವನ್ನು ಉತ್ಸಾಹ

ದಿಂದ ಮಾಡುತ್ತಿದ್ದರು; ಅಷ್ಟರಲ್ಲಿ ಸ್ವಾಮೀಜಿಯವರ ದೇಹ ತ್ಯಾಗದ ದಾರುಣ ಸುದ್ದಿಯು ತಂತಿಯ ಮೂಲಕ ತಿಳಿದುಬಂತು. ಅಯ್ಯೋ! ಸ್ವಾಮೀಜಿಯವರು ಇಷ್ಟು ಬೇಗ ಈ ಮರ್ತ್ಯಲೋಕ ವನ್ನು ತ್ಯಜಿಸಿ ಹೋಗುವರೆಂದು ವಿರಜಾನಂದರು ಕನಸಿನಲ್ಲೂ ನೆನೆದಿರಲಿಲ್ಲ. ಅವರ ಹೃನ್ಮನಗಳು ಭಗ್ನವಾದವು, ಸಂಕಲ್ಪಿಸಿದ್ದ ಕೆಲಸಗಳು ಏರುಪೇರಾದವು. ಕೆಲಸ ಮಾಡುವ ಉತ್ಸಾಹವೆಲ್ಲ ಕ್ಷಣಮುಹೂರ್ತದಲ್ಲಿ ಉಡುಗಿಹೋದವು. ಪ್ರಪಂಚವೇ ಶೂನ್ಯ ವೆನಿಸತೊಡಗಿತು. ಅಹಮದಾಬಾದಿನ ಕೆಲಸವನ್ನು ಹೇಗೋ ಬೇಗ ಮುಗಿಸಿ, ಮಾಯಾವತಿಗೆ ಹಿಂತಿರುಗಿದರು. 'ಪ್ರಬುದ್ಧ ಭಾರತ'ದ ಕೆಲಸಕ್ಕಾಗಿ ಅವರು ಮಾಯಾವತಿಯಿಂದ ಹೊರಟು ಹತ್ತು ತಿಂಗಳುಗಳೇ ಉರುಳಿದ್ದವು. ಉದ್ದೇಶವು ನಿರೀಕ್ಷೆಗಿಂತ ಹೆಚ್ಚಾಗಿಯೇ ಸಫಲಗೊಂಡಿತ್ತು. ಅನೇಕ ಸ್ಥಳಗಳಲ್ಲಿ ತಿರುಗಿ ನೂರಾರು ಚಂದಾದಾರರನ್ನು 'ಪ್ರಬುದ್ಧ ಭಾರತ'ದ ಪಟ್ಟಿಯಲ್ಲಿ ಸೇರಿಸಿದ್ದರು. ಅದರಲ್ಲೂ ಅನೇಕರು ಮುಸಲ್ಮಾನರು! ಇದಲ್ಲದೆ ಸ್ವಾಮಿ ವಿರಜಾನಂದರ ಶಾಂತ, ಉದಾರ ಹಾಗೂ ಸರಳ ವ್ಯಕ್ತಿತ್ವದ ಸಂಸರ್ಗಕ್ಕೆ ಬಂದು, ಅವರಿಂದ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಆಳವಾದ ವಿಚಾರಗಳನ್ನು ಆಲಿಸಿದ್ದ ಅನೇಕರು ಆಧ್ಯಾತ್ಮಿಕವಾಗಿ ಉಪಕೃತರಾಗಿದ್ದರು. ಇವು ಸ್ವಾಮಿ ವಿರಜಾನಂದರ ಪರ್ಯಟನೆಯ ಮತ್ತೊಂದು ಸಾರ್ಥಕತೆ ಎಂದು ಹೇಳಬಹುದು.[೧]

ಸ್ವಾಮೀಜಿಯವರ ಮಹಾಸಮಾಧಿಯಿಂದಾಗಿ ಮಾಯಾವತಿ ಯಲ್ಲಿ ಎಲ್ಲರೂ ಶೋಕತಪ್ತರಾಗಿದ್ದರು. ಅಲ್ಲಿನ ಕೆಲಸವು ಸ್ವಾಮೀಜಿಯವರ ನಿರ್ದೇಶನದಿಂದಲೇ ಪ್ರಾರಂಭವಾಗಿತ್ತು ಮತ್ತು ಅದನ್ನು ನಡೆಸಿಕೊಂಡು ಹೋಗಬೇಕೆಂಬುದೇ ಅವರ ಆದೇಶವೂ ಆಗಿತ್ತು. ಈ ಕಾರಣದಿಂದ ಎಲ್ಲರೂ ತಮ್ಮಲ್ಲಿ ಹೇಗೋ ಉತ್ಸಾಹ-ಬಲವನ್ನು ತುಂಬಿಕೊಂಡು ಅಂದಂದಿನ ಕೆಲಸಕಾರ್ಯ ಗಳನ್ನು ಮಾಡುತ್ತ ಹೋಗುತ್ತಿದ್ದರು. ಆದರೆ ವಿರಜಾನಂದರಿಗೆ ಮಾತ್ರ ಎಷ್ಟು ಪ್ರಯತ್ನಿಸಿದರೂ ಉತ್ಸಾಹ ತಂದುಕೊಳ್ಳಲಾಗಲಿಲ್ಲ. ಅಷ್ಟೇ ಅಲ್ಲದೆ, ಅವರು ಮಾಯಾವತಿಗೆ ಹಿಂತಿರುಗಿದ ನಂತರ ಕೇಳಿದ ಮತ್ತೊಂದು ಸಮಾಚಾರವು ಅವರ ಹೃದಯವನ್ನು ಹಿಂಡಿಬಿಟ್ಟಿತು; ತುಂಬ ಕ್ಷೋಭೆಗೊಳಗಾದರು. ಅದೇನೆಂದರೆ, ವಿರಜಾನಂದರು ಭಾರತದ ಪಶ್ಚಿಮ ಪ್ರಾಂತ್ಯಗಳಲ್ಲಿ 'ಪ್ರಬುದ್ಧ ಭಾರತ'ದ ಕೆಲಸದಲ್ಲಿ ತೊಡಗಿದ್ದಾಗ ಸ್ವಾಮೀಜಿಯವರಿಂದ ಮಿಸೆಸ್ ಸೇವಿಯರ್ ಮತ್ತು ಸ್ವರೂಪಾನಂದರಿಗೆ ಪತ್ರವೊಂದು ಬಂದಿತ್ತು. ಅದರಲ್ಲಿ, 'ಮಾಯಾವತಿಯ ಕೆಲಸಕ್ಕೆ ಹೆಚ್ಚು ತೊಂದರೆ ಮಾಡಿಕೊಳ್ಳದೆ, ಕಾಳೀಕೃಷ್ಣನನ್ನು ನನ್ನ ಸೇವೆಗೆ ಬಿಡುವು ಮಾಡಲು ಸಾಧ್ಯವಾದರೆ ತಕ್ಷಣವೇ ಅವನನ್ನು ಮಠಕ್ಕೆ ಕಳುಹಿಸುವುದು' ಎಂದು ಬರೆದಿದ್ದರು[೨]. ಆ ವೇಳೆಯಲ್ಲಿ ಚಂದಾದಾರರನ್ನು ಸಂಗ್ರ ಹಿಸುವ ಕೆಲಸ ಆಶಾಜನಕವಾದ ರೀತಿಯಲ್ಲಿ ಮುಂದುವರಿದಿತ್ತು. ಆದ್ದರಿಂದ ಮದರ್ ಹಾಗೂ ಸ್ವರೂಪಾನಂದರು ಸ್ವಾಮೀಜಿ ಯವರಿಗೆ ವಿಷಯವನ್ನೆಲ್ಲ ವಿವರಿಸಿ, ಕಾಳೀಕೃಷ್ಣರು ಈಗ ಹಿಂದಿರುಗಿದರೆ ಪತ್ರಿಕೆಯ ಕೆಲಸಕ್ಕೆ ಹಾನಿಯಾಗುವುದೆಂದು ತಿಳಿಸಿ ಪತ್ರ ಬರೆದಿದ್ದರು. ಸ್ವಾಮೀಜಿಯವರ ಪತ್ರದ ವಿಷಯವನ್ನು ಸ್ವಾಮಿ ವಿರಜಾನಂದರಿಗೆ ಆಗ ತಿಳಿಸಿರಲಿಲ್ಲ.

ಹಲವು ತಿಂಗಳಿಂದ ನಾನಾಸ್ಥಳಗಳಲ್ಲಿ ಒಂದೇ ಸಮನೆ ತಿರು ಗಾಡಿದ್ದರಿಂದ ಸ್ವಾಮಿ ವಿರಜಾನಂದರು ತುಂಬ ಬಳಲಿದ್ದರು; ಇತ್ತ ಮನಸ್ಸೂ ಮುರಿದಿತ್ತು. ಆದ್ದರಿಂದ ಅವರು ಸ್ವರೂಪಾನಂದರಲ್ಲಿ ಕೆಲವು ದಿನಗಳ ಮಟ್ಟಿಗೆ ತಮಗೆ ರಜೆ ಕೊಡಬೇಕೆಂದು ಕೇಳಿ ಕೊಂಡರು. ಸ್ವರೂಪಾನಂದರೂ ಸಹ ಅವರ ದೇಹ-ಮನಸ್ಸಿನ ಸ್ಥಿತಿಯನ್ನು ಮನಗಂಡು ಅನುಮತಿಯನ್ನು ನೀಡಿದರು. ಮಾಯಾವತಿ ಆಶ್ರಮದ ಕಟ್ಟಡಗಳಿಂದ ಸ್ವಲ್ಪ ದೂರವಾಗಿ, ಕಾಡಿನ ಮಧ್ಯೆ ಒಂದು ಕುಟೀರವಿತ್ತು. ಏಕಾಂತದಲ್ಲಿದ್ದುಕೊಂಡು ಜಪ-ಧ್ಯಾನ ಮಾಡಬೇಕೆಂದು ಯಾರಾದರೂ ಇಚ್ಛಿಸಿದರೆ ಅದನ್ನು ಉಪಯೋಗಿಸಿಕೊಳ್ಳಬಹುದಿತ್ತು. ವಿರಜಾನಂದರು ಅಲ್ಲಿದ್ದುಕೊಂಡು, ಮೌನವನ್ನಾಚರಿಸುತ್ತ ಏಕಾಂತದಲ್ಲಿ ಸಾಧನೆ ಯನ್ನು ಮಾಡಲು ನಿಶ್ಚಯಿಸಿದರು. ಸ್ವರೂಪಾನಂದರು ಆಶ್ರಮ ದಿಂದಲೇ ಊಟ-ತಿಂಡಿಗಳನ್ನು ಕಳುಹಿಸುವ ಏರ್ಪಾಟು ಮಾಡಿ ದರು. ಹೀಗಾಗಿ ಕಾಳೀಕೃಷ್ಣರು ಆಶ್ರಮಕ್ಕೆ ಬರುವ ಆವಶ್ಯಕತೆಯೇ ಇರುತ್ತಿರಲಿಲ್ಲ. ಯಾರೊಂದಿಗೂ ಬೆರೆಯದೆ, ತಮ್ಮ ಮನದಿಚ್ಛೆ ಯಂತೆ ಕಠೋರ ಸಾಧನೆಯಲ್ಲಿ ಮುಳುಗಿದರು. ದಿನವೂ ೧೪-೧೫ ಗಂಟೆಗಳ ಕಾಲ ಜಪಧ್ಯಾನ ಮಾಡುತ್ತಿದ್ದರು.

ಈ ರೀತಿಯ ಏಳೆಂಟು ತಿಂಗಳ ತೀವ್ರವಾದ ಸಾಧನೆಯ ಫಲಸ್ವರೂಪವಾಗಿ ಅವರಲ್ಲಿ ಒಂದು ರೀತಿಯ ಮಾನಸಿಕ ಬಳಲಿಕೆ ಕಂಡುಬಂತು. ದೃಢಸಂಕಲ್ಪ ಮಾಡಿ ಸಾಧನೆಗೆ ತೊಡಗಿದ್ದರಿಂದ, ಏನಾದರಾಗಲಿ ಬಿಡುವುದಿಲ್ಲವೆಂದು ನಿಶ್ಚಯಿಸಿ, ತಮ್ಮ ಸಾಧನಾ ಕ್ರಮವನ್ನೇನೂ ಬದಲಾಯಿಸಲಿಲ್ಲ. ಬಹಳವಾದ ಆಯಾಸ

---

೧ ಪಶ್ಚಿಮ ಪ್ರಾಂತ್ಯಗಳಲ್ಲಿನ ನಗರವೊಂದರಲ್ಲಿ ಒಬ್ಬರು ಸ್ವಾಮಿ ವಿರಜಾ ನಂದರ ಸಂಪರ್ಕಕ್ಕೆ ಬಂದು, ಅವರಿಂದ ಅದೆಷ್ಟು ಆಕರ್ಷಿತರಾಗಿದ್ದರೆಂದರೆ, ಅವರಿಂದ ಮಂತ್ರದೀಕ್ಷೆ ಪಡೆಯಬೇಕೆಂದು ಬಹಳ ಪ್ರಯತ್ನಪಟ್ಟರು. ಸ್ವಾಮಿ ವಿರಜಾನಂದರು ತಾವು ದೀಕ್ಷೆ ಕೊಡುತ್ತಿಲ್ಲವೆಂದು ತಿಳಿಸಿದರು. ಆದರೆ ಆತ ಸ್ವಾಮಿ ವಿರಜಾನಂದರನ್ನಲ್ಲದೆ ಬೇರೆ ಯಾರನ್ನೂ ಗುರುವಾಗಿ ಸ್ವೀಕರಿಸುವುದಿಲ್ಲವೆಂದು ತಿಳಿಸಿದರು. ವಿರಜಾನಂದರು ಅವನೊಂದಿಗೆ ಆಧ್ಯಾತ್ಮಿಕ ಸಾಧನೆಯ ಬಗ್ಗೆ ಕೆಲವು ಸಾಮಾನ್ಯವಾದ ವಿಷಯಗಳನ್ನು ಸಮಾಲೋಚಿಸುತ್ತಿದ್ದರು. ಆತನು ನಗರದ ಒಂದು ಶಿವಮಂದಿರದಲ್ಲಿ ದಿನವೂ ಬಹಳವಾಗಿ ಧ್ಯಾನ-ಧಾರಣಾದಿಗಳನ್ನು ಮಾಡುತ್ತಿದ್ದ. ಸ್ವಾಮಿ ವಿರಜಾನಂದರು ಮಾಯಾವತಿಗೆ ಹಿಂದಿರುಗಿದ ನಂತರ ಆತನು ಕೆಲವು ದಿನಗಳ ಹಿಂದೆ ಆಸನದಲ್ಲಿ ಕುಳಿತು ಧ್ಯಾನಮಗ್ನನಾಗಿದ್ದುಕೊಂಡೇ ತನ್ನ ಶರೀರವನ್ನು ತ್ಯಜಿಸಿರುವುದಾಗಿ ಆತನ ತಮ್ಮನ ಪತ್ರದಿಂದ ತಿಳಿದುಬಂತು.

೨ ಸ್ವಾಮೀಜಿಯವರ ಆರೋಗ್ಯವು ಆ ಸಮಯದಲ್ಲಿ ಬಹಳ ಹದಗೆಟ್ಟಿತ್ತು. ೪-೫ ಮಂದಿ ಸರದಿಯ ಪ್ರಕಾರ ಹಗಲೂ-ರಾತ್ರಿ ಅವರ ಸೇವಾಕಾರ್ಯ ದಲ್ಲಿ ನಿರತರಾಗಿರಬೇಕಾಗಿತ್ತು. ಸ್ವಾಮೀಜಿಯವರು ಒಮ್ಮೆ ತಮ್ಮ ಸೇವೆ ಮಾಡುತ್ತಿದ್ದವರಿಗೆ, 'ನೀವು ಇಷ್ಟು ಮಂದಿ ಸೇರಿಯೂ ಸರಿಯಾಗಿ ಸೇವೆ ಮಾಡಲಾಗುತ್ತಿಲ್ಲ. ಕಾಳೀಕೃಷ್ಣನಾಗಿದ್ದರೆ ಒಬ್ಬನೇ ಈ ಎಲ್ಲ ಕೆಲಸಗಳನ್ನು ನಿಭಾಯಿಸುತ್ತಿದ್ದ' ಎಂದು ಗದರಿಸಿ ಹೇಳಿದ್ದರು.

ವುಂಟಾದಾಗ ಶಾಸ್ತ್ರಗ್ರಂಥಗಳ ಅಧ್ಯಯನಕ್ಕೆ ತೊಡಗುತ್ತಿದ್ದರು. ಹೀಗೆಯೇ ಮತ್ತೂ ಕೆಲವು ತಿಂಗಳುಗಳು ಕಳೆದವು; ಕ್ರಮವಾಗಿ ಬಳಲಿಕೆಯೂ ಹೆಚ್ಚಾಗತೊಡಗಿತು. ಕೊನೆಕೊನೆಗಂತೂ ಮೆದುಳು ಜಡವಾದಂತೆ ಅನಿಸತೊಡಗಿತು, ಶರೀರ-ಮನಸ್ಸು ನಿತ್ರಾಣವಾಗತೊಡಗಿತು. ಒಮ್ಮೆಗೇ ಜಪಧ್ಯಾನವನ್ನು ತೀವ್ರಗೊಳಿಸಿದ್ದು ಸಂಗತವಾಗಲಿಲ್ಲವೆಂಬುದು ಸ್ವಾಮಿ ವಿರಜಾನಂದರಿಗಾಗ ಮನವರಿಕೆಯಾಯಿತು. ಆದ್ದರಿಂದ ಮೌನವನ್ನೂ, ಕಠೋರತೆಯನ್ನೂ ಸಡಿಲಗೊಳಿಸಿ, ಗ್ರಂಥಾಧ್ಯಯನದಲ್ಲಿ ತೊಡಗಿದರು. ಹೀಗೆ ಮಾಡಿಯೂ ಸಹ ಹೆಚ್ಚು ಪ್ರಯೋಜನವಾಗಲಿಲ್ಲ. ಅನಾರೋಗ್ಯ ಮುಂದುವರಿಯುತ್ತಲೇ ಹೋಯಿತು. ಕೊನೆಗೆ ಎಲ್ಲರೂ ಅವರಿಗೆ ಕೊಲ್ಕತ್ತೆಗೆ ಹೋಗಿ ಆಯುರ್ವೇದ ಚಿಕಿತ್ಸೆಯನ್ನು ಪಡೆಯುವ ಸಲಹೆಯಿತ್ತರು. ಇಷ್ಟರಲ್ಲಿ ಹರಿ ಮಹಾರಾಜರು ಅಮೆರಿಕದಿಂದ ಹಿಂದಿರುಗಿ, ಬೃಂದಾವನದಲ್ಲಿ ತಪಸ್ಯೆಯನ್ನು ಆಚರಿಸುತ್ತಿದ್ದರು. ಅವರೊಂದಿಗೆ ಕೆಲವು ದಿನಗಳಿದ್ದು ನಂತರ ಕೊಲ್ಕತ್ತೆಗೆ ಹೋಗುವುದೆಂದು ನಿರ್ಧರಿಸಿದ ಸ್ವಾಮಿ ವಿರಜಾನಂದರು, ಮಾಯಾವತಿಯಿಂದ ಬೃಂದಾವನಕ್ಕೆ ಹೊರಟು ಬಂದರು. ಆಗ ೧೯೦೩ರ ಅಕ್ಟೋಬರ್ ತಿಂಗಳು. ಸುಮಾರು ನಾಲ್ಕೂವರೆ ವರ್ಷಗಳ ನಂತರ ಹರಿ ಮಹಾರಾಜರೊಂದಿಗೆ ಭೇಟಿ; ಇಬ್ಬರಿಗೂ ಪರಸ್ಪರರನ್ನು ಕಂಡು ಬಹಳ ಆನಂದವಾಯಿತು. ಈ ಹಿಂದೆ ಸ್ವಾಮಿ ವಿರಜಾನಂದರು ಅಮೆರಿಕದಿಂದ ಹಿಂದಿರುಗಿದ ಹರಿ ಮಹಾರಾಜರೊಂದಿಗೆ ಪತ್ರ ವ್ಯವಹಾರವನ್ನು ಇಟ್ಟುಕೊಂಡಿದ್ದರು. ಒಂದೆರಡು ಪತ್ರಗಳಲ್ಲಿ ಹರಿ ಮಹಾರಾಜರು ವಿರಜಾನಂದರ ಮಾಯಾವತಿಯ ಏಕಾಂತದ ಸಾಧನೆಯನ್ನು ತುಂಬ ಪ್ರೋತ್ಸಾಹಿಸಿದ್ದರು. ಅವರ ಶರೀರವು ತೀವ್ರವಾದ ಸಾಧನೆಯಿಂದಾಗಿ ಅಸ್ವಸ್ಥಗೊಂಡಿದೆ ಎಂಬುದನ್ನು ತಿಳಿದು, ಪತ್ರವೊಂದರಲ್ಲಿ ದುಃಖವನ್ನು ವ್ಯಕ್ತಪಡಿಸುತ್ತ ಹೀಗೆಂದು ಬರೆದಿದ್ದರು:

ಬೃಂದಾವನ

೩೦.೧.೧೯೦೩

''....ನೀನು ತೀವ್ರವಾದ ಸಾಧನೆ ಮಾಡಲು ಇಚ್ಛೆಪಟ್ಟು ಅದಕ್ಕೆ ಪ್ರಯತ್ನಿಸಿದಾಗಲೆಲ್ಲ ಅಸ್ವಸ್ಥನಾಗುತ್ತಿರುವೆ. ಇದರಿಂದ ನನಗೆ ಬಹಳ ಖೇದವಾಗುತ್ತಿದೆ. ಮಹರ್ಷಿ ಪತಂಜಲಿಗಳು ಸಾಧನೆಗೆ ಅಡ್ಡಿ ಬರುವ ಅನೇಕ ಅಂತರಾಯಗಳನ್ನು ಉಲ್ಲೇಖಿಸಿದ್ದಾರೆ. ನನಗನಿಸಿದಂತೆ ಈ ರೀತಿಯ ಯಾವುದೋ ಒಂದು ಅಂತರಾಯವು ನಿನಗೆ ಅಡ್ಡಿಯನ್ನುಂಟುಮಾಡುತ್ತಿದೆ. ನಿನಗಿರುವ ಉತ್ಸಾಹವೇನೋ ಬಹಳವೆ; ಆದರೆ ಪ್ರಕೃತಿಯು ಪ್ರತಿಕೂಲವಾಗಿದೆ. ಪ್ರಕೃತಿಯನ್ನು ಪ್ರಸನ್ನಗೊಳಿಸಿದ ನಂತರವೇ ನೀನು ಜಯ ಗಳಿಸಬಲ್ಲೆ! ಬಲವಂತದಿಂದ ಏನೂ ಪ್ರಯೋಜನವಿಲ್ಲ; ಹಾಗೆ ಮಾಡಿದರೆ ಉಪಕಾರಕ್ಕಿಂತ ಹೆಚ್ಚಾಗಿ ಅನಿಷ್ಟದ ಸಂಭವವೇ ಹೆಚ್ಚು....''

(ಸ್ವಾಮಿ ತುರೀಯಾನಂದರ ಇಂಗ್ಲಿಷ್ ಪತ್ರದ ಅನುವಾದ)

೧೧

ನಾಲ್ಕೂವರೆ ವರ್ಷಗಳ ನಂತರ ಬೇಲೂರು ಮಠಕ್ಕೆ ಬಂದ ವಿರಜಾನಂದರಿಗೆ ಮಠವು ಬಿಕೋ ಎನ್ನುವಂತಿತ್ತು. ಅದೇ ಕೊಠಡಿ, ಅದೇ ಹಾಸಿಗೆ, ಅದೇ ಸಾಮಾನುಗಳು ಮೊದಲಿನಂತೆಯೇ ಜೋಡಿಸಲ್ಪಟ್ಟಿವೆ; ಆದರೆ ಸ್ವಾಮೀಜಿಯವರೆಲ್ಲಿ! ಹೃದಯ ಸೀಳಿ ದುಃಖವು ಉಮ್ಮಳಿಸಿ ಬಂತು. ಮೂರುವರ್ಷಗಳ ಹಿಂದೆ ಫಿಲಿಭಿತ್ ಸ್ಟೇಷನ್ನಿನಲ್ಲಿ ಸ್ವಾಮೀಜಿಯವರನ್ನು ಬೀಳ್ಕೊಂಡ ದೃಶ್ಯ ಕಣ್ಮುಂದೆ ತೇಲಿ ಬಂತು.

ಮಠಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು (ರಾಖಾಲ್ ಮಹಾರಾಜ್ ಅಥವಾ ರಾಜಾ ಮಹಾರಾಜ್) ವಿರಜಾನಂದರನ್ನು ಕೊಲ್ಕತ್ತೆಯ ವಿಖ್ಯಾತ ಆಯುರ್ವೇದ ಪಂಡಿತರಾದ ಶ್ಯಾಮಾದಾಸ್ ವಾಚಸ್ಪತಿಯವರಲ್ಲಿಗೆ ಕಳುಹಿಸಿ ಒಳ್ಳೆಯ ಚಿಕಿತ್ಸೆ ಮತ್ತು ಪಥ್ಯದ ವ್ಯವಸ್ಥೆಯನ್ನು ಮಾಡಿದರು. ಹೀಗೆ ಮೂರ್ನಾಲ್ಕು ತಿಂಗಳು ಕಳೆಯಿತಾದರೂ ಮೆದುಳಿನ ದುರ್ಬಲತೆ ಮತ್ತು ಶರೀರದ ಆಯಾಸ ಕಡಿಮೆಯಾಗಲಿಲ್ಲ. ರಾಜಾ ಮಹಾರಾಜರು ಮತ್ತು ಮಠದ ಇತರ ಸಂನ್ಯಾಸಿಗಳು ವಿರಜಾನಂದರ ವಿಷಯದಲ್ಲಿ ತುಂಬ ಚಿಂತಿತರಾದರು.

೧೯೦೪ರ ಮಾರ್ಚ್ ತಿಂಗಳಿನಲ್ಲೊಮ್ಮೆ ವಿರಜಾನಂದರಿಗೆ ಜಯರಾಂಬಾಟಿಗೆ ಹೋಗಿ ಶ್ರೀಮಾತೆಯವರ ದರ್ಶನ ಮಾಡಿ ಬರುವ ಪ್ರಬಲ ಇಚ್ಛೆಯಾಯಿತು. ಮಾತೆಯವರನ್ನು ನೋಡಿ ಐದು ವರ್ಷಗಳೇ ಸಂದಿದ್ದವು. ರಾಖಾಲ್ ಮಹಾರಾಜ್ ಸಹ ಹೋಗಿಬರಲು ಅನುಮತಿಯಿತ್ತರು.

ಹತ್ತು ವರ್ಷಗಳ ಹಿಂದೆ ವಿರಜಾನಂದರು ಮಲೇರಿಯಾಕ್ಕೆ ತುತ್ತಾಗಿ ತುಂಬ ಸೊರಗಿ ಹೋಗಿದ್ದನ್ನು ಕಂಡು ಶ್ರೀಮಾತೆಯವರು ಬೆಚ್ಚಿಬಿದ್ದಿದ್ದರು. ಈ ಬಾರಿಯೂ ಹಾಗೆಯೇ ಆಯಿತು. ಆದರೆ ಅವರನ್ನು ನೋಡಿದಾಕ್ಷಣ ಅಂತರ್ಯಾಮಿನಿಯಾದ ತಾಯಿಗೆ ಇದು ದೇಹದ ವ್ಯಾಧಿಯಲ್ಲ ಎಂಬುದು ತಿಳಿದುಹೋಯಿತು. ಅವರು, ''ಧ್ಯಾನವನ್ನು ಎಲ್ಲಿ ಮಾಡುತ್ತಿರುವೆ? ಹೃದಯದಲ್ಲೋ? ಸಹಸ್ರಾರದಲ್ಲೋ?'' ಎಂದು ಕೇಳಿದರು. ''ಸಹಸ್ರಾರದಲ್ಲಿ. ಏಕೆಂದರೆ ಅಲ್ಲಿ ಧ್ಯಾನಿಸಲು ತುಂಬ ಚೆನ್ನಾಗಿರುತ್ತದೆ, ಆನಂದವೂ ಆಗುತ್ತದೆ'' ಎಂದರು ಕಾಳೀಕೃಷ್ಣ.

ಇದನ್ನು ಕೇಳಿ ಶ್ರೀಮಾತೆಯವರು ಗಾಬರಿಯಿಂದ, ''ಮಗು, ನೀನೇನು ಮಾಡುತ್ತಿರುವೆ? ಅದು ಕೊನೆಯ ಹಂತವನ್ನು ತಲುಪಿದ ಪರಮಹಂಸ ಸ್ಥಿತಿ. ಒಮ್ಮೆಗೇ ಮನಸ್ಸನ್ನು ಅಷ್ಟು ಉನ್ನತ ಸ್ತರದಲ್ಲಿಡಲು ಎಲ್ಲರಿಗೂ ಸಾಧ್ಯವೇನು? ಮೊದಲು ಮನಸ್ಸನ್ನು ಸ್ವಲ್ಪ ಹೊತ್ತು ಶಿರದಲ್ಲಿರಿಸಿ, ನಂತರ ಹೃದಯಕ್ಕೆ ಇಳಿಸಿ, ಅಲ್ಲಿ ಇಷ್ಟದೇವತೆಯ ಧ್ಯಾನವನ್ನು ಮಾಡಬೇಕು'' ಎಂದು ತಿಳಿಸಿಕೊಟ್ಟರು.

ಯಾವುದನ್ನು ಅಷ್ಟೊಂದು ನಿಯಮ ಪಾಲಿಸಿ, ಚಿಕಿತ್ಸೆ, ಪಥ್ಯಗಳಿಂದ ಮಾಡಲಾಗಲಿಲ್ಲವೋ ಅದನ್ನು ಶ್ರೀಮಾತೆಯವರ

ಸಾಮಾನ್ಯ ಸಲಹೆಯು ಸಾಧ್ಯಮಾಡಿತು. ತಮ್ಮ ಧ್ಯಾನದ ಪ್ರಣಾಳಿಯನ್ನು ಬದಲಾಯಿಸಿದ ಕೆಲವು ದಿನಗಳಲ್ಲೇ ವಿರಜಾನಂದರು ಅದ್ಭುತ ಉಪಕಾರವನ್ನು ಪಡೆದರು. ಮುಂದೆ ತಮ್ಮ ಇಳಿವಯಸ್ಸಿನಲ್ಲಿ ಈ ಘಟನೆಯನ್ನು ಕುರಿತು, ''ಸಿದ್ಧ ಗುರುವಿನ ಆವಶ್ಯಕತೆ ಅದಕ್ಕಾಗಿಯೇ; ತಾಯಿಯವರ ಆ ಉಪದೇಶಾಮೃತ ನನಗೇನಾದರೂ ಆಗ ದೊರೆಯದಿದ್ದರೆ ನನ್ನ ಜೀವನ ವ್ಯರ್ಥವಾಗಿ ಹೋಗುತ್ತಿತ್ತು. ಚಿರಕಾಲವೂ ರೋಗದಿಂದ ನರಳಬೇಕಾಗುತ್ತಿತ್ತು, ಇಲ್ಲವೇ ಬುದ್ಧಿಭ್ರಮಣೆಯಾಗುತ್ತಿತ್ತು'' ಎಂದು ಭಾವೋದ್ವೇಗದಿಂದ ಹೇಳುತ್ತಿದ್ದರು.

ಹರಿ ಮಹಾರಾಜರು ೧೬ನೇ ಜುಲೈ ೧೯೦೩ರಲ್ಲಿ ಬೃಂದಾವನದಿಂದ ಬರೆದ ಪತ್ರದಲ್ಲಿ ವಿರಜಾನಂದರಿಗೆ ಹೀಗೆಂದು ಬರೆದಿದ್ದರು:

''ನಿನಗಿಚ್ಛೆಯಾದಲ್ಲಿ ನನ್ನಲ್ಲಿ ನಿನ್ನ ಸಂದೇಹಗಳನ್ನೇನೋ ಕೇಳಬಹುದು. ಅದಕ್ಕೆ ಸಮರ್ಪಕವಾದ ಉತ್ತರ ಕೊಡುವಲ್ಲಿ ನನ್ನಿಂದ ಬಹುಶಃ ಕುಂದೂ ಉಂಟಾಗದು. ಆದರೆ ನಿನ್ನ ತೊಂದರೆಗಳನ್ನು ಶ್ರೀಮಾತೆಯವರಲ್ಲಿ ನಿವೇದಿಸಿಕೊಳ್ಳುವುದೇ ಇಹಪರದಲ್ಲೂ ನಿನಗೆ ಶ್ರೇಯಸ್ಕರ. ಹಾಗೂ ಅವರಿಂದಲೇ ನಿನಗೆ ಅತ್ಯುತ್ತಮವಾದ ಪರಿಹಾರ ಸಿಗುವುದೆಂದು ನನ್ನ ಕಡು ವಿಶ್ವಾಸ. ಏಕೆಂದರೆ ಅವರು ನಿನ್ನ ಇಷ್ಟದೈವ ಮತ್ತು ಮಮತೆಯ ತಾಯಿ.''

೧೯೦೪ರ ಮೇ ತಿಂಗಳಲ್ಲಿ ನಿರಂಜನ ಮಹಾರಾಜರು ಹರಿದ್ವಾರದಲ್ಲಿ ತಮ್ಮ ಶರೀರವನ್ನು ತ್ಯಜಿಸಿದ್ದರಿಂದ ಕಾಳೀಕೃಷ್ಣರ ಮನಸ್ಸು ವಿಷಣ್ಣವಾಯಿತು. ನಿರಂಜನರದು ದೀರ್ಘ ಸುಘಟಿತ ದೇಹ, ಗೌರವರ್ಣವಲ್ಲದಿದ್ದರೂ ಅಭಿರಾಮ. ಅವರ ನೋಟ ಹಾಗೂ ಚಲನವಲನದಲ್ಲಿ ಒಂದು ಅಪೂರ್ವ ಗಾಂಭೀರ್ಯ ಹೊರಹೊಮ್ಮುತ್ತಿತ್ತು. ಆಲ್ಖಾಲ್ಲಾ (ನಿಲುವಂಗಿ) ತೊಟ್ಟು , ತಲೆಗೆ ರುಮಾಲು ಸುತ್ತಿ ಹೊರಗೆ ತಿರುಗಾಡಲು ಹೊರಟರೆಂದರೆ ಎಲ್ಲರೂ ಅವರನ್ನು ಬಿಡುಗಣ್ಣಿನಿಂದ ನೋಡುತ್ತಿದ್ದರು. ಅವರದು ಬಾಲಕನಂತಹ ಸರಳ ಸ್ವಭಾವ. ಜನರೊಂದಿಗೆ ಬಹುಬೇಗ ಬೆರೆಯಬಲ್ಲವರಾಗಿದ್ದರು. ಮಠದಲ್ಲಿ ಅವರನ್ನು 'ಗೂಂಡಾ' ಎಂದೇ ಕರೆಯುತ್ತಿದ್ದರು, ಆದರೆ ಹೊರಗಿನ ಜನರು ಅವರ ಮಧುರವಾದ ಮಾತುಗಳಿಂದ ಪ್ರಭಾವಿತರಾಗದೆ ಇರಲಾಗುತ್ತಿರಲಿಲ್ಲ. ವಿರಜಾನಂದರಂತೂ ನಿರಂಜನ ಮಹಾರಾಜರಿಂದ ಪಡೆದ ಸ್ನೇಹಾದರಗಳು ಅಪಾರ. ಅವರೊಂದಿಗೆ ಅನೇಕ ಸ್ಥಳಗಳಲ್ಲಿ ತಿರುಗಾಡಿದ್ದರು, ಜಯರಾಂಬಾಟಿಗೂ ಒಂದೆರಡು ಸಲ ಹೋಗಿಬಂದಿದ್ದರು. ಅಲ್ಲಿಗೆ ಹೋಗಿದ್ದಾಗ ನಿರಂಜನ ಮಹಾರಾಜರು ಲಾಠಿ ಮತ್ತು ಧನುಸ್ಸಿಗಾಗಿ ಉಚಿತವಾದ ಬಲಿತ ಬೊಂಬಿನ ಸಂಗ್ರಹಕ್ಕಾಗಿ ಹಳ್ಳಿಯ ಸುತ್ತಮುತ್ತಲೂ ಬಿದಿರಿನ ಮೆಳೆಗಳಲ್ಲಿ ಹುಡುಕಾಟ ನಡೆಸುತ್ತಿದ್ದರು. 'ನಿರಂಜನನು ಶ್ರೀರಾಮನ ಅಂಶದಿಂದ ಜನ್ಮ ತಳೆದಿದ್ದಾನೆ' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅದಕ್ಕಾಗಿಯೇ ಏನೋ ಅವರಿಗೆ ಬಿಲ್ಲು ಬಾಣ ಮತ್ತು ಲಾಠಿಗಳ ಬಗ್ಗೆ ವಿಶೇಷ ಒಲವು. ಬಿದಿರನ್ನು ಕತ್ತರಿಸಿ

ಸ್ವಾಮಿ ನಿರಂಜನಾನಂದರು (೧೮೬೨–೧೯೦೪)

ತಂದು ಬಹಳ ಪರಿಶ್ರಮ ವಹಿಸಿ, ಚೂರಿಯಿಂದ ಮೇಲ್ಭಾಗವನ್ನು ಹೆರೆದು, ಅದಕ್ಕೆ ಎಣ್ಣೆ ಬಟ್ಟೆಯನ್ನು ಸುತ್ತಿ, ಹೊಗೆ ತಗುಲಿ ಹದವಾಗಲೆಂದು ಅಡಿಗೆ ಮನೆಯ ಹಲಗೆಯ ಮೇಲಿಡುತ್ತಿದ್ದರು. ಈ ನೆನಪುಗಳೆಲ್ಲ ವಿರಜಾನಂದರ ಮನದಂಗಳದಲ್ಲೀಗ ತೇಲಿ ಬಂತು.

* * * *

ಮಠಾಧ್ಯಕ್ಷರಾದ ಪೂಜ್ಯ ಬ್ರಹ್ಮಾನಂದರಿಗೆ ತಮ್ಮ ಪತ್ರ ವ್ಯವಹಾರವನ್ನು ನೋಡಿಕೊಳ್ಳಲು ಒಬ್ಬ ಸಹಾಯಕರ ಅಗತ್ಯವಿತ್ತು. ವಿರಜಾನಂದರನ್ನು ಕೇಳಲಾಗಿ ಅವರು ಆನಂದದಿಂದ ಈ ಕೆಲಸಕ್ಕೆ ಒಪ್ಪಿಕೊಂಡರು. ಶ್ರೀರಾಮಕೃಷ್ಣರ ಮಾನಸಪುತ್ರರಾದ ಬ್ರಹ್ಮಾನಂದರ ಕಿಂಚಿತ್ ಸೇವೆಯ ಅವಕಾಶ ಸಿಕ್ಕಿದ್ದಕ್ಕಾಗಿ ಸಹಜವಾಗಿಯೇ ಸೇವಾಪ್ರವೃತ್ತರಾದ ವಿರಜಾನಂದರು ಸುಕೃತಗೊಂಡರು. ರಾಜಾ ಮಹಾರಾಜರ ಮನಸ್ಸು ಸರ್ವದಾ ಉನ್ನತ ಆಧ್ಯಾತ್ಮಿಕ ಭೂಮಿಕೆಯಲ್ಲಿ ಸಂಚರಿಸುತ್ತಿತ್ತು. ಆದ್ದರಿಂದ ಅವರಿಗೆ ಪತ್ರಗಳನ್ನು ಓದುವುದಾಗಲಿ, ಅದಕ್ಕೆ ಪ್ರತ್ಯುತ್ತರ ಬರೆಯುವುದಾಗಲಿ ಅವರ ಸ್ವಭಾವಕ್ಕೆ ವಿರುದ್ಧವಾಗಿತ್ತು. ಹಲವೊಮ್ಮೆ ವಿರಜಾನಂದರು ಉತ್ತರಿಸಿದ ಪತ್ರಗಳನ್ನು ಅವರ ಸಹಿಗಾಗಿ ಕೊಂಡೊಯ್ದು ೧೦–೧೨ ದಿನಗಳೇ ಕಳೆದರೂ, ಸಹಿಯಾಗದೇ ಹಾಗೆಯೇ ಉಳಿದಿರುತ್ತಿದ್ದವು. ಸಹಿಗಾಗಿ ಒತ್ತಾಯಿಸಿದಾಗ ಕೆಲವೊಮ್ಮೆ ಅವರು 'ನೀನೇ ಸಹಿ ಮಾಡಿಬಿಡಪ್ಪ' ಎಂದು ಹೇಳಿದ್ದುಂಟು. ವಿರಜಾನಂದರೂ ಸಹ ಹಾಗೆಯೇ ಮಾಡಿದ್ದುಂಟು. *(ಮುಂದುವರಿಯುವುದು)*

ಸೋಫಿಯಾ ಬೀಬಿ

'ಅಮ್ಮಾಜಾನ್'

ಮೂಲ : 'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ
ಅನುವಾದ : ಸ್ವರ್ಣಗೌರಿ

ಸ್ವಾಮಿ ವಿವೇಕಾನಂದರು ತಮ್ಮ ಶ್ರೀನಗರದ ಭೇಟಿಯ ಸಂದರ್ಭದಲ್ಲಿ ಡಾಲ್ ಲೇಕ್‌ನ ದೋಣಿ ಮನೆಯಲ್ಲಿ ತಂಗಿದ್ದರು. ಒಂದು ದಿನ ಸ್ವಾಮೀಜಿ ಮುಸ್ಲಿಂ ಧರ್ಮಕ್ಕೆ ಸೇರಿದ ಅಂಬಿಗನ ಮಗಳು ಸೋಫಿಯಾಳನ್ನು ಜಗನ್ಮಾತೆಯೆಂದು ಪೂಜಿಸಿದರು. ಆ ಸಮಯದಲ್ಲಿ ಸೋಫಿಯಾಳ ವಯಸ್ಸು ಕೇವಲ ನಾಲ್ಕು ವರ್ಷ. ಅವಳ ಮನಸ್ಸು ಅದೆಷ್ಟು ಮುಗ್ಧವಾಗಿತ್ತೆಂದರೆ ಒಮ್ಮೆ ಒಂದು ನೀಲಿ ಬಣ್ಣದ ಪುಷ್ಪದೊಡನೆ ಇಪ್ಪತ್ತು ನಿಮಿಷಗಳ ಕಾಲ ಆಟವಾಡಿದಳು! ಸ್ವಾಮೀಜಿ ಕುಮಾರಿ ಪೂಜೆ ಮಾಡುವುದನ್ನು ವೀಕ್ಷಿಸುವುದೇ ದೇವದುರ್ಲಭ ದೃಶ್ಯವೆನ್ನುತ್ತಾರೆ. ಎಂತಹವರ ಹೃದಯವೂ ಭಕ್ತಿಯ ಶೈತ್ಯದಿಂದ ಕರಗಿಹೋಗುತ್ತಿತ್ತಂತೆ.

ಸ್ವಾಮೀಜಿ ಕಾಶ್ಮೀರಕ್ಕೆ ವಿದಾಯ ಹೇಳಿದಾಗ ಈ ಮುಗ್ಧ ಬಾಲಕಿ ಸೇಬಿನ ಹಣ್ಣುಗಳನ್ನು ತುಂಬಿದ ಬುಟ್ಟಿಯನ್ನು ಹೊತ್ತು, ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಬಂದಳು. ಬುಟ್ಟಿಯನ್ನು ಗಾಡಿಯಲ್ಲಿಟ್ಟು ಸ್ವಾಮೀಜಿ ಕಣ್ಮರೆಯಾಗುವವರೆಗೆ ನಿಂತಿದ್ದಳು! ಸೋದರಿ ನಿವೇದಿತಾ ಈ ಮನೋಜ್ಞವಾದ ಘಟನೆಯನ್ನು ಕುರಿತು ಸುಂದರವಾಗಿ ವರ್ಣಿಸುತ್ತಾಳೆ: 'ಆ ಚಿಕ್ಕ ಹುಡುಗಿಗೆ ನಾಲ್ಕು ವರ್ಷ; ದಷ್ಟಪುಷ್ಟವಾಗಿದ್ದಳು. ಅವಳು ಮುಖ್ಯ ಅಂಬಿಗನ ಮಗಳು. ಆ ಅಂಬಿಗನಿಗೆ ಸ್ವಾಮೀಜಿ ಮೇಲಿನ ಭಕ್ತಿಯನ್ನು ನಾವಾಗಲೇ ತಿಳಿಸಿರುವೆವು. ಆ ಹುಡುಗಿಯ ತಲೆಯ ಮೇಲೆ ಒಂದು ಹಣ್ಣಿನ ಬುಟ್ಟಿ ಇತ್ತು. ಅವಳಿಗೆ ಇನ್ನು ಸರಿಯಾಗಿ ನಡೆಯುವುದಕ್ಕೂ ಬಾರದು. ಆದರೂ ದೃಢವಾಗಿ ಮುಂದಡಿಯಿಡುತ್ತಾ ಸ್ವಾಮೀಜಿ ಸಮೀಪಕ್ಕೆ ಬಂದಳು. ಕಾಶ್ಮೀರವನ್ನು ಬಿಟ್ಟು ಅಗಲುತ್ತಿದ್ದ ಸ್ವಾಮೀಜಿಯವರ ಪ್ರಯಾಣಕ್ಕಾಗಿ ಆ ಹಣ್ಣನ್ನು ನೀಡಿ, ಮುಗುಳ್ನಗೆಯೊಂದಿಗೆ ನಿಂತು ಅವರನ್ನು ಬೀಳ್ಕೊಟ್ಟಳು.'

ಸೋಫಿಯಾ ಬೀಬಿ ಹಿಂದಿ, ಉರ್ದು ಭಾಷೆಗಳಲ್ಲಿ ಓದಲು, ಬರೆಯಲು ಕಲಿತಿದ್ದಳು. ಈ ದೋಣಿ ಮನೆಗಳಲ್ಲಿ ಬೆಸ್ತರು ತಮ್ಮ ಕುಟುಂಬದೊಡನೆ ವಾಸಿಸುತ್ತಿದ್ದರು. ಇವರು ಉದಾರಿಗಳಾದ ಕಾರಣ ಅನೇಕ ದೊಡ್ಡ ವ್ಯಕ್ತಿಗಳು ಆಗಾಗ್ಗೆ ದೋಣಿ ಮನೆಯಲ್ಲಿ ತಂಗುತ್ತಿದ್ದರು. ಹೀಗೆ ಸೋಫಿಯಾಗೆ ರಾಜವಂಶಸ್ಥರೊಡನೆ ಸಂಬಂಧ ಬೆಸೆದಿತ್ತು. ಸೇವಾಮನೋಭಾವದಿಂದ ಕೂಡಿದ ಸೋಫಿಯಾಳಲ್ಲಿ ದಯೆ ಮತ್ತು ಗಾಂಭೀರ್ಯ ಬಾಲ್ಯದಿಂದಲೇ ಮೈವೆತ್ತ ಗುಣಗಳು. ಒಮ್ಮೆ ತನ್ನ ಪತಿಯ ಮನೆಯ ಬಳಿ ಗುಡಿಸಲೊಂದು ಅಗ್ನಿಗೆ ಆಹುತಿಯಾಯಿತು. ಕೂಡಲೇ ಆಹಾರ ಸಾಮಗ್ರಿ ಹಾಗೂ ಇತರ ಮನೆಬಳಕೆಯ ವಸ್ತುಗಳನ್ನು ನೀಡುವ ಮೂಲಕ ಸೋಫಿಯಾ ಅವರಿಗೆ ನೆರವಾದಳು. ಅಷ್ಟೇ ಅಲ್ಲದೆ ಗಲೀಚಾ (ರತ್ನಗಂಬಳಿ) ತಯಾರಿಸುವ ಕಸುಬಿನಲ್ಲಿ ತರಬೇತಿ ಕೊಡಿಸಿದಳು. ಇವಳ ಸಮಯೋಚಿತ ನೆರವಿನಿಂದ ಆ ಕುಟುಂಬ ಆರ್ಥಿಕವಾಗಿ ಬಹುಬೇಗನೆ ಚೇತರಿಸಿಕೊಂಡಿತು. ಆದ್ದರಿಂದ ಅವರೆಲ್ಲರೂ ಆಕೆಯನ್ನು ಪ್ರೀತಿಯಿಂದ 'ಅಮ್ಮಾಜಾನ್' ಎಂದು ಕರೆಯುತ್ತಿದ್ದರು. ಜನರೆಲ್ಲಾ 'ಫಿರ್'(ಸಾಧು)ರಿಂದ ಆಶೀರ್ವದಿಸಲ್ಪಟ್ಟವಳೆಂದು ಆಕೆಯನ್ನು ಗೌರವಿಸುತ್ತಿದ್ದರು. ಚಂದನವಾಡಿಯಲ್ಲಿದ್ದ ತನ್ನ ಜಮೀನಿನಲ್ಲಿ ಸ್ಥಳೀಯ ಬಡ ಹೆಣ್ಣುಮಕ್ಕಳಿಗೆ ಕೆಲಸ ನೀಡಿದ್ದಳು. ಬಂದ ಲಾಭದಲ್ಲಿ ಶೇಕಡಾ ೬ ಅವರಿಗೆ, ತನಗೆ ಶೇಕಡಾ ೧೦. ಆ ಉತ್ಪನ್ನಗಳು ಅದೆಷ್ಟು ಚೆನ್ನಾಗಿದ್ದವೆಂದರೆ, ದಳ್ಳಾಳಿಗಳು ಮುಂಗಡ ಹಣ ನೀಡಿ ಕಾಯ್ದಿರಿಸಿಕೊಳ್ಳುತ್ತಿದ್ದರು. ಸಾಧುಗಳು, ಫಕೀರರು, ಮೌಲ್ವಿಗಳೆಂದರೆ ಅಪಾರ ಗೌರವವುಳ್ಳ ಅವಳನ್ನು ಅವರುಗಳು ಸಹ 'ಸೋಫಿಯಾ ತಾಯಿ' ಎಂದು ಅಕ್ಕರೆಯಿಂದ ಸಂಬೋಧಿಸುತ್ತಿದ್ದರು. ಶ್ರೀನಗರದ ಅನೇಕ ಹಿಂದೂ ದೇವಾಲಯಗಳಲ್ಲಿ ಆಕೆ ಹಣ್ಣು ಹಂಪಲಗಳನ್ನು ಹಂಚುತ್ತಿದ್ದಳು. ಚಂದನವಾಡಿಯಲ್ಲಿ ಅಮರನಾಥ ಯಾತ್ರಿಕರಿಗೆಂದು ವಿಶ್ರಾಂತಿಧಾಮವನ್ನೂ ಆಕೆ ನಿರ್ಮಿಸಿದ್ದಳು.

ಅವಳ ಜೀವನ ಮುಂದೆ ರೂಪುಗೊಂಡ ಬಗೆಯನ್ನು ನೆನೆದಾಗ ಸ್ವಾಮೀಜಿಯವರ ಈ ವಾಣಿ ನೆನಪಾಗುವುದು: ''ಜಗನ್ಮಾತೆಯ ಜೀವಂತ ಸ್ವರೂಪಿಣಿಯರಾದ ಹೆಂಗಸರನ್ನು ಉದ್ಧರಿಸಲು ಪ್ರಯತ್ನಿಸದಿದ್ದಲ್ಲಿ ನೀವು ಮುಂದುವರಿಯಲು ಬೇರಾವ ಹಾದಿಯೂ ಇಲ್ಲ...''

(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೮, ಪು. ೨೧೩)

ಶ್ರೀ ತುಲಸೀ ಅಮೃತಪಾನ
ಒಂಬತ್ತು ಕಥೆಗಳು

ಸ್ವಾಮಿ ಶಿವಾತ್ಮಾನಂದರ '**ಶ್ರೀ ತುಲಸೀ ಅಮೃತಪಾನ ಒಂಬತ್ತು ಕಥೆಗಳು**' ಒಂದು ವಿಶಿಷ್ಟ ಸಂಕಲನ, ವಿಶಿಷ್ಟ ಸಾಹಿತ್ಯ ಪ್ರಕಾರವೂ ಹೌದು.

ಮುಖಪುಟದಲ್ಲಿ 'ಒಂಬತ್ತು ಕಥೆಗಳು' ಎಂದು ನಮೂದಿಸಲಾಗಿದ್ದರೂ ಅತಿರಿಕ್ತವಾಗಿ ಕೊನೆಯಲ್ಲಿ ಇನ್ನೆರಡು ವ್ಯಾಖ್ಯಾನಗಳೂ ಸೇರಿ – ಹನ್ನೊಂದು ಕಥೆಗಳು ಎನ್ನಬಹುದಾದಂತಹ ಸಂಕಲನವಿದು. ಇದನ್ನು ಲೇಖಕರು ತಮ್ಮ ದೀಕ್ಷಾಗುರುಗಳಾದ ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜೀ ಮಹಾರಾಜರಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿದ್ದಾರೆ. ಉದಕಮಂಡಲ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದರ ಶುಭಾಶೀರ್ವಚನ ಮುನ್ನುಡಿಯ ಜತೆಜತೆಗೆ ಸಂಕಲನ ಕೊನೆಯಲ್ಲಿ ಸೇರಿಸಿರುವ ಡಾ. ಚಿಂತಾಮಣಿ ಕೊಡ್ಲಕೆರೆಯವರ 'ಪುರಾಣ ಕಥನಗಳು ಆಧುನಿಕ ನೋಟದಲ್ಲಿ' ಎಂಬ ವಿದ್ವತ್ಪೂರ್ಣ ಹಿಂಬರಹ, ಶ್ರೀ ಬಿ.ಜಿ ಜಗದೀಶ ಸಾಗರರವರ ಸಂಕಲನದ ಬಗೆಗಿನ ವಿಚಾರಪೂರ್ಣ ಟಿಪ್ಪಣಿ 'ಮಾನವನಿಗೆ ದೈವದ ನಂಟಿನ ಅನಾವರಣ', ಹಾಗೂ ಇವೆಲ್ಲವುಗಳ ನಡುವೆಯೂ ಅರಳಿ ಬಂದ, ಲೇಖಕರೇ ಬರೆದ, 'ಮಹಾಸಮಷ್ಟಿಭಾವ'ವೆಂಬ ಕಿರುಪ್ರಬಂಧ — ಸಂಕಲನದ ವಾಚನೀಯ ಮೌಲ್ಯವನ್ನು ಇನ್ನಷ್ಟು ವರ್ಧಿಸಿದೆ. ಇಷ್ಟೆಲ್ಲದರ ನಂತರವೂ ಒಂದು ರೀತಿಯ ಸ್ಪಷ್ಟೀಕರಣದ ರೀತಿಯಲ್ಲಿ ಸೇರಿಸಲ್ಪಟ್ಟ ಲೇಖಕರ 'ಅಮೃತತ್ವದೆಡೆಗೆ' ಎನ್ನುವ ಇನ್ನೊಂದು ಕಿರುಲೇಖನ, ಕಥಾವಸ್ತುಗಳ ಹಿಂದಿನ ಸ್ಫೂರ್ತಿ ಮತ್ತು 'ಅವುಗಳನ್ನು ಕಥೆಯಾಗಲು ತವಕಿಸುವ ಶಕ್ತಿ' ಹೇಗೆ ಈ ಪ್ರಕಟಣೆಯ ಹಿನ್ನೆಲೆಯನ್ನು ಸೃಷ್ಟಿಸಿತು ಎಂಬ ರಹಸ್ಯವನ್ನು ತೆರೆದಿಡುತ್ತದೆ. ''ಸ್ವಾಮಿ ಶಿವಾತ್ಮಾನಂದರು ಬರೆದಿರುವ ಈ ಲೇಖನವನ್ನೋದಿದ ನಂತರವೇ ಓದುಗರು ಕಥೆಗಳನ್ನು ಪ್ರವೇಶಿಸುವುದು ಒಳ್ಳೆಯದು'' ಎಂಬ ಕೊಡ್ಲಕೆರೆಯವರ ಕಿವಿಮಾತು ತುಂಬಾ ಪ್ರಸ್ತುತವಾಗಿದೆ.

ಸಂಕಲನದ ಅಗ್ರಕಥೆ – '**ಶ್ರೀ ತುಲಸೀ**' (ಇದೊಂದು ನೀಳ್ಗತೆ ಕೂಡ ಹೌದು): ''ಕೃಷ್ಣಾನದಿಯ ಕೊಳ್ಳದಲ್ಲಿ ವಿಪುಲವಾಗಿ ಒಣ ತುಲಸೀಬೀಜಗಳನ್ನು ಕಲೆಹಾಕಿದ ನಂತರ, ಈ ತುಲಸೀ ಮಾತೆಯ ಅನುಗ್ರಹಕ್ಕಾಗಿ ಪ್ರಾರ್ಥಿಸಿಕೊಂಡಾಗ, ಶ್ರೀದೇವಿಯೇ ಅನುಗ್ರಹಿಸಿದ ಕಥನವಿದು'' ಎಂದು ಲೇಖಕರೇ ಹೇಳಿಕೊಂಡಿದ್ದಾರೆ. ಅವರೇ ಬರೆದ ಮುನ್ನುಡಿಯ (ನಮನದ ನುಡಿಗಳು) ''ಇದು ನಾನು ಬರೆದ ಕಥೆಗಳಲ್ಲ, ನಾನು ಸಾಧನ ಮಾತ್ರವಾಗಿರುವೆ'' ಎಂದು ಹೇಳಿಕೊಂಡಿರುವ ವಿನೀತ ನುಡಿಯ ಸಮರ್ಥನೆಯಾಗಿದೆ. ಬ್ರಹ್ಮವೈವರ್ತ ಪುರಾಣ, ಪದ್ಮಪುರಾಣ, ಶಿವಪುರಾಣ ಮೊದಲಾದ ಹಲವು ಪುರಾಣಗಳಲ್ಲಿ ಚೆದುರಿರುವ ಶ್ರೀ ತುಲಸೀ ಕಥಾನಕದ ವಿವಿಧ ತುಣುಕುಗಳೂ ಈ ಕಥನದಲ್ಲಿ ಸೇರಿ, ಒಂದು



ಕೃತಿ : ಶ್ರೀ ತುಲಸೀ ಅಮೃತಪಾನ – ಒಂಬತ್ತು ಕಥೆಗಳು
ಲೇಖಕರು : ಸ್ವಾಮಿ ಶಿವಾತ್ಮಾನಂದ
ಪ್ರಕಾಶಕರು : ವಂಶಿ ಪಬ್ಲಿಕೇಷನ್ಸ್, ನಂ.4, ಗಾಯತ್ರಿ ಕಾಂಪ್ಲೆಕ್ಸ್, ಟಿ.ಬಿ. ಬಸ್ ನಿಲ್ದಾಣ ಹತ್ತಿರ, ಬಿ.ಎಚ್.ರಸ್ತೆ, ಸುಭಾಷ್‌ನಗರ, ನೆಲಮಂಗಲ, ಬೆಂಗಳೂರು – 562123 ಫೋನ್: 9916595916
ಪುಟಗಳು: 174 *ಬೆಲೆ* : 150/

ಕಿರುಗತೆಯಾಗಿ ನಿರೂಪಿಸಲ್ಪಡಬಹುದಾದ ಕಥಾವಸ್ತುವನ್ನು ಬಹುಳವಾಗಿ ಹಿಗ್ಗಿಸಿದೆ. ಇದು ತುಳಸಿಯೊಬ್ಬಳ ಕಥೆಯಲ್ಲ; ತುಳಸಿಯ ಪ್ರಭೇದಗಳಾದ ಕೃಷ್ಣತುಳಸಿ, ರಾಮತುಳಸಿ, ಕಾಡುತುಳಸಿ, ಬಿಲ್ವಶಿವತುಂಬೆಗಳ ಕಿರುಗತೆಗಳು, ಗಂಡಕೀಗರ್ಭದ ಸಾಲಿಗ್ರಾಮದ ಕಥೆ, ಶ್ರೀಕೃಷ್ಣನೊಂದಿಗೆ ರಾಸಮಂಡಲದ ರಾಸೋತ್ಸವದಲ್ಲಿ ಮುಳುಗುವ ರಾಧೆಯ ಕಥೆ, ಗೋಲೋಕ, ಭೂಲೋಕಗಳ ಕಥೆ, ವಿಷ್ಣುವಿನ ಕಥೆ, ವಿರಜಾನದಿಯ ಹುಟ್ಟು–ಹರಿವಿನ ಕಥೆ, ಸುಧಾಮನು ಶಂಖಚೂಡಾಮಣಿಯಾಗಿ ಮತ್ತೆ ಹುಟ್ಟಿದ ಕಥೆ —ಹೀಗೆ ಹಲವು ಚಿಕ್ಕಪುಟ್ಟ ಆದರೆ ರಂಜನೀಯವಾದ ಕಿರುಗತೆ

ಗಳು ಕೂಡಿಕೊಂಡು ಇದೊಂದು 'ನವಪುರಾಣ'ವೇ ಆಗಿದೆಯೆಂಬ ಕೊಡ್ಲಕೆರೆಯವರ ಉದ್ಗಾರ ಸಮರ್ಥನೀಯ.

'ಅಮೃತಪಾನ' – ಶ್ರೀಶಂಕರರ ಬಾಲ್ಯಕಾಲದ ಕುರಿತು ಉಳಿದು ಬಂದಿರುವ (ಶ್ರೀಶಂಕರರು ದೇವಿಯ ಮೊಲೆಹಾಲು ಕುಡಿದು, ಅದರಿಂದ ತನ್ನ ಅವತರಣಕ್ಕೆ ತಾಯಿಯ ಪೂರ್ಣ ಅನುಗ್ರಹ ಪಡೆದಿದ್ದರು ಎಂಬ) ದಂತಕಥೆಯ ತುಣುಕೊಂದರಿಂದ ಪ್ರೇರಿತವಾದ ಕಥೆ. ಪ್ರಸಿದ್ಧ ಬಾದಾಮಿ–ಪಟ್ಟದಕಲ್ಲು–ಐಹೊಳೆ ಕ್ಷೇತ್ರಗಳ ನಡುವಿನಲ್ಲಿರುವ ಮಹಾಕೋಟೇಶ್ವರ ಕ್ಷೇತ್ರದ ಸ್ಥಳಪುರಾಣದಲ್ಲಿ ದೊರೆತ ದಿವೋದಾಸನ ಕಾಲದ ದೃಷ್ಟಾಂತವೊಂದರಿಂದ ಪ್ರೇರಿತವಾದ ಕಥೆ **'ದತ್ತಗಿರಿಯಲ್ಲಿ'**. ಶ್ರೀರಾಮಕೃಷ್ಣಾಶ್ರಮದ ಪ್ರಕಟಣೆಯಾದ **'ಶ್ರೀ ಚೈತನ್ಯ ಮಹಾಪ್ರಭು'** ಕೃತಿಯನ್ನು ಓದಿದ ಸಂದರ್ಭದಲ್ಲಿ ಪ್ರೇರಿತವಾದ ಕಥೆ **'ಜಯ ಹರಿದಾಸ'**. ಏಳನೇ ಕಥೆಯಾದ **'ಸೇವಾನಾಥ್ ಮಹಾರಾಜ್'** ಅದೇ ಹೆಸರಿನ ಮಹಾಸಾಧಕರೋರ್ವರ ಜೀವನೇತಿಹಾಸದಲ್ಲಿನ ಒಂದು ತುಣುಕಿನ ವಿಸ್ತರಣ. ಶ್ರೀಮತಿ ವಸುಂಧರಾ ದೇಸಾಯಿಯ 'ಉಳಿದ ಹಂಪಿ ಮತ್ತು ಗುರುವಿಷ್ಟಪ್ಪಯ್ಯ' ಕೃತಿ **'ಗೋಪುರ'** ಕಥೆಯ ಹಿಂದಿನ ಪ್ರೇರಣೆ. ವರದಹಳ್ಳಿಯ ಮಹಾಮಹಿಮ ಶ್ರೀ ಶ್ರೀಧರ ಸ್ವಾಮಿಗಳ ಚರಿತ್ರೆಯನ್ನು ಓದಿದ ನಂತರ ಹೊಳೆದುದು **'ಹರಕೆ'** ಕಥೆ.

ಒಂಬತ್ತು ಕಥೆಗಳು ಎಂಬ ಶೀರ್ಷಿಕೆ ಹೊತ್ತ ಈ ಸಂಕಲನದಲ್ಲಿ **'ಕವಚ'** ಮತ್ತು **'ಶ್ರೀರಾಮ ಮುದ್ರಿಕೆಗಳು'** (ಇದು ಈ ಮೊದಲೇ ಪ್ರಕಟಗೊಂಡಿದೆ) ಈ ಎರಡು ಪ್ರವಚನಗಳನ್ನು ಅನುಬೋಧೆಯಾಗಿ ಸೇರಿಸುವುದು ಆಕ್ಷೇಪಾರ್ಹವಲ್ಲದಿದ್ದರೂ, ಅಂತಹ ಅನಿವಾರ್ಯತೆ ಏಕೆ ಉಂಟಾಯಿತು ಎಂಬುದು ಸ್ಪಷ್ಟವಾಗಿಲ್ಲ.

ಮುಗಿಸುವ ಮುನ್ನ ಲೇಖಕರು ಆಹ್ಲಾದಕರ ಪ್ರತಿಮೆಗಳನ್ನು ಸೃಷ್ಟಿಸುವುದಕ್ಕಾಗಿ ಭಾಷೆ–ಪದ–ಉಪಮೆಗಳನ್ನು ಹೇಗೆ ಸಕ್ಷಮವಾಗಿ ದುಡಿಸಿಕೊಳ್ಳುತ್ತಾರೆ ಎಂಬುದಕ್ಕೆ ಒಂದು ಉದಾಹರಣೆ – ಒಂದು ಸಾಮಾನ್ಯವೆನ್ನಿಸಬಹುದಾದ 'ಕಲ್ಲುಕೊಳ್ಳ'ವನ್ನು ವರ್ಣಿಸಿದ ಬಗೆ: *('ಶ್ರೀತುಲಸೀ' ಕಥೆ, ಪು.೧)*

''.... ಒಂದು ದಿನ ಈ ಕಲ್ಲುಕೊಳ್ಳದತ್ತ ಹೋದೆ. ಉತ್ತರ ದಿಕ್ಕಿಗೆ ಇಳಿಮುಖವಾಗಿದ್ದ ಕಲ್ಲುಕೊಳ್ಳದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹರಿದಿರುವ ಕಲ್ಲುಬಂಡೆಯ ಪದರಿನ ಸಾಲುಗಳಿದ್ದವು. ಈ ಕಲ್ಲುಮಣ್ಣಿನ ಸಂದುಗೊಂದಿನ ಪದರುಗಳಲ್ಲಿ ಮೊಳಕಾಲು ಎತ್ತರಕ್ಕೆ ಬೆಳೆದಿರುವ ಅವರಿಕೆ, ಬಂದರಿಕೆ, ಎಲಚಿ, ಕಾರೆಗಿಡ ಮೊದಲಾದ ಗಿಡಗಂಟಿಗಳು, ಅಲ್ಲಲ್ಲಿ ಮುಳ್ಳುಜಾಲಿಗಿಡಗಳು, ವಿಕಾರದ ರಟಗಳ್ಳಿಯ ಕೊಂಬೆಗಳು, ಎಂಥೆಂಥವೋ ಮುಳ್ಳುಗಿಡಗಳಿದ್ದವು. ಕಲ್ಲುಪದರುಗಳು ಹರಡಿಕೊಂಡಿದ್ದ ಆ ಕಲ್ಲುಭೂಮಿಯಲ್ಲಿ ಒಂದೆಡೆ ಆ ಕಲ್ಲುಸಾಲೇ ಸೋಪಾನದಂತೆ, ಮತ್ತೊಂದೆಡೆ ಅಡ್ಡಗೋಡೆಯಂತೆ, ಇನ್ನೊಂದೆಡೆ ಕೊರಕಲು ಇಳಿಜಾರಿನಂತೆ, ... '' ಇಂತಹ ವರ್ಣನಾ ಸೌಷ್ಠವಗಳು ಓದುಗನ ಮನಸ್ಸನ್ನು ಕ್ಷಣಕಾಲವಾದರೂ ಸೆರೆಹಿಡಿಯದಿರದು.

ಇಲ್ಲಿ ಕಾಣಸಿಗುವ ನಿರೂಪಣಾ ಕೌಶಲ್ಯ, ಭಾಷಾಸಂಪತ್ತು, ವ್ಯಾವಹಾರಿಕತೆಗೆ ಅಧ್ಯಾತ್ಮಿಕ ತಿರುವನ್ನು ಕೊಡುವ ಚಳಕ — ಇವೆಲ್ಲವೂ ಸ್ತುತ್ಯರ್ಹ.

ಇಲ್ಲಿನ ಕಥಾವಸ್ತುಗಳನ್ನು ಯಾವುದೇ ಒಂದು ನಿರ್ದಿಷ್ಟ ಸೂತ್ರಕ್ಕೆ ಕಟ್ಟುಬಿದ್ದು ಉದ್ದೇಶಪೂರ್ವಕವಾಗಿ ಆರಿಸಿಲ್ಲ. ಸಾಧಕನೋರ್ವನು ತನ್ನ ಬಾಳಿನ ವಿವಿಧ ಘಟ್ಟಗಳಲ್ಲಿ ಸುಮಾರು ಐದಾರು ವರ್ಷಗಳ ಅವಧಿಯಲ್ಲಿ, ಹಠಾತ್ತಾಗಿ, ಮುಖಾಮುಖಿಯಾಗಿ, ಚರ್ಮಚಕ್ಷುಗಳ ಸಂಪರ್ಕಕ್ಕೆ ಬಂದ ವಿವಿಧ ನೈಸರ್ಗಿಕ, ಚಾರಿತ್ರಿಕ, ಪೌರಾಣಿಕ, ಸ್ಥಾವರ–ಜಂಗಮ ವಸ್ತುವಿಶೇಷಗಳನ್ನು ಅಪ್ರಯತ್ನವಾಗಿ ತನ್ನ ಮೂರನೆಯ ಒಳಗಣ್ಣಿನಿಂದ ಅವಲೋಕಿಸಿ, ಅವುಗಳಿಗೆ ತನ್ನದೇ ಆದ ಒಂದು ಸುಂದರ ಚೌಕಟ್ಟನ್ನು ನಿರ್ಮಿಸಿ, ವಿಶಾಲವಾದ ಮನೋಭಿತ್ತಿಯಲ್ಲಿ ತೂಗುಹಾಕಿದಂತಿದೆ, ಈ ಸಂಕಲನ.

ಈ ಮತ್ತು ಇತರ ಕಾರಣಗಳಿಗಾಗಿ, ಒಮ್ಮೆಲೇ ಓದಿ ಸಂಗ್ರಹಕ್ಕೆ ಸೇರಿಸುವ ಕೃತಿ ಇದಾಗಿರದೆ, ಸ್ವಲ್ಪ ಸ್ವಲ್ಪವಾಗಿಯೇ, ಹಲವೊಮ್ಮೆ ಮರಳಿ ಮರಳಿ ಓದಿದಾಗ, ಕಬ್ಬಿನ ಜಲ್ಲೆಯನ್ನು ನಿಧಾನವಾಗಿ ಜಗಿದಾಗ ಸಿಗುವ ರಸಸ್ವಾದನೆಯ ಹರ್ಷ, ಸಂತೃಪ್ತಿಗಳ ಅನುಭವ ಕೆಲವರಿಗಾದರೂ ಸಿಗದಿರದು.

— ವಿಜಯನಾಥ ಭಟ್

ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಶಿಬಿರ)

2018 ಜುಲೈ 4 ರಿಂದ 8ರ ವರೆಗೆ ; *ಮಾಧ್ಯಮ:* ಕನ್ನಡ ಮತ್ತು ಇಂಗ್ಲಿಷ್

ಊಟ ಹಾಗೂ ವಿಶೇಷ ವಸತಿ ಸೌಲಭ್ಯಗಳಿರುವ ಐದು ದಿನಗಳ ಶಿಬಿರಕ್ಕಾಗಿ: ರೂ. 2,500/– ಮಾತ್ರ

*ಶಿಬಿರದ ಎಲ್ಲ ಐದು ದಿನಗಳು ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. *140 ಶಿಬಿರಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ. *ಒಂದು ವೇಳೆ ಆಯ್ಕೆಗೊಂಡ ಶಿಬಿರಾರ್ಥಿಗಳು ಭಾಗವಹಿಸದಿದ್ದಲ್ಲಿ ಅವರ ಪ್ರತಿನಿಧಿಯಾಗಿ ಬೇರೆಯವರಿಗೆ ಅವಕಾಶವಿರುವುದಿಲ್ಲ. *ಒಂದು ವೇಳೆ ಶಿಬಿರಾರ್ಥಿಗಳು ಶಿಬಿರಕ್ಕೆ ಭಾಗವಹಿಸದಿದ್ದಲ್ಲಿ ರೂ. 2000/– ಅನ್ನು ಮಾತ್ರ ಹಿಂದಿರುಗಿಸಲಾಗುವುದು. *ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ವಿಳಾಸವಿರುವ (10cm x 23cm) ಲಕೋಟೆಗೆ ರೂ.5/– ಅಂಚೆ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟರ ಹೆಸರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ. *ಅರ್ಜಿಫಾರಂಗಳನ್ನು www.rimse.org.in ವೆಬ್‌ಸೈಟಿನಿಂದಲೂ ಡೌನ್‌ಲೋಡ್ ಮಾಡಿ, ಭರ್ತಿಮಾಡಿ, ಸ್ಕ್ಯಾನ್ ಮಾಡಿ ಕಳುಹಿಸಬಹುದು. *ತುಂಬಿದ ಅರ್ಜಿಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ಜೂನ್ 15, 2018.

ವಿಳಾಸ: Ramakrishna Institute of Moral and Spiritual Education, Yadavagiri, Mysore-570020
Phone:0821-2417666 ; E-mail: mysuru.rimse@rkmm.org; Website: www.rimse.org.in

ಶ್ರೀಮಾತೆಯವರ ಪತ್ರಗಳು – ೯

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

ಪತ್ರ – ೩೯

ಶ್ರೀ ಶ್ರೀ ದುರ್ಗೆಯ ಕೃಪೆ

೪.೧೦.೧೯೦೮

ಚಿರಂಜೀವಿಗೆ ,

ಪ್ರೀತಿಯ ಮಗು, ನಿನ್ನ ಪತ್ರ ಲಭಿಸಿ ಎಲ್ಲವನ್ನೂ ತಿಳಿದು ಕೊಂಡೆ. ನಾವೆಲ್ಲರೂ ಚೆನ್ನಾಗಿದ್ದೇವೆ. ನೀನು ಪಾರ್ಸೆಲ್ ಮಾಡಿ ಕಳುಹಿಸಿರುವ ಸೀರೆ ಸಿಕ್ಕಿತು. ನೀನು ನನ್ನ ಆಶೀರ್ವಾದ ತೆಗೆದುಕೊ, ಹಾಗೂ ಎಲ್ಲರಿಗೂ ಆಶೀರ್ವಾದ ತಿಳಿಸು.

ಇತಿ ೧೪ನೇ ಫಾಲ್ಗುಣ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Swami Ramakrishnanandaji,
Sri Ramakrishna Mission
Mylapore, Madras

ಪತ್ರ – ೪೦

ಶ್ರೀ ಶ್ರೀ ಕಾಳೀಮಾತೆಯ ಕೃಪೆ

೩೧.೧೦.೧೯೦೮

ಪ್ರೀತಿಯ ಮಗೂ,

ನನಗೆ ನಿನ್ನ (ಪತ್ರ) ತಲುಪಿ, (ನಾನು) ತುಂಬಾ ಸಂತೋಷ ಪಟ್ಟೆ. ಮಗೂ, ನನಗೆ ಆಗ್ರಹಾಯಣ ಮಾಸದಲ್ಲಿ ಹೋಗಲು ಸಾಧ್ಯವೋ (ಇಲ್ಲವೋ)ಎಂಬುದು ಏನೂ ಗೊತ್ತಿಲ್ಲ. ಆದರೆ ಎಲ್ಲವೂ ಅವನ ಇಚ್ಛೆ. ೫ ರೂಪಾಯಿ ತಲುಪಿತು, ಅದು ಶ್ರೀ ಶ್ರೀ ಜಗದ್ಧಾತ್ರೀ ಮಾತೆಯ ಪೂಜೆಗೆ ಉಪಯೋಗವಾಯಿತು. ನನ್ನ ಆಶೀರ್ವಾದವನ್ನು ಸ್ವೀಕರಿಸು. ನನ್ನ ಭಕ್ತ ವೃಂದದವರಿಗೂ ತಿಳಿಸು.

ಇತಿ, ೧೩೧೫ನೇ ವರ್ಷ, ೧೪ನೇ ದಿನ, ಕಾರ್ತಿಕ.

ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಪರಮ ಪ್ರೀತಿಯ
ಶ್ರೀ ನಿರ್ಮಲ ಚಂದ್ರ ಘೋಷ್ ಮಗನಿಗೆ
ಮೊ: ಕಲ್ಕತ್ತಾ. ೧೦೭ ನಂ. ಗ್ರೇ ಸ್ಟ್ರೀಟ್
Calcatta

ಪತ್ರ – ೪೧

ಓಂ ರಾಮಕೃಷ್ಣ ಜಯತಿ

೧೮.೧೧.೧೯೦೮

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ ,

ಪ್ರೀತಿಯ ಮಗೂ, ನಿನ್ನ ಪತ್ರವು ತಲುಪಿ ನಾನು ತುಂಬಾ ಆನಂದಿತಳಾದೆ. ಇಲ್ಲಿ ಮಳೆ, ಮೋಡ ಏನೂ ಇಲ್ಲ. ನಿನ್ನ ಮಿತ್ರರು ರಾಖಾಲ್ ಮಹಾರಾಜರನ್ನು ತುಂಬಾ ಆದರದಿಂದ ನೋಡಿ ಕೊಳ್ಳುತ್ತಿದ್ದಾರೆಂದು ಕೇಳಿ ನನಗೆ ಆನಂದವಾಯಿತು. ಕೃಷ್ಣಲಾಲ್ ಬಾಬುಗೆ, ಜಿತೇನ್‌ಗೆ, ನಿರಾದ್‌ಗೆ, ರುದ್ರಚೈತನ್ಯನಿಗೆ, ವಿಶುದ್ಧಾ ನಂದನಿಗೆ, ಜೋಗಿನ್‌ಗೆ, ಮತ್ತು ನಿನಗೆ ನನ್ನ ಆಶೀರ್ವಾದ. ಅಮೆರಿಕಾದಲ್ಲಿರುವ ಮಕ್ಕಳೆಲ್ಲರೂ ಚೆನ್ನಾಗಿದ್ದಾರೆಂದು ಕೇಳಿ ನಾನು ನೆಮ್ಮದಿಯಿಂದ ಇದ್ದೇನೆ. ಸದ್ಯದಲ್ಲಿ ಶ್ರೀ ಶ್ರೀ ಠಾಕೂರರ ಮಠವು ಸಂಪೂರ್ಣವಾಗುವುದೆಂದು ಬರೆದಿರುವೆ. ಇದನ್ನು ಕೇಳಿ ಪರಮಾನಂದವಾಯಿತು. ರಾಖಾಲ್ ಮಹಾರಾಜರಿಂದ ಈ ಮಠವನ್ನು ಪ್ರತಿಷ್ಠೆ ಮಾಡಿಸುವ ಎಂದು ಬಯಸಿದ್ದೀರಿ, ಅದು ತುಂಬಾ ಚೆನ್ನಾಗಿದೆ. ನಾನು ಸದ್ಯ ಚೆನ್ನಾಗಿದ್ದೇನೆ. ಹಾಗೂ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ಈ ತಿಂಗಳಲ್ಲಿ ನಾನು ಕೊಲ್ಕತ್ತೆಗೆ ಹೋಗುವುದಿದೆ. ಆದರೆ ಏನಾಗುವುದೋ ಗೊತ್ತಿಲ್ಲ. ಅವನು ಹೇಗೆ ನಡೆಸುವನೋ ಅದುವೇ ನಡೆಯುವುದು. ಮತ್ತು ಸಿಸ್ಟರ್ ದೇವಮಾತಾಳಿಗೆ ನನ್ನ ನಮಸ್ಕಾರ ತಿಳಿಸಬೇಕು. ಉಳಿದ ಮಕ್ಕಳಿಗೆಲ್ಲಾ ನನ್ನ ಆಶೀರ್ವಾದ ತಿಳಿಸು.

ಇತಿ, ೧೩೧೫ನೇ ವರ್ಷ, ಅಗ್ರಹಾಯಣ ೮ನೇ ದಿನ

ದಿನ : ಗುರುವಾರ

ನಿನ್ನ ಸ್ನೇಹಮಯಿ ಮಾತೃದೇವಿ —

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Swami Ramakrishnananda
Sri Ramakrishna Mission
Brodies' Road
Mylapore, Madras

ವಿವರಣೆ : ಮದ್ರಾಸ್ ಮಠದ ಪ್ರತಿಷ್ಠಾಪನೆಯ ಬಗ್ಗೆ ಇಲ್ಲಿ ಹೇಳಲಾಗಿದೆ.

ಪತ್ರ – ೪೨

ಓಂ ರಾಮಕೃಷ್ಣ ಶರಣಂ

೨೬.೧೨.೧೯೦೮

ಮಗೂ,

ನಿನ್ನ ಪತ್ರವನ್ನು ಕೇಳಿ ನನಗೆ ತುಂಬಾ ಸಮಾಧಾನವಾಯಿತು. ಮತ್ತೆ ಶ್ರೀಯುತ ರಾಖಾಲ್ ಮಹಾರಾಜ್ ಶ್ರೀ ರಾಮೇಶ್ವರನಿಗೆ ಚಿನ್ನದ ಬಿಲ್ವಪತ್ರೆ, ಬೆಳ್ಳಿಯ ಬಿಲ್ವಪತ್ರೆ, ಮತ್ತು ತಾಮ್ರದ ಬಿಲ್ವಪತ್ರೆ ಕೊಟ್ಟು ಶಿವನ ಆರಾಧನೆ ಮಾಡಿಸಿದ್ದಾರೆ (ಮಾಡಿಸಿದ್ದಾನೆ). ಅದೊಂದು ಸೌಭಾಗ್ಯದ ದಿನವಾಯಿತು. ಏನಾದರಾಗಲಿ ಎಲ್ಲವೂ ಅವನ ಇಚ್ಛೆಯಂತೆ ನಡೆಯುವುದು, ಅವನಲ್ಲದೆ ಇನ್ನೇನೂ ಇಲ್ಲ. ಆಮೇಲೆ ೧೨ ಜನ ಬ್ರಾಹ್ಮಣರಿಗೆ ಭೋಜನ ಕೊಡಿಸಿದ್ದಾರೆ (ಕೊಡಿಸಿದ್ದಾನೆ) ಇದು ಎಂತಹ ಸೌಭಾಗ್ಯದ ವಿಷಯ! ಏನೇನು

ಮಾಡಿಸಿದ್ದಾನೋ ಅವನ್ನೆಲ್ಲಾ ಕೇಳಿ ನನಗೆ ಅತ್ಯಂತ ಸಮಾಧಾನ ವಾಯಿತು. ಪರ್ವತ ವರ್ಧಿನಿಗೆ ನೈವೇದ್ಯ ಅರ್ಪಿಸಿದ್ದಾರೆ (ಅರ್ಪಿಸಿದ್ದಾನೆ), ಇದನ್ನು ನಾನು ಕೇಳಿ ಅತ್ಯಂತ ಸಂತುಷ್ಟಳಾದೆ. ವಿಶ್ವೇಶ್ವರ ಮತ್ತು ಅನ್ನಪೂರ್ಣ, ಅಲ್ಲದೆ ರಾಮೇಶ್ವರ ಮತ್ತು ಪರ್ವತ ವರ್ಧಿನಿಗೆ ತುಂಬಾ ಸಂಭ್ರಮದ ಪೂಜೆ ಸಲ್ಲಿಸಿದ್ದಾರೆ(ಸಲ್ಲಿಸಿದ್ದಾನೆ). ಇದನ್ನು ಕೇಳಿ ನನಗೆ ಅತ್ಯಂತ ಆನಂದವಾಯಿತು. (ನನಗೆ) ಕಳುಹಿಸಿರುವ ಭಸ್ಮ, ಮತ್ತು ಪರ್ವತ ವರ್ಧಿನಿಯ ಕುಂಕುಮ ಪ್ರಸಾದ ಮತ್ತು ಬಿಲ್ವಪತ್ರ ತಲುಪಿದೆ, ಅದನ್ನು ಸ್ವೀಕರಿಸಿದೆ. ಶ್ರೀ ರಾಖಾಲ್‌ನಿಗೆ, ಶ್ರೀ ಕೃಷ್ಣಲಾಲ್‌ನಿಗೆ, ನೀರದ್‌ನಿಗೆ, ಜಿತೇನ್‌ನಿಗೆ, ಮತ್ತು ರಾಮು ಎಂಬ ಹೆಸರಿನ ವೈಷ್ಣವ ಬಾಲಕನಿಗೆ ನನ್ನ ಆಶೀರ್ವಾದ (ನೀಡಬೇಕು) ಮತ್ತು ನೀನೂ ತೆಗೆದುಕೋ. ನಾನು ಚೆನ್ನಾಗಿದ್ದೇನೆ.

ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ, ನಿನ್ನ ಶುಭಾಕಾಂಕ್ಷಿ ಮಾತೃದೇವಿ
೧೦ನೇ ಪೌಷ, ಶುಕ್ರವಾರ

ನಮ್ಮ ಇಲ್ಲಿ ತುಂಬಾ ಚಳಿ ಶುರುವಾಗಿದೆಂದು ತಿಳಿ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Swami Ramakrishnananada
Sri Ramakrishna Home
Brodies' Road, Mylapore, Madras

ಪತ್ರ – ೪೩

ಶ್ರೀಶ್ರೀ ರಾಮಕೃಷ್ಣೋ ಜಯತೇ

೨೯.೧.೧೯೦೯

ಪರಮ ಶುಭಾಶೀರ್ವಾದವನ್ನು ತಿಳಿಸಿ, ವಿಶೇಷವೇನೆಂದರೆ,

ಶ್ರೀ ಸ್ವಾಮಿ ವಿವೇಕಾನಂದರ ಉತ್ಸವವು ಆಡಂಬರದಿಂದ ನಡೆಯಿತು ಎಂದು ಕೇಳಿ ಆನಂದವಾಯಿತು. ಮೈಸೂರು ರಾಜನ ಮಂತ್ರಿಗೆ ಮತ್ತು ನಾರಾಯಣ ಅಯ್ಯಂಗಾರನಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ಅವರಿಗೆ ಧರ್ಮದಲ್ಲಿ ಶ್ರದ್ಧೆಯುಂಟಾಗಲಿ. ನಾನು ಆ ಸಮಾಚಾರ ಕೇಳಿ ಸಂತುಷ್ಟಳಾದೆ. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಇತಿ,

೧೪ನೇ ಮಾಘ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
The Swami Ramakrishnananada
Sri Ramakrishna Homes
Brodies'Road, Mylapore, Madras

ಪತ್ರ – ೪೪

ಓಂ ರಾಮಕೃಷ್ಣ ಜಯತಿ

೧೬ – ೨ – ೧೯೦೯

ದೀರ್ಘಾಯುವಾಗು.

ಪರಮ ಶುಭಾಶೀರ್ವಾದಗಳನ್ನು ಮೊದಲು ತಿಳಿಸಿ, ಆಮೇಲೆ ವಿಶೇಷವೇನೆಂದರೆ,

ಪ್ರೀತಿಯ ಮಗೂ, ಇಂದು ಸರಿಯಾದ ಸಮಯಕ್ಕೆ ನಿನ್ನ ಒಂದು ಪತ್ರ ಲಭಿಸಿ, ಎಲ್ಲವನ್ನೂ ತಿಳಿದುಕೊಂಡೆ. ಮಗು, ಸಂಸಾರದ ಕೆಲಸ ಮಾಡುತ್ತಿರು ಮತ್ತು ಅವನ ಸ್ಮರಣೆ ಮಾಡುತ್ತಿರು. ಮಗೂ, ನೀನು ಚೆನ್ನಾಗಿ ಮಾನಸಿಕವಾಗಿ ಆನಂದದಿಂದಿರಬೇಕು. ಯಾವ ಚಿಂತೆಯನ್ನೂ ಮಾಡಬೇಡ. ಸದಾ ಆನಂದದಿಂದಿರು. ಮನಸ್ಸಿನಲ್ಲೇ (ಅವನನ್ನು) ಕರೆಯಬೇಕು. ಅಂತೆಯೇ ಅವನು ಯಾವಾಗಲೂ ನಿನ್ನನ್ನು ರಕ್ಷಿಸುವನು. ಓದುವುದರಲ್ಲಿ ಮನಸ್ಸು ಕೊಡು, ನನ್ನ ಆಶೀರ್ವಾದವನ್ನು ಸ್ವೀಕರಿಸು ಹಾಗೂ ಎಲ್ಲರಿಗೂ ತಿಳಿಸು. ನನ್ನ ಸಮಾಚಾರವನ್ನು ಅಮೂಲ್ಯನಿಗೆ ತಿಳಿಸು ಮತ್ತು ನನ್ನ ಆಶೀರ್ವಾದವನ್ನು ತಿಳಿಸು. ನಾನು ಚೆನಾಗಿದ್ದೇನೆ ಮತ್ತು ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ, ೧೩೧೫ನೇ ವರ್ಷ, ಫಾಲ್ಗುಣ ೩ನೇದಿನ, ಸೋಮವಾರ

ನಿನ್ನ ಮಾತೃದೇವಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಪರಮ ಪ್ರೀತಿಯ —
ಶ್ರೀಮಾನ್ ನಿಶಿಕುಮಾರ್ ಗಂಗೋಪಾಧ್ಯಾಯ
ಮಗೂ, ದೀರ್ಘಾಯುವಾಗು
ಡಾಕಾ ೭೯ ನಂ ದಿಗ್‌ಬಾಜಾರ್ ಛಾತ್ರ ಮೆಸ್
ಪೋ: Dhacca

ಪತ್ರ – ೪೫

ಓಂ ರಾಮಕೃಷ್ಣ ಜಯತಿ

೨೧.೨.೧೯೦೯, ೧೩೧೫ನೇ ವರ್ಷ
ತಾರೀಕು ೮ನೇ ಫಾಲ್ಗುಣ

ಪ್ರೀತಿಯ ಮಗೂ,

ಇಂದು ನೀನು ಕಳುಹಿಸಿರುವ ಒಂದು ಜೋಡಿ ಸೀರೆಗಳು ಸಿಕ್ಕಿದವು ಮತ್ತು ಕೆಲವು ಪೋಸ್ಟ್ ಕಾರ್ಡುಗಳು ಸಿಕ್ಕಿದವು. ಎರಡೂ ಸೀರೆಗಳು ತುಂಬಾ ಚೆನ್ನಾಗಿವೆ. ನೋಡಿ ನನಗೆ ಬಹಳ ಆನಂದವಾಯಿತು. ಏನಾದರಾಗಲಿ, ನನ್ನ ಸೌಕರ್ಯದಂತೆ ಸೀರೆಗಳನ್ನು ಉಪಯೋಗಿಸುವೆ. ಮತ್ತೆ ೮ ಪೋಸ್ಟ್ ಕಾರ್ಡುಗಳು ಆ ಸೀರೆಗಳ ಒಳಗೇ ಇದ್ದವು – ಅವು ತಲುಪಿದವು. ಪ್ರೀತಿಯ ಮಗು, ನೀನು ನನ್ನ ಆಶೀರ್ವಾದವನ್ನು ಸ್ವೀಕರಿಸು. ಹಾಗೂ ಭಕ್ತವೃಂದದವರಿಗೂ ತಿಳಿಸು. ನಾನು ಸದ್ಯ ಚೆನ್ನಾಗಿದ್ದೇನೆ ಮತ್ತು ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ನಿನ್ನ ಮಂಗಳಮಯಿ
ಮಾತೃದೇವಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಪರಮ ಪ್ರೀತಿಯ
ಶ್ರೀಮಾನ್ ನಿರ್ಮಲ ಚಂದ್ರದಾಸ್ ಘೋಷ್
ಪ್ರೀತಿಯ ಮಗೂ, ದೀರ್ಘಕಾಲ ಸುರಕ್ಷಿತವಾಗಿರು
ಕಲ್ಕತ್ತಾ ಗ್ರೇ ಸ್ಟ್ರೀಟ್ ನಂ ೧೦೭,
ಪೋಸ್ಟ್: ಶ್ರೀ ಕುಮಾರ್ ಕುಮಾರ್ ಕೃಷ್ಣ ಬಾಹಾದೂರ್
ಅವರ ಮನೆ, Cal

ಯುವಚೇತನ



ಭಾರತೀಯ ಜೀವನ ಮತ್ತು ವೇದಾಂತ

ಭರತಖಂಡದಲ್ಲಿ ಇರುವ ನಮಗೆ ಏನು ಬೇಕಾಗಿದೆ? ಹೊರಗಿನವರಿಗೆ ಈ ಭಾವನೆಗಳು ಆವಶ್ಯಕವಾಗಿದ್ದರೆ ನಮಗೆ ಇವು ಇಪ್ಪತ್ತರಷ್ಟು ಆವಶ್ಯಕವಿದೆ. ಏಕೆಂದರೆ ಉಪನಿಷತ್ತು ಎಷ್ಟೇ ಶ್ರೇಷ್ಠ ವಾಗಿದ್ದರೂ, ನಮ್ಮ ಪೂರ್ವಿಕರು ಕೀರ್ತಿಶೇಷರಾದ ಮಹಾಋಷಿಗಳಾಗಿದ್ದರೂ, ಇತರ ಅನೇಕ ಜನಾಂಗಗಳೊಂದಿಗೆ ಹೋಲಿಸಿದರೆ ನಾವು ದುರ್ಬಲರು, ಅತಿ ದುರ್ಬಲರಾಗಿರುವೆವು. ಮೊದಲು ನಮ್ಮ ಶಾರೀರಿಕ ದೌರ್ಬಲ್ಯ. ಈ ಶಾರೀರಿಕ ದೌರ್ಬಲ್ಯವೇ ನಮ್ಮ ಕಷ್ಟದ ಮೂರನೆಯ ಒಂದು ಪಾಲಿಗಾದರೂ ಕಾರಣ. ನಾವು ಶುದ್ಧ ಸೋಮಾರಿಗಳು, ಕೆಲಸ ಮಾಡುವುದಿಲ್ಲ, ನಮ್ಮಲ್ಲಿ ಒಗ್ಗಟ್ಟಿಲ್ಲ, ಅನ್ಯರನ್ನು ಪ್ರೀತಿಸುವುದಿಲ್ಲ; ನಾವು ಬರಿಯ ಸ್ವಾರ್ಥಿಗಳು. ಪರಸ್ಪರರನ್ನು ದ್ವೇಷಿಸದೆ, ಅಸೂಯೆಪಡದೆ ಮೂರು ಜನರು ಕೂಡ ಒಟ್ಟಿಗೆ ಕಲೆಯಲಾರೆವು. ಇದೇ ನಮ್ಮ ಸ್ಥಿತಿ; ನಾವು ಚೆಲ್ಲಾಪಿಲ್ಲಿಯಾಗಿರುವ ದೊಂಬಿಯಂತೆ ಇರುವೆವು, ಅತ್ಯಂತ ಸ್ವಾರ್ಥಿಗಳಾಗಿರುವೆವು. ಹಣೆಯ ಮೇಲೆ ಮತ ಚಿಹ್ನೆಯನ್ನು ಹೀಗೆ ಇಡಬೇಕೆ, ಹಾಗೆ ಇಡಬೇಕೆ ಎಂದು ಬೇಕಾದಷ್ಟು ಹೋರಾಟವಾಗಿದೆ. ಒಬ್ಬನ ದೃಷ್ಟಿ ನನ್ನ ಆಹಾರವನ್ನು ಅಶುದ್ಧ ಮಾಡುವುದೆ ಇಲ್ಲವೆ ಎಂಬ ಗಹನ ವಿಷಯದ ಮೇಲೆ ಬೇಕಾದಷ್ಟು ಗ್ರಂಥಗಳನ್ನು ಬರೆದಿರುವರು! ಹಲವು ಶತಮಾನಗಳಿಂದ ಇದರಲ್ಲೇ ನಾವು ನಿರತರಾಗಿರುವೆವು.ಇಂತಹ ಅದ್ಭುತ ಅನ್ವೇಷಣೆಯಲ್ಲಿ ತಮ್ಮ ಪೂರ್ಣ ಮಾನಸಿಕ ಶಕ್ತಿಯನ್ನೆಲ್ಲಾ ವ್ಯರ್ಥಗೊಳಿಸಿದ ಜನಾಂಗದಿಂದ ಯಾವುದೇ ಉತ್ತಮವಾದುದನ್ನೂ ನಿರೀಕ್ಷಿಸಲಾರೆವು.. ಇದಕ್ಕೆ ಕಾರಣವೇನು? ಶಾರೀರಿಕ ದುರ್ಬಲತೆ. ಇಂತಹ ದುರ್ಬಲ ಮಿದುಳು ಏನನ್ನೂ ಸಾಧಿಸಲಾರದು. ನಾವು ಅದನ್ನು ಪುಷ್ಟಿಗೊಳಿಸಬೇಕು. ಮೊದಲು ನಮ್ಮ ಯುವಕರು ಬಲಿಷ್ಠರಾಗಬೇಕು. ಅನಂತರ ಧರ್ಮ. ನನ್ನ ತರುಣ ಸ್ನೇಹಿತರೇ, **ಮೊದಲು ಬಲಿಷ್ಠರಾಗಿ.** ಇದು ನನ್ನ ಬುದ್ಧಿವಾದ. ಗೀತಾಧ್ಯಯನಕ್ಕಿಂತ ಫುಟಬಾಲ್ ಆಟದಿಂದ ಮುಕ್ತಿಗೆ ಹತ್ತಿರ ಹೋಗುವಿರಿ. ಇವು ಕೆಚ್ಚಿನ ಮಾತುಗಳು. ಆದರೂ ನಾನು ಇದನ್ನು ನಿಮಗೆ ಹೇಳಬೇಕಾಗಿದೆ. ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನಿಮ್ಮ ನ್ಯೂನತೆ ನನಗೆ ಗೊತ್ತಿದೆ. ನನಗೆ ಸ್ವಲ್ಪ ಅನುಭವವಾಗಿದೆ. ನಿಮ್ಮ ಬಾಹುಗಳ ಮಾಂಸಖಂಡದಲ್ಲಿ ಸ್ವಲ್ಪ ಹೆಚ್ಚು ಶಕ್ತಿ ಇದ್ದರೆ, ನೀವು ಗೀತೆಯನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ. ನಿಮ್ಮಲ್ಲಿ ಹೆಚ್ಚು ಬಿಸಿ ರಕ್ತವಿದ್ದರೆ ಗೀತೆಯಲ್ಲಿ ಕೃಷ್ಣನ ಪ್ರತಿಭೆ ಮತ್ತು ಅದ್ಭುತ ಶಕ್ತಿ ಇವನ್ನು ತಿಳಿದುಕೊಳ್ಳಬಲ್ಲಿರಿ. ನಿಮ್ಮ ಕಾಲಿನ ಮೇಲೆ ನಿಮ್ಮ ದೇಹ ದೃಢವಾಗಿ ನಿಂತು, ನಿಮ್ಮನ್ನು ನೀವು ಪುರುಷರೆಂದು ಪರಿಗಣಿಸಿದಾಗ ಉಪನಿಷತ್ತಿನ ಮಹಿಮೆಯನ್ನು ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ, ಆತ್ಮನ ಮಹಿಮೆಯನ್ನು ಚೆನ್ನಾಗಿ ತಿಳಿದುಕೊಳ್ಳಬಲ್ಲಿರಿ. ಹೀಗೆ ನಾವು ಉಪನಿಷತ್ತಿನ ಭಾವನೆಗಳನ್ನು ನಮ್ಮ ಆವಶ್ಯಕತೆಗೆ ತಕ್ಕಂತೆ ಅನುಷ್ಠಾನಕ್ಕೆ ತರಬಹುದು. *(ಕೃತಿಶ್ರೇಣಿ, ಸಂ.೩, ಪು.೧೯-೨೦)*

ಸಹನೆಯ ಗುಣಕ್ಕಿಂತ ಮೇಲಾದುದಿಲ್ಲ. ಅದನ್ನು ಎಲ್ಲರೂ ಅಭ್ಯಾಸ ಮಾಡಬೇಕು. ಭಾರವಾದ ಸುತ್ತಿಗೆಯಿಂದ ಎಷ್ಟು ಪೆಟ್ಟು ಕೊಟ್ಟರೂ ಅಕ್ಕಸಾಲಿಗನ ಅಡಿಗಲ್ಲು ಅಚಲವಾಗಿ ನಿಂತಿರುವುದು. ಇದರಂತೆಯೇ, ಪ್ರತಿಯೊಬ್ಬರೂ ಯಾರು ಏನೇ ಮಾಡಲಿ ಅಥವಾ ಹೇಳಲಿ, ಸ್ಥಿರಚಿತ್ತದಿಂದ ಅನುಭವಿಸಬೇಕು.

— ಶ್ರೀರಾಮಕೃಷ್ಣರು

ಪೂಜೆ, ಜಪ, ಧ್ಯಾನ ಇವನ್ನೆಲ್ಲ ಮಾಡಬೇಕು. ಹೂವನ್ನು ಅಲುಗಾಡಿಸುತ್ತ ಇದ್ದರೆ ಅದರ ಸುಗಂಧ ಹೇಗೆ ಹೊರಹೊಮ್ಮುವುದೋ, ಶ್ರೀಗಂಧ ತೇಯುತ್ತ ಇದ್ದರೆ ಅದರ ಸುವಾಸನೆ ಹೇಗೆ ಹೊರಗೆ ಬರುವುದೋ, ಹಾಗೇ ಭಗವಂತನ ತತ್ತ್ವವನ್ನು ಆಲೋಚನೆ ಮಾಡುತ್ತ ಕ್ರಮೇಣ ತತ್ತ್ವಜ್ಞಾನದ ಉದಯವಾಗುವುದು. ಮನಸ್ಸಿನ ಆಲೋಚನೆಗಳೆಲ್ಲ ನಾಶವಾದ ಕ್ಷಣವೇ ಸಾಕ್ಷಾತ್ಕಾರವುಂಟಾಗುವುದು.

— ಶ್ರೀಮಾತೆ ಶಾರದಾದೇವಿ

ಯಾವುದು ನಿಮ್ಮನ್ನು ದೈಹಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ದುರ್ಬಲರನ್ನಾಗಿ ಮಾಡುವುದೋ ಅದನ್ನು ವಿಷದಂತೆ ತ್ಯಜಿಸಿ. ಅದರಲ್ಲಿ ಜೀವವಿಲ್ಲ. ಅದು ಸತ್ಯವಾಗಿರಲಾರದು. ಸತ್ಯವು ಶಕ್ತಿವರ್ಧಕ, ಪರಿಶುದ್ಧ. ಸತ್ಯವೇ ಅನಂತ ಜ್ಞಾನ. ಸತ್ಯವು ಶಕ್ತಿ ಕೊಡಬೇಕು, ಬೆಳಕು ಕೊಡಬೇಕು, ಸ್ಫೂರ್ತಿ ಕೊಡಬೇಕು.

— ಸ್ವಾಮಿ ವಿವೇಕಾನಂದ

ಶ್ರೀ ಮಧ್ವಾಚಾರ್ಯರು

ಆಂಗ್ಲಮೂಲ: **ಸ್ವಾಮಿ ತಪಸ್ಯಾನಂದ** ಕನ್ನಡಕ್ಕೆ: **ಸ್ವಾಮಿ ವೀರೇಶಾನಂದ**

ಭಾಗ ೪

ಒಬ್ಬ ಚಿಂತಕರಾಗಿ ಶ್ರೀ ಮಧ್ವರು

ಒಬ್ಬ ಚಿಂತಕರಾಗಿ ಮಧ್ವಾಚಾರ್ಯರು ಸ್ವಂತಿಕೆಯನ್ನು ಮತ್ತು ವಿಮರ್ಶಾತ್ಮಕ ಮನೋಭಾವವನ್ನು ಮೆರೆಯುತ್ತಾರೆ. ತಾವು ವ್ಯಾಖ್ಯಾನ ಮಾಡಿದ ಎಲ್ಲ ವೇದಾಂತ ಗ್ರಂಥಗಳಲ್ಲಿಯೂ ಅವರು ತಮ್ಮದೇ ಆದ ವಿನೂತನತೆಯನ್ನು ಕಂಡುಕೊಂಡಿದ್ದಾರೆ. ಎಂದಿಗೂ ಅವರು ಹಿಂದಿನವರು ಹಾಕಿಕೊಟ್ಟ ಮಾರ್ಗವನ್ನು ಮಾತ್ರ ತುಳಿದವರಲ್ಲ. ನೂತನ ಭಾರತೀಯ ವಾಸ್ತವವಾದವು ಆಚಾರ್ಯರಲ್ಲಿ ತನ್ನ ಶಕ್ತಿಯುತ ಪ್ರತಿಪಾದಕರನ್ನು ಕಂಡುಕೊಂಡಿತು. ಅದರ ಜೊತೆಗೆ ಉನ್ನತ ಮಟ್ಟದ ಭಕ್ತಿತತ್ತ್ವ ಮತ್ತು ನಾರಾಯಣ ಆರಾಧನೆಯ ಮತೀಯ ಅಂಶಗಳನ್ನು ತಳಕು ಹಾಕಿದ ಶ್ರೇಯಸ್ಸು ಆಚಾರ್ಯರಿಗೆ ಸಲ್ಲುತ್ತದೆ. ಆ ಮೂಲಕ ಮಧ್ವರು ವಾಸ್ತವವಾದವನ್ನು ಜೀವಂತ ಚಿಂತನೆಯನ್ನಾಗಿ ನೆಲೆಗೊಳಿಸಿದರು. ಇದಕ್ಕೆ ವಿರುದ್ಧವಾಗಿ ನ್ಯಾಯ ಮತ್ತು ಸಾಂಖ್ಯ ಮೊದಲಾದ ವಾಸ್ತವವಾದಗಳು ತಾತ್ತ್ವಿಕ ನೆಲೆಗಟ್ಟಿನಲ್ಲಿ ಮಾತ್ರ ನಿಂತುಬಿಟ್ಟವು. ಅವು ಅನುಷ್ಠಾನಯೋಗ್ಯವಾಗಲಿಲ್ಲ. ತಮ್ಮ ಋಗ್ವೇದ ಮತ್ತು ಮಹಾಭಾರತಗಳ ವಿವರಣೆಗಳಲ್ಲಿ, ಆಧುನಿಕ ಯುಗದಲ್ಲಿ ಈ ಪುಸ್ತಕಗಳ ಅಧ್ಯಯನದ ವಿಧಾನಗಳು ಹೇಗಿರುತ್ತವೆ ಎಂಬುದರ ಬಗ್ಗೆ ಭವಿಷ್ಯದೃಷ್ಟಿ ಅವರಲ್ಲಿ ಇರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ವೇದಗಳನ್ನು ಪೌರಾಣಿಕ, ಮನೋವೈಜ್ಞಾನಿಕ ಮತ್ತು ಆಧ್ಯಾತ್ಮಿಕ ದೃಷ್ಟಿಗಳಿಂದ ಅಧ್ಯಯನ ಮಾಡಬಹುದಾದ ಅಪಾರ ಸಾಧ್ಯತೆಗಳನ್ನು ಅಷ್ಟು ಹಿಂದೆಯೇ ಅವರು ಗುರುತಿಸಿದ್ದರು. ಅವರು ಋಗ್ವೇದದ ಮೂವತ್ತೆರಡು ಸೂಕ್ತಗಳಿಗೆ ಭಾಷ್ಯವನ್ನು ಬರೆದಿದ್ದಾರೆ. ಅದರಲ್ಲಿ ಅವರು ಸಾಯಣ ಭಾಷ್ಯಕ್ಕಿಂತ ಭಿನ್ನವಾದ ವ್ಯಾಖ್ಯಾನವನ್ನು ನೀಡುತ್ತಾರೆ. ಅಲ್ಲದೆ ನಿರುಕ್ತಕಾರರಾದ ಯಾಸ್ಕರಿಗಿಂತ ಮುಂದೆ ಹೋಗಿ, ಆ ಸೂಕ್ತಗಳಿಗೆ ಮನೋವೈಜ್ಞಾನಿಕ ಅರ್ಥವನ್ನು ನೀಡುತ್ತಾರೆ. ಆ ಮೂಲಕ ಅವೆಲ್ಲವೂ ಪರಮ ಪುರುಷೋತ್ತಮ ನಾರಾಯಣನ ಜ್ಞಾನವನ್ನೇ ಪ್ರತಿಪಾದಿಸುತ್ತವೆ ಮತ್ತು ಅವನಲ್ಲಿ ಭಕ್ತಿಸಾಧನೆಯನ್ನೇ ಬೋಧಿಸುತ್ತವೆ ಎಂದು ಸಾಧಿಸಿ ತೋರಿಸುತ್ತಾರೆ. ಆಧುನಿಕ ಕಾಲದಲ್ಲಿ ದಯಾನಂದ ಸರಸ್ವತಿ ಮತ್ತು ಮಹರ್ಷಿ ಅರವಿಂದರು ವೇದಗಳಿಗೆ ನೀಡಿದ ವಿವರಣೆಯನ್ನು ಹೋಲುವ ವ್ಯಾಖ್ಯಾನ ಅವರದು. ಒಬ್ಬ ವಿದ್ವಾಂಸರಾಗಿ ಶ್ರೀ ಮಧ್ವಾಚಾರ್ಯರ ವಿದ್ವತ್ತಿನ ಪರಿಧಿ ಸಾಗರೋಪಮವಾದುದು. ವೇದಗಳು, ಎಲ್ಲ ದರ್ಶನಗಳು, ಪುರಾಣ ಇತಿಹಾಸಗಳು ಇವೆಲ್ಲದರಿಂದಲೂ ಉಕ್ತಿಗಳನ್ನು ಅವರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸುತ್ತಾರೆ. ವಿಮರ್ಶಕರು, ಇತರ ಆಚಾರ್ಯರಂತೆ ಭಿನ್ನರಾಗಿದ್ದಾರೆ ಎಂದು ಹೇಳುತ್ತಾರೆ. ಇವರು ಪುರಾಣಗಳಿಂದಲೇ ಹೆಚ್ಚಾಗಿ ಉಲ್ಲೇಖಿಸುತ್ತಾರೆ ಮತ್ತು ಬೇರೆ ಯಾರಿಗೂ ತಿಳಿಯದ ವೇದಭಾಗಗಳ ಉಕ್ತಿಗಳನ್ನು ಉಲ್ಲೇಖಿಸುತ್ತಾರೆ ಎಂಬ ಟೀಕೆಯನ್ನು ಮಾಡಿದ್ದಾರೆ. ಈ ಟೀಕೆಯು ಆಚಾರ್ಯರ ನಿಜವಾದ ಉದ್ದೇಶವನ್ನು ಗಮನಕ್ಕೆ ತೆಗೆದುಕೊಂಡಿಲ್ಲ ಎಂದೇ ಹೇಳಬೇಕು. ಆಚಾರ್ಯರು ಎಲ್ಲ ರೀತಿಯ ಶಾಸ್ತ್ರಗ್ರಂಥಗಳಲ್ಲಿನ ಸಮನ್ವಯವನ್ನು ಸಾಧಿಸಲು ಉದ್ದೇಶಿಸಿದ್ದರೇ ಹೊರತು, ಕೇವಲ ಬ್ರಹ್ಮಸೂತ್ರ ಮತ್ತು ಉಪನಿಷತ್ತುಗಳ ಸಮನ್ವಯವನ್ನಲ್ಲ. ಹೀಗಾಗಿ ಅವರು ವೇದ ಸಂಹಿತೆಗಳು, ಉಪನಿಷತ್ತುಗಳು, ಬ್ರಹ್ಮಸೂತ್ರ, ಪುರಾಣಗಳು, ಸ್ಮೃತಿಗಳು, ಮಹಾಭಾರತ – ಹೀಗೆ ನೂರಾರು ಆಕರಗಳಿಂದ ಉಕ್ತಿಗಳನ್ನು ಆರಿಸಿ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸುತ್ತಾರೆ.

ಆಚಾರ್ಯರದು ಅಗಾಧ ಸ್ಮರಣಶಕ್ತಿ. ಹಾಗೆಯೇ ಅವರು ವೇದ ವಾಙ್ಮಯದಲ್ಲಿ ಪಾರಂಗತರು ಕೂಡ. ಹೀಗಾಗಿ ಅವರು ಇತರರಿಗೆ ತಿಳಿಯದ ಅನೇಕ ವೇದಭಾಗಗಳಿಂದ ಉಕ್ತಿಗಳನ್ನು

ನೀಡಲು ಶಕ್ತರಾಗಿದ್ದರು. ಅವರ ಬುದ್ಧಿಶಕ್ತಿಯ ಅಗಾಧತೆಯು ಸುಮಾರು ಮೂವತ್ತೇಳು ಗ್ರಂಥಗಳ ಸಮೃದ್ಧ ಸಾಹಿತ್ಯವನ್ನು ನಿರ್ಮಾಣ ಮಾಡಿದೆ. ಇವುಗಳನ್ನು ಒಟ್ಟುಸೇರಿ ಆಚಾರ್ಯರ ಸರ್ವಮೂಲ ಗ್ರಂಥಗಳು ಎಂದು ಕರೆಯುತ್ತಾರೆ. ಇದರಲ್ಲಿ ಅವರು ಜಗತ್ತಿನ ಸತ್ಯತ್ವವನ್ನು ಪ್ರತಿಪಾದನೆ ಮಾಡುವುದರ ಜೊತೆಗೆ ನಾರಾಯಣನ ಭಕ್ತಿಯ ಮೇಲೆಯೇ ಕೇಂದ್ರಿತವಾದ ಏಕದೇವತಾವಾದವನ್ನೂ ಪ್ರತಿಪಾದಿಸುತ್ತಾರೆ. ಈಗಾಗಲೇ ಉಲ್ಲೇಖಿಸಿರುವ ಪುಸ್ತಕಗಳಲ್ಲದೆ ಆಚಾರ್ಯರು ಇನ್ನೂ ಹಲವಾರು ಮುಖ್ಯವಾದ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳು ಹೀಗಿವೆ : ೧. **ಗೀತಾ ಭಾಷ್ಯ** ಮತ್ತು ಗೀತೆಯ ವಿಸ್ತೃತ ವಿವರಣೆಯಾದ **ಗೀತಾತಾತ್ಪರ್ಯ** ೨. ಹಲವಾರು ಉಲ್ಲೇಖಗಳನ್ನು ಒಳಗೊಂಡ, ಬಹು ಸಂಕ್ಷಿಪ್ತವಾದ **ಬ್ರಹ್ಮಸೂತ್ರ ಭಾಷ್ಯ**. ೩. **ಅನುವ್ಯಾಖ್ಯಾನ** : ಬ್ರಹ್ಮಸೂತ್ರ ಭಾಷ್ಯಕ್ಕೆ ವಿವರಣಾತ್ಮಕ ವ್ಯಾಖ್ಯಾನ. ಇದರಲ್ಲಿ ಹಲವಾರು ಇತರ ದರ್ಶನಗಳ ವಿಶ್ಲೇಷಣೆ ಮತ್ತು ವಿಮರ್ಶೆಗಳು ಇವೆ. ೪. **ದಶೋಪನಿಷದ್ ಭಾಷ್ಯ** : ಉಪನಿಷತ್ತುಗಳಿಗೆ ದ್ವೈತಸಿದ್ಧಾಂತದ ಆಧಾರದ ಮೇಲೆ ಇಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಶಂಕರರ ಭಾಷ್ಯವು ಅದ್ವೈತ ಪ್ರತಿಪಾದಕವಾಗಿದ್ದು, ಇದು ಅದಕ್ಕಿಂತ ತದ್ವಿರುದ್ಧವಾಗಿದೆ. ಮೇಲಿನವುಗಳನ್ನೆಲ್ಲ ಸೇರಿಸಿಕೊಂಡು, ಹಾಗೆಯೇ ಇನ್ನಿತರ ಸಣ್ಣ ಗ್ರಂಥಗಳನ್ನೂ ಇವಕ್ಕೆ ಕೂಡಿಸಿಕೊಂಡರೆ, ಒಟ್ಟಾರೆ ಮೂವತ್ತೇಳು ಗ್ರಂಥಗಳಾಗುತ್ತವೆ. ಮಧ್ವಾಚಾರ್ಯರು ಹೀಗೆ ತಮ್ಮ ಹಿಂದಿನ ಆಚಾರ್ಯರುಗಳಿಗಿಂತ ಬೃಹತ್ ಪ್ರಮಾಣದ ಸಾಹಿತ್ಯವನ್ನು ಸೃಷ್ಟಿಸಿದ ಕೀರ್ತಿಗೆ ಪಾತ್ರರಾಗುತ್ತಾರೆ. ಆದರೆ ತಮ್ಮ ಬರಹದಲ್ಲಿ ಅವರೆಂದೂ ಆಲಂಕಾರಿಕ ಭಾಷೆಯ ಉಪಯೋಗವನ್ನು ಮಾಡಿಲ್ಲ. ಅನವಶ್ಯಕವಾದ ವಿಶೇಷಣಗಳನ್ನು ಮತ್ತು ಉಪಮಾ ಮುಂತಾದ ಅಲಂಕಾರಗಳನ್ನು ತನ್ನ ಭಾಷಾಶೈಲಿಯಲ್ಲಿ ಬಳಸಿಲ್ಲ. ಇಂಥ ಪ್ರಯೋಗಗಳನ್ನು ನಾವು ಸಂಸ್ಕೃತ ಭಾಷೆಯ ಕಾವ್ಯಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಅವರ ಭಾಷೆ ಯಾವತ್ತೂ ಸೂತ್ರಪ್ರಾಯವಾದುದು; ಅರ್ಥಗರ್ಭಿತವಾದ ಶಬ್ದಗಳಿಂದ ಕೂಡಿದ್ದು.

ಆಚಾರ್ಯರ ಅಪಾರ ಪಾಂಡಿತ್ಯವಾಗಲಿ ಹಾಗೂ ಅವರ ಬುದ್ಧಿಶಕ್ತಿಯಾಗಲಿ, ವಿಷ್ಣುವಿನ ಮೇಲಿನ ಅವರ ಭಕ್ತಿಭಾವಕ್ಕೆ ಎಳ್ಳಷ್ಟೂ ಧಕ್ಕೆಯನ್ನು ತರಲಿಲ್ಲ. ಅವು ಅವರು ನಾರಾಯಣನಲ್ಲಿ ಇಟ್ಟ ಭಕ್ತಿಭಾವಕ್ಕೆ ಯಾವತ್ತೂ ಅಧೀನದಲ್ಲಿದ್ದವು. ಭಕ್ತಿತತ್ತ್ವವನ್ನು ಪ್ರಚಾರಮಾಡುವುದೇ ಆಚಾರ್ಯರ ಜೀವನದ ಪರಮೋದ್ದೇಶವಾಗಿತ್ತು. ಭಕ್ತಿಯ ಬೋಧನೆಗೆ ಅವರು ಪ್ರಾಚೀನ ಗ್ರಂಥಗಳ ಜೊತೆಜೊತೆಗೆ, ಶಂಕರ ಮತ್ತು ರಾಮಾನುಜರ ಕಾಲದಲ್ಲಿ ಇನ್ನೂ ಪ್ರಸಿದ್ಧಿಗೆ ಬಂದಿರದ ಪುರಾಣರತ್ನವಾದ ಭಾಗವತ ಪುರಾಣವನ್ನು ಸಮರ್ಥವಾಗಿ ಬಳಸಿಕೊಂಡರು. ಶಂಕರರು ಮತ್ತು ರಾಮಾನುಜರು ಭಾಗವತ ಪುರಾಣದಿಂದ ಉಲ್ಲೇಖಿಸುವುದಿಲ್ಲ. ಕೇವಲ ವಿಷ್ಣುಪುರಾಣದಿಂದ ಮಾತ್ರವೇ ಉಲ್ಲೇಖಿಸುತ್ತಾರೆ. ಭಾಗವತದ ಅಧ್ಯಯನ ಮತ್ತು ಅದರ ವ್ಯಾಖ್ಯಾನಗಳು ಮಧ್ವಾಚಾರ್ಯರ ಪ್ರವಚನ ಕಾರ್ಯಕ್ರಮಗಳಲ್ಲಿ ನಿಯಮಿತವಾಗಿ ನಡೆಯುತ್ತಿತ್ತು. ಆದರೆ ಅವರು ಅಂಕೆಯಿಲ್ಲದ ಮತ್ತು ವಿಪರೀತ ಭಾವುಕತೆಯು ಭಕ್ತಿಯಲ್ಲಿ ಸುಳಿಯುವುದರ ವಿರುದ್ಧ ಎಚ್ಚರಿಕೆ ವಹಿಸುತ್ತಿದ್ದರು. ೧೬೦೦ ಶ್ಲೋಕಗಳನ್ನು ಒಳಗೊಂಡ **ಭಾಗವತ ತಾತ್ಪರ್ಯ** ಎಂಬ ಗ್ರಂಥವನ್ನು ಕೂಡ ಅವರು ರಚಿಸಿದ್ದಾರೆ. ಅದರಲ್ಲಿ ಅವರು ಭಾಗವತವನ್ನು ಸೊಗಸಾಗಿ ಸಂಗ್ರಹಿಸಿದ್ದಾರೆ. ಅವರೊಬ್ಬ ದೊಡ್ಡ ಸಂದೇಶವಾಹಕರು. ಯಾವತ್ತೂ ಭಕ್ತಿತತ್ತ್ವವನ್ನು ಶಿಷ್ಯರಿಗೆ ಮತ್ತು ಭಕ್ತರಿಗೆ ಉಪದೇಶ ಮಾಡುವುದರಲ್ಲಿಯೇ ಕಾಲ ಕಳೆಯುತ್ತಿದ್ದರು. ಇಲ್ಲವೇ ವಿರೋಧಿ ದರ್ಶನಗಳ ಪ್ರತಿನಿಧಿಗಳ ಜೊತೆ ವಾದಮಾಡುತ್ತಿದ್ದರು. ಅಂಥ ಪಂಡಿತರು ಅಕ್ಕಪಕ್ಕದ ಊರುಗಳಿಂದ ಅಥವಾ ಬಹುದೂರದಿಂದ ಬರುತ್ತಿದ್ದರು. ಈ ಬಗೆಯ ಅಸಾಧಾರಣ ಸೇವಾಕಾರ್ಯತತ್ಪರತೆಯೇ ಇತರ ವೈಷ್ಣವ ಆಚಾರ್ಯರುಗಳಿಗಿಂತ ಒಬ್ಬ ಮಹಾನ್ ಸಂನ್ಯಾಸಿಯೆಂದು ಇವರಿಗೆ ಗೌರವ ತಂದು ಕೊಟ್ಟಿತು. ತಮ್ಮ ಜೀವಿತಕಾಲದಲ್ಲಿಯೇ ಅವರು ಹಲವಾರು ಶಿಷ್ಯರಿಗೆ ಸಂನ್ಯಾಸದೀಕ್ಷೆಯನ್ನು ನೀಡಿ, ಅವರನ್ನು ತಮ್ಮ ಗ್ರಂಥಗಳಿಗೆ ಟಿಪ್ಪಣಿಗಳನ್ನು ಬರೆಯುವಂತೆ ಪ್ರೋತ್ಸಾಹಿಸಿದರು. ಎಲ್ಲರಿಗೂ ತಮ್ಮ ಸಂದೇಶಗಳನ್ನು ಮುಟ್ಟಿಸುವಂತೆ ಕರೆಕೊಟ್ಟರು. ಅವರ ಶಿಷ್ಯರು ಕೂಡ ಅವರ ಈ ಕಾರ್ಯವನ್ನು ಸಮರ್ಥವಾಗಿ ಮುಂದುವರೆಸಿಕೊಂಡು ಹೋದರು. ಕೃಷ್ಣಮಂದಿರದ ಪೂಜೆಗೆ ಅನುವಾಗುವಂತೆ ಎಂಟು ಸಂನ್ಯಾಸಿಗಳನ್ನು ನಿಯಮಿಸಿ, ಎಂಟು ಮಠಗಳನ್ನು ಸ್ಥಾಪಿಸಿದರು. ಅವರೆಲ್ಲ ನಿಯಮಿತ ಕಾಲಾವಧಿ ಕೃಷ್ಣನ ಪೂಜೆ ಮಾಡುವಂತೆ ವಿಧಿಸಿದರು. ಈ ವ್ಯವಸ್ಥೆ ಇಂದಿಗೂ ಯಾವ ಅಡ್ಡಿ ಆತಂಕಗಳಿಲ್ಲದೆ ಸುಸೂತ್ರವಾಗಿ ನಡೆದುಕೊಂಡು ಬರುತ್ತಿದೆ. ಈ ಮೂಲಕ ಅಷ್ಟಮಠದ ಯತಿಗಳು, ಆಚಾರ್ಯರು ೭೦೦ ವರ್ಷಗಳಿಗೂ ಮುಂಚೆ ಬೆಳಗಿಸಿದ ಭಕ್ತಿಯ ಜ್ಯೋತಿಯನ್ನು ಇನ್ನೂ ಕಾಪಾಡಿಕೊಂಡು ಬರುತ್ತಿದ್ದಾರೆ.

ಮಧ್ವರ ನಂತರ

ಮಧ್ವರ ನಂತರದ ಸಂನ್ಯಾಸಿ ಪರಂಪರೆಯಲ್ಲಿ ಅಪಾರ ಭಕ್ತಿ ಮತ್ತು ಪಾಂಡಿತ್ಯದ ಹಲವಾರು ಮಹಾತ್ಮರು ಹುಟ್ಟಿಬಂದದ್ದು ಆಚಾರ್ಯರ ಸೌಭಾಗ್ಯವೇ ಅನ್ನಬೇಕು. ಈ ಮಹಾನುಭಾವರ ಗ್ರಂಥಗಳ ಮೂಲಕ ಮಧ್ವಸಿದ್ಧಾಂತವು ದೇಶವಿದೇಶಗಳಲ್ಲಿ ವಿದ್ವಾಂಸರ ಮನ್ನಣೆಯನ್ನು ಪಡೆಯಿತು. ಹಾಗೆಯೇ ಅದು ಹಲವಾರು ವೈಷ್ಣವ ಸಂಪ್ರದಾಯಗಳಲ್ಲಿ ಪ್ರಚಲಿತವಿರುವ ಭಕ್ತಿ ಸಾಧನೆಯ ಮೇಲೆ ಪ್ರಭಾವವನ್ನು ಬೀರಿತು. ಅವರಲ್ಲಿ ಮೊದಲನೆಯವರೂ ಮತ್ತು ಬಹುಪ್ರಮುಖರೂ ಆದವರು **ಜಯತೀರ್ಥರು** (೧೩೬೫ -೮೮). ಇವರು ಮಳಖೇಡ ಎಂಬಲ್ಲಿನ ಶ್ರೀಮಂತರ ಪುತ್ರರು. ಅವರು ತಮ್ಮ ಬಾಲ್ಯದಿಂದಲೇ ಮಧ್ವರ ಸಾಕ್ಷಾತ್ ಶಿಷ್ಯರಾದ ಅಕ್ಷೋಭ್ಯತೀರ್ಥರ ಸಂಪರ್ಕಕ್ಕೆ ಬಂದು, ಅವರ ಶಿಷ್ಯರಾದರು. ತಮ್ಮ ಗುರುಗಳ ನಿಧನದ ನಂತರ ಅವರ ಮಠದ

ಮಠಾಧಿಪತಿಗಳೂ ಆದರು. ಅವರ ಅತಿ ಪ್ರಮುಖ ಗ್ರಂಥವೆಂದರೆ **'ನ್ಯಾಯಸುಧಾ.'** ಈ ಗ್ರಂಥವು ಮಧ್ವರ ಅನುವ್ಯಾಖ್ಯಾನದ ವ್ಯಾಖ್ಯಾನವಾಗಿದೆ. ಇದರಲ್ಲಿ ಜಯತೀರ್ಥರು ತಾತ್ತ್ವಿಕ ವಿಚಾರಗಳಿಗೆ ಸೂಕ್ತವಾದ ಅತ್ಯಂತ ಉತ್ತಮವಾದ, ಸ್ಪಷ್ಟವಾದ ಮತ್ತು ಸುಂದರವಾದ ಬರಹದ ಶೈಲಿಯನ್ನು ಉಪಯೋಗಿಸಿದ್ದಾರೆ ಎನ್ನುವುದು ವೈಶಿಷ್ಟ್ಯ. ಇವರ ಬರಹವು ಅವರ ಅನುಪಮವಾದ ಶೈಲಿ ಮತ್ತು ಚಿಂತನೆಯ ಗಂಭೀರತೆಗೆ ದ್ಯೋತಕವಾಗಿದೆ. ಇದು ಅವರನ್ನು ಮಧ್ವರ ಸಿದ್ಧಾಂತಕ್ಕೆ ವ್ಯವಸ್ಥಿತ ಚೌಕಟ್ಟನ್ನು ನೀಡುವುದಕ್ಕೆ ಸಹಾಯ ಮಾಡಿತು.

ಮಧ್ವರ ವೈಷ್ಣವ ತತ್ತ್ವವನ್ನು ಸರ್ವಮಾನ್ಯವಾದ ರೀತಿಯಲ್ಲಿ ನಿರೂಪಣೆ ಮಾಡಿದ ಇನ್ನೊಬ್ಬರು ಮಹಾನುಭಾವರೆಂದರೆ **ವ್ಯಾಸರಾಯರು** (೧೪೭೮–೧೫೩೯). ಅವರು ಇಂದಿನ ಮೈಸೂರು ನಗರದ ಹತ್ತಿರದಲ್ಲಿರುವ ಬನ್ನೂರಿನಲ್ಲಿ ಜನ್ಮತಾಳಿದರು. ಅವರು ತಮ್ಮ ಬಾಲ್ಯದಲ್ಲಿಯೇ ಇನ್ನೊಬ್ಬ ಮಹಾನ್ ಸಂತರಾದ ಶ್ರೀಪಾದರಾಜರ ಶಿಷ್ಯರಾದರು. ಮಾಧ್ವ ವೇದಾಂತವನ್ನು ಆಳವಾಗಿ ಅಧ್ಯಯನ ಮಾಡಿದ ವ್ಯಾಸರಾಯರು, ಕಾಂಚೀಪುರಕ್ಕೆ ಹೋಗಿ ಅಲ್ಲಿ ಅದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಕೂಡ ಅಧ್ಯಯನ ಮಾಡಿದರು. ಹೀಗೆ ಅವರು ಪಡೆದುಕೊಂಡ ವೇದಾಂತದ ಸರ್ವಾಂಗೀಣ ಪರಿಜ್ಞಾನದ ಫಲವಾಗಿ ಅವರಿಗೆ **ನ್ಯಾಯಾಮೃತ** ಎಂಬ ಅಪೂರ್ವ ಗ್ರಂಥವನ್ನು ಬರೆಯಲು ಸಾಧ್ಯವಾಯಿತು. ಇದು ದ್ವೈತಸಿದ್ಧಾಂತದ ತಾತ್ತ್ವಿಕ ಜಿಜ್ಞಾಸೆಯ ಅಮೂಲ್ಯ ಗ್ರಂಥ. ಇದು ಅದ್ವೈತಿಗಳಲ್ಲಿ ಭಾರೀ ತಲ್ಲಣವನ್ನೇ ಉಂಟುಮಾಡಿತು. ಮಧುಸೂದನ ಸರಸ್ವತಿಯಂತಹ ಉನ್ನತ ದರ್ಜೆಯ ಅದ್ವೈತ ಪಂಡಿತರು ತಮ್ಮ ಮಹತ್ತಾದ ಗ್ರಂಥವಾದ **'ಅದ್ವೈತ ಸಿದ್ಧಿ'**ಯ ಮೂಲಕ, ವ್ಯಾಸರಾಯರು ತಮ್ಮ ಗ್ರಂಥದಲ್ಲಿ ಅದ್ವೈತ ಸಿದ್ಧಾಂತದ ವಿರುದ್ಧವಾಗಿ ಎತ್ತಿರುವ ಪ್ರಬಲ ತಾರ್ಕಿಕ ಆಕ್ಷೇಪಣೆಗಳಿಗೆ ಉತ್ತರವನ್ನು ನೀಡುವಂತೆ ಮಾಡಿತು; ಅದ್ವೈತ ಸಿದ್ಧಾಂತದ ಮರುಹೇಳಿಕೆಯನ್ನೇ ತಮ್ಮ ಗ್ರಂಥದಲ್ಲಿ ನೀಡುವಂತೆ ಮಾಡಿತು.

ಹೀಗೆ ಮಧ್ವಸಿದ್ಧಾಂತಕ್ಕೆ ವ್ಯಾಸರಾಯರು ಬಹಳ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಕೇವಲ ಪಂಡಿತರಿಗೆ ಮೀಸಲಾದ ಈ ಕ್ಷೇತ್ರದಲ್ಲಿ ಮಾತ್ರವಲ್ಲ, ಮುಂದೆ ಕರ್ನಾಟಕದಲ್ಲಿ ಪ್ರಸಿದ್ಧವಾದ ಜನಸಾಮಾನ್ಯರ ಭಕ್ತಿ ಆಂದೋಲನವಾದ ದಾಸಕೂಟಕ್ಕೂ ವ್ಯಾಸರಾಯರೇ ಪ್ರೇರಕ ಶಕ್ತಿಯಾಗಿದ್ದರು. ತಮಿಳುನಾಡಿನ ಆಳ್ವಾರರ ಭಕ್ತಿಪಂಥದಂತೆಯೇ ಕರ್ನಾಟಕದಲ್ಲಿ ದಾಸಪರಂಪರೆ ಬೆಳೆದು ಬಂತು. ವ್ಯಾಸರಾಯರು ಸ್ವತಃ ಕನ್ನಡದಲ್ಲಿ ಕೀರ್ತನೆಗಳನ್ನು ರಚನೆ ಮಾಡಿದ್ದಲ್ಲದೆ, ಪುರಂದರದಾಸರು ಮತ್ತು ಕನಕದಾಸರಂಥ ವಿಭೂತಿಪುರುಷರನ್ನು ಬೆಳಕಿಗೆ ತಂದರು. ಅವರಿಬ್ಬರೂ ಈ ದಾಸಕೂಟದ ಮಹಾನ್ ನೇತಾರರು ಎನಿಸಿಕೊಂಡವರು. ಪುರಂದರದಾಸರು ಸಂಗೀತಜ್ಞರು. ಸಾವಿರಾರು ಕೀರ್ತನೆಗಳನ್ನು ರಚಿಸಿ ಮಧ್ವರಿಂದ ಪ್ರವರ್ತಿತವಾದ ಭಕ್ತಿಯ ಬೆಳಕು ಪ್ರಜ್ವಲಿಸುವಂತೆ ನೋಡಿಕೊಂಡಿದ್ದಾರೆ. ಕನಕದಾಸರು ಕುರುಬ ಜನಾಂಗಕ್ಕೆ ಸೇರಿದವರು. ಇಷ್ಟಾದರೂ ವ್ಯಾಸರಾಯರ ಉದಾರ ಮನೋಭಾವ ಅವರನ್ನು ಶಿಷ್ಯನನ್ನಾಗಿ ಸ್ವೀಕರಿಸಿತು. ನೈಜ ಭಕ್ತಿಯಲ್ಲಿ ಹುಟ್ಟು ಮತ್ತು ಕುಲಭೇದಗಳಿಗೆ ಅವಕಾಶವಿಲ್ಲವೆಂಬ ಸತ್ಯವನ್ನು ಸಾಬೀತುಪಡಿಸಿತು. ಕನಕದಾಸರ ಕೀರ್ತನೆಗಳು ದಾಸಕೂಟದ ಉದಾರ ಭಾವದ ದ್ಯೋತಕಗಳಾಗಿವೆ ಎಂದು ಹೇಳಬಹುದು. ಇವರಿಬ್ಬರ ಮತ್ತು ಇನ್ನೂ ಹಲವು ದಾಸವರೇಣ್ಯರ ಕೀರ್ತನೆಗಳು ಮತ್ತು ಗ್ರಂಥಗಳು ಮಹಾರಾಷ್ಟ್ರದ ಭಕ್ತಿ ಸಂಪ್ರದಾಯದ ಮೇಲೆ ಪ್ರಭಾವ ಬೀರಿತು. ಅಲ್ಲಿನ ಭಕ್ತಿ ಪಂಥವು ಪಂಡರಾಪುರದ ವಿಠ್ಠಲ ದೇವರನ್ನೇ ಕೇಂದ್ರಬಿಂದುವಾಗಿ ಹೊಂದಿತ್ತು.

ಹಲವಾರು ವರ್ಷಗಳ ನಂತರ ಮಧ್ವರ ವೈಷ್ಣವ ಸಿದ್ಧಾಂತವು ಬಂಗಾಳದ ಗೌಡೀಯ ಆಂದೋಲನಕ್ಕೆ ಸ್ಫೂರ್ತಿಯನ್ನು ನೀಡಿತು. ಬಲಭದ್ರನು ಗೌಡೀಯ ಸಿದ್ಧಾಂತದ ಪ್ರಕಾರ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಿದನು. ಅದರಲ್ಲಿ ಮಧ್ವರ ದ್ವೈತಸಿದ್ಧಾಂತದ ಅನೇಕ ತತ್ತ್ವಗಳನ್ನು ತನ್ನ ಚಿಂತನೆಯಲ್ಲಿ ಅಳವಡಿಸಿಕೊಂಡನು.

(ಮುಗಿಯಿತು)

ಶಿವಸ್ತುತಿ

ಏಕೈಶ್ವರ್ಯೇ ಸ್ಥಿತೋಽಪಿ ಪ್ರಣತಬಹುಫಲೇ ಯಃ ಸ್ವಯಂ ಕೃತ್ತಿವಾಸಾಃ
ಕಾಂತಾಸಂಮಿಶ್ರದೇಹೋಽಪ್ಯವಿಷಯಮನಸಾಂ ಯಃ ಪರಸ್ತಾದ್ಯತೀನಾಂ ।
ಅಷ್ಟಾಭಿರ್ಯಸ್ಯ ಕೃತ್ಸ್ನಂ ಜಗದಪಿ ತನುಭಿರ್ಬಿಭ್ರತೋ ನಾಭಿಮಾನಃ
ಸನ್ಮಾರ್ಗಾಲೋಕನಾಯ ವ್ಯಪನಯತು ಸ ವಸ್ತಾಮಸೀಂ ವೃತ್ತಿಮೀಶಃ ॥

ನಮಸ್ಕರಿಸಿ ಆಶ್ರಯಿಸಿದವರಿಗೆ ಬೇಕಾದಷ್ಟು ಫಲ ನೀಡುವ ಸಂಪತ್ತಿದ್ದರೂ ತಾನು ಕೇವಲ ಚರ್ಮವನ್ನೇ ಉಟ್ಟಿದ್ದಾನೆ. ಪಾರ್ವತಿಗೆ ಅರ್ಧಶರೀರವನ್ನು ಹಂಚಿದ್ದರೂ, ಜಿತೇಂದ್ರಿಯರಾದ ಯತಿಗಳೆಲ್ಲರಿಗೂ ಶ್ರೇಷ್ಠನಾಗಿದ್ದಾನೆ. ಚಂದ್ರ, ಸೂರ್ಯ, ಅಗ್ನಿ, ಗಾಳಿ, ನೆಲ, ಜಲ, ಆಕಾಶ, ತನ್ನ ಶಕ್ತಿ — ಎಂಬ ಎಂಟು ಅಂಶಗಳಿಂದ ಜಗತ್ತನ್ನು ರಕ್ಷಿಸುತ್ತಿದ್ದರೂ ಅವನಿಗೆ ಅಭಿಮಾನವಿಲ್ಲ. ಆ ಈಶ್ವರನು ಮೋಕ್ಷಮಾರ್ಗವನ್ನು ಕಾಣಲು ಅನುಕೂಲವಾಗುವಂತೆ ನಮ್ಮ ತಮಸ್ಸನ್ನು ಹೋಗಲಾಡಿಸಲಿ.

— ಕಾಳಿದಾಸ ('ಮಾಳವಿಕಾಗ್ನಿಮಿತ್ರ'ದಲ್ಲಿ)

ಭಕ್ತ ಕನಕದಾಸರು – ೧

ಕಥೆ : ಟಿ.ಎಂ. ಸುಂದರರಾಮನ್ **ಚಿತ್ರ: ಶಂಕರ್**

ಕೃಷ್ಣದೇವರಾಯನು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದಾಗ ಬಾಡವೆಂಬ ಗ್ರಾಮದಲ್ಲಿ ಬೀರಪ್ಪನೆಂಬ ಧಣಾಯಕನಿದ್ದನು. ಅವನಿಗೆ ತಿರುಪತಿ ತಿಮ್ಮಪ್ಪನ ಅನುಗ್ರಹದಿಂದ ಹುಟ್ಟಿದ ಮಗನಿಗೆ 'ತಿಮ್ಮಪ್ಪ'ನೆಂದೇ ಹೆಸರಿಟ್ಟರು. ತಿಮ್ಮಪ್ಪನು ಬಾಲ್ಯದಿಂದಲೇ ದೈವಭಕ್ತ. ಕವಿತಾಶಕ್ತಿಯೂ ಅವನಲ್ಲಿತ್ತು.

1 ಬಾಲಕ ತಿಮ್ಮಪ್ಪನು ತನ್ನ ಸ್ನೇಹಿತರೊಂದಿಗೆ ಒಂದು ಮರದ ಅಡಿಯಲ್ಲಿ ಕುಳಿತು ಭಜನೆ ಹಾಡುತ್ತಿದ್ದ. ಆಗ ಅಲ್ಲಿಗೆ ಒಂದು ಹಾವು ಬಂತು. ತಿಮ್ಮಪ್ಪ ಸ್ನೇಹಿತರು ಹೆದರಿ ಪಲಾಯನ ಮಾಡಿದರು. ಸ್ವಲ್ಪ ಹೊತ್ತಾದ ಮೇಲೆ ಅವರು ಮರಳಿ ಬಂದರು.



2 ಒಂದು ದಿನ ತಿಮ್ಮಪ್ಪನು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ. ಅಲ್ಲಿ ಅವನಿಗೆ ಚಿನ್ನದ ನಿಧಿ ಸಿಕ್ಕಿತು.

3 ಕನಕನು ಸೇವಾಕಾರ್ಯಗಳಿಗಾಗಿ ಅಪಾರ ಹಣವನ್ನು ವಿನಿಯೋಗಿಸಿದ. ಅವನೊಬ್ಬ ಉತ್ತಮ ಕವಿಯೂ ಆಗಿದ್ದ. ರಾಜನಿಗೆ ಈ ವಿಷಯ ತಿಳಿದು, ಕನಕನನ್ನು ಗೌರವದಿಂದ ತನ್ನ ಆಸ್ಥಾನಕ್ಕೆ ಕರೆಸಿದ.



4 ಕನಕನಾಯಕನು ಕೆಲವು ಕಾಲ ಜನರ ಸೇವಾಕಾರ್ಯಗಳಲ್ಲಿ ನಿರತನಾದ. ಒಂದು ದಿನ ಅವನಿಗೆ ಕನಸಿನಲ್ಲಿ ಶ್ರೀಹರಿಯು ಕಾಣಿಸಿಕೊಂಡು, ಅವನನ್ನು 'ತಿರುಪತಿಗೆ ಬಾ' ಎಂದು ಕರೆದಂತೆ ಭಾಸವಾಯಿತು. ಹೀಗೆಂದು ಕರೆದ ಭಗವಂತನ ಹಿಂದೆ ಕನಕನು ಓಡುತ್ತಿದ್ದಾಗಲೇ ಕನಸೊಡೆಯಿತು. ಹಲವು ಬಾರಿ ಇದೇ ರೀತಿ ಕನಸು ಬಿದ್ದಾಗ, ಅವನಿಗೆ ಏನು ಮಾಡಬೇಕೋ ತಿಳಿಯದಾಯಿತು.

5 ಅಷ್ಟರಲ್ಲಿ ಕನಕನು ರಾಜರಿಗೆ ವಿರುದ್ಧವಾಗಿದ್ದ ದುಷ್ಟರನ್ನು ಸದೆಬಡಿಯಬೇಕಾಯಿತು. ಆದರೆ ವೈರಿಗಳು ಪ್ರಬಲರಾಗಿದ್ದರು; ಕನಕನಿಗೆ ಸೋಲಾಯಿತು. ಯುದ್ಧದಲ್ಲಿ ಅವನು ಗಾಯಾಳುವಾಗಿ ನರಳಿದ. ಅವನನ್ನು ದ್ವೇಷಿಸುತ್ತಿದ್ದ ಒಬ್ಬಾತ ಅವನಿಗೆ ಹಿಂಬದಿಯಿಂದ ಇರಿದ.

6 ಮತ್ತೊಮ್ಮೆ ದೇವರು ಕನಕನಾಯಕನ ಸ್ವಪ್ನದಲ್ಲಿ ಕಾಣಿಸಿಕೊಂಡ.



ಶ್ರೀಹರಿಯು ತನ್ನ ದಿವ್ಯರೂಪವನ್ನು ಅವನಿಗೆ ತೋರಿಸಿದ. ಭಗವಂತನ ದಿವ್ಯದರ್ಶನದಿಂದ ಅವನ ಗಾಯವೆಲ್ಲವೂ ವಾಸಿಯಾಯಿತು. ಆನಂದದಿಂದ ಪರವಶನಾಗಿ ಅವನು ನರ್ತಿಸತೊಡಗಿದ.

7 ದೇವರ ದರ್ಶನದಿಂದ ವೈರಾಗ್ಯಹೊಂದಿದ ಕನಕನಾಯಕನು ಪ್ರಾಪಂಚಿಕ ಜೀವನವನ್ನು ತ್ಯಜಿಸಿದ. ಆಡಂಬರದ ಜೀವನವನ್ನು ಬಿಟ್ಟು, ಸರಳವಾದ ಜೀವನವನ್ನು ಅವನು ನಡೆಸಲಾರಂಭಿಸಿದ. ವಾದ್ಯಗಳನ್ನು ನುಡಿಸುತ್ತ, ಕೀರ್ತನೆಗಳನ್ನು ಹಾಡುತ್ತ ಅವನು ಊರಿಂದೂರಿಗೆ ಸಂಚಾರ ಹೊರಟ.


8
ಕನಕದಾಸನು ತಿರುಪತಿಯಲ್ಲಿ ಒಂದೆಡೆ ಒಂಟಿಕಾಲಿನ ಮೇಲೆ ನಿಂತು ತಪಸ್ಸು ಮಾಡಿದ. ತನ್ನನ್ನು ದಾಸನನ್ನಾಗಿ ಮಾಡಿಕೊಳ್ಳೆಂದು ಅವನು ದೇವರನ್ನು ಬೇಡಿಕೊಂಡ. ಅವನ ಮುಂದೆ ಕಾಣಿಸಿಕೊಂಡ ಪರಮಾತ್ಮನು ಅವನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದ.
ಕನಕ, ನೀನು ಈಗಲೇ ಬಾಡಕ್ಕೆ ಹೋಗು.
ದೇವಾ, ನೀನು ದರ್ಶನ ನೀಡಿ ಈ ಬಡವನನ್ನು ಅನುಗ್ರಹಿಸಿದೆ. ಗೋವಿಂದ! ಗೋವಿಂದ!
ದೇವರ ನಾಮ ಸಂಕೀರ್ತನೆಯಲ್ಲಿ ಉನ್ಮತ್ತನಾಗಿದ್ದುಕೊಂಡೇ ಅವನು ಬಾಡ ಗ್ರಾಮಕ್ಕೆ ಮರಳಿದ. ಅವನ ತಾಯಿ ಆಗ ದೈವಾಧೀನಳಾಗಿದ್ದಳು. ಅವನ ಪಾಲಿಗೆ ಉಳಿದಿದ್ದ ಒಂದೇ ಒಂದು ಪ್ರಾಪಂಚಿಕ ಬಂಧನವೂ ಈಗ ಕಡಿದು ಹೋಗಿತ್ತು. ಅವನು ಸಂಪೂರ್ಣವಾಗಿ ತನ್ನನ್ನು ದೇವರಿಗೆ ಸಮರ್ಪಿಸಿ ಕೊಂಡ. ಕನಕಪ್ಪ 'ಕನಕದಾಸ'ನಾದ.
9
ಕನಕನು ವ್ಯಾಸತೀರ್ಥರನ್ನು ತನ್ನ ಗುರುವಾಗಿ ಸ್ವೀಕರಿಸಿದ್ದ. ಅವರನ್ನು ಕಾಣಲು ಅವರ ಆಶ್ರಮಕ್ಕೆ ಹೋದಾಗ ಅಲ್ಲಿ ಕೆಲವರು ...
ಏಯ್, ಯಾರು ನೀನು? ಯಾವ ಜಾತಿ ನಿನ್ನದು? ನೀನು ಎಲ್ಲಿಂದ ಬಂದೆ?
ಸ್ವಾಮಿ, ನನ್ನ ಗುರುವನ್ನು ಕಾಣಲು ನಾನು ತುಂಬ ದೂರದಿಂದ ಬಂದಿದ್ದೇನೆ. ಈ ಬಡವನಿಗೆ ಜಾತಿ, ಊರು ಎಲ್ಲಿನದು? ಇಡೀ ಪ್ರಪಂಚವೇ ನನ್ನ ಮನೆ. ಆಕಾಶವೇ ನನಗೆ ಸೂರು. ಶ್ರೀಮನ್ನಾರಾಯಣನೇ ನನ್ನ ಒಡೆಯ.
ಎಂಥ ಸೊಕ್ಕು ಇವನಿಗೆ!
10
ಕನಕ ಅಲ್ಲಿಗೆ ಬಂದಿರುವುದಾಗಿ ವ್ಯಾಸತೀರ್ಥರಿಗೆ ದಿವ್ಯದೃಷ್ಟಿಯಿಂದ ತಿಳಿದುಬಂತು. ಅವರು ತಾವಾಗಿಯೇ ಹೊರಬಂದು ಅವನನ್ನು ಒಳಗೆ ಕರೆದುಕೊಂಡು ಹೋದರು. ಅಲ್ಲಿ ಅವರು ಕನಕನಿಗೆ ದೀಕ್ಷೆ ನೀಡಿ, ಅವನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದರು.
11
ಇದು ಇನ್ನೂ ಬುದ್ಧಿ ಬೆಳೆಯದ ಶಿಷ್ಯಂದಿರ ಅಸಹನೆಗೆ ಕಾರಣವಾಯಿತು.
ಇದೇನು? ನಾವು ಈ ಕೆಳಜಾತಿಯವನೊಂದಿಗೆ ವಿದ್ಯೆ ಕಲಿಯಬೇಕೆ?
ಗುರುದೇವ, ಅವನ ಸ್ಥಾನ ಯಾವುದು ಅಂತ ನಮಗೆ ತಿಳಿಯದು.
ಶಿಷ್ಯಂದಿರೇ, ಕನಕ ಒಳ್ಳೆಯ ಕೀರ್ತನಕಾರ, ಒಳ್ಳೆಯ ಕವಿ. ಅವನು ಮಹಾವಿಷ್ಣುವಿನ ಪರಮಭಕ್ತ . ಅವನನ್ನು ಕೆಳಜಾತಿಯವನು ಎಂದು ಹಳಿಯಬೇಡಿ.



ಯಾವ 'ಅಹಂ' ಮನುಷ್ಯನನ್ನು ಸಂಸಾರಿಯನ್ನಾಗಿ, ಕಾಮಕಾಂಚನಾಸಕ್ತನನ್ನಾಗಿ ಮಾಡುವುದೋ ಅದು 'ಕೆಟ್ಟ ಅಹಂ'. 'ದಾಸ ಅಹಂ', ಎಂದರೆ ನಾನು ಭಗವಂತನ ದಾಸ, ನಾನು ಆತನ ಭಕ್ತ ಎಂಬ ಭಾವ ಕೆಡುಕಾದುದೇನಲ್ಲ. ಅದಕ್ಕೆ ಬದಲು ಅದು ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

— ಶ್ರೀರಾಮಕೃಷ್ಣರು

ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

೧. ಸೋದರಿ ನಿವೇದಿತಾ ಅವರ ೧೫೦ನೇ ಜಯಂತಿ ಆಚರಣೆ: ವಿವಿಧ ಶಾಖಾಕೇಂದ್ರಗಳಲ್ಲಿ ಸೋದರಿ ನಿವೇದಿತಾ ಅವರ ೧೫೦ನೇ ಜಯಂತಿಯ ಆಚರಣೆಯ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ನಡೆದವು. ಆಯಾ ಕೇಂದ್ರಗಳ ಹಾಗೂ ಚಟುವಟಿಕೆಗಳ ವಿವರಗಳು ಹೀಗಿವೆ:

ಅಸನ್ಸೋಲ್ ಕೇಂದ್ರದಲ್ಲಿ ನಡೆದ **ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮ**ಗಳಲ್ಲಿ ೧೧ ಶಾಖೆಗಳಿಂದ ಬಂದ ೧೪೧೨ ವಿದ್ಯಾರ್ಥಿಗಳು ಭಾಗವಹಿಸಿದರು. ವಿಜೇತರಿಗೆ ಫೆಬ್ರವರಿ ೨೨ರಂದು ನಡೆದ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಯಿತು. ಮಾರ್ಚ್ ೨೪ರಂದು ಪ್ರಧಾನ ಕಾರ್ಯದರ್ಶಿಯವರು ನೀಡಿದ ಪ್ರವಚನದಲ್ಲಿ ೬೦೦ ಮಂದಿ ಭಕ್ತರು ಭಾಗವಹಿಸಿದ್ದರು. **ಬಾಗ್ದಾ** ಕೇಂದ್ರದಲ್ಲಿ ಮಾರ್ಚ್ ೨೪ರಂದು ನಡೆದ **ವಿದ್ಯಾರ್ಥಿ ಸಮಾವೇಶ**ದಲ್ಲಿ ಪ್ರಧಾನವಾಗಿ ಬುಡಕಟ್ಟು ಜನಾಂಗಕ್ಕೆ ಸೇರಿದ ೨೫೦ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು. **ಗದಾಧರ ಆಶ್ರಮ**ವು ಫೆಬ್ರವರಿ ೨೭ ಹಾಗೂ ೨೮ ರಂದು ಹೂಗ್ಲಿ ಜಿಲ್ಲೆಯ ಎರಡು ಶಾಲೆಗಳಲ್ಲಿ ನಡೆಸಿದ **ವಿದ್ಯಾರ್ಥಿ ಸಮಾವೇಶ**ದಲ್ಲಿ ೬೦೦ ಮಂದಿ ಭಕ್ತರು ಪಾಲ್ಗೊಂಡರು. **ಕೈಲಾಸ್ ಶಹರ್** ಆಶ್ರಮವು ಮಾರ್ಚ್ ೧೯ ರಂದು ಆಯೋಜಿಸಿದ **ಭಕ್ತ ಸಮಾವೇಶ**ದಲ್ಲಿ ೬೦೦ ಮಂದಿ ಭಕ್ತರು ಪಾಲ್ಗೊಂಡರು. **ಕರೀಂಗಂಜ್:** ಫೆಬ್ರವರಿ ೧೮ರಂದು ನಡೆದ **ಭಕ್ತ ಸಮಾವೇಶ** ಹಾಗೂ ಫೆಬ್ರವರಿ ೨೪ರಂದು ನಡೆದ **ಯುವ ಸಮಾವೇಶ** ಕಾರ್ಯಕ್ರಮಗಳಲ್ಲಿ ೫೧೭ ಮಂದಿ ಭಾಗವಹಿಸಿದ್ದರು. **ಪುರುಲಿಯಾ** ಕೇಂದ್ರವು ಮಾರ್ಚ್ ೨೩ ರಂದು ಪುರುಲಿಯಾ ನಗರದಲ್ಲಿ ಏರ್ಪಡಿಸಿದ **ಯುವ ಸಮ್ಮೇಳನ**ದಲ್ಲಿ ಪ್ರಧಾನ ಕಾರ್ಯದರ್ಶಿಯವರು ಅಧ್ಯಕ್ಷತೆ ವಹಿಸಿದ್ದರು. ಇದರಲ್ಲಿ ಸುಮಾರು ೭೦೦ ಮಂದಿ ಯುವಕರು ಪಾಲ್ಗೊಂಡಿದ್ದರು. ಪಶ್ಚಿಮ ಬಂಗಾಳ ಸರ್ಕಾರದ ಉನ್ನತ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ಸಮ್ಮೇಳನವನ್ನು ಆಯೋಜಿಸಲಾಗಿತ್ತು. **ರಾಜ್‌ಕೋಟ್** ಕೇಂದ್ರವು ಮಾರ್ಚ್ ೧೧ರಂದು ಒಂದು **ಆಧ್ಯಾತ್ಮಿಕ ಶಿಬಿರ**ವನ್ನೂ, ಮಾರ್ಚ್ ೨೦ರಂದು **ಯುವಸಮ್ಮೇಳನ**ವನ್ನೂ ಮಾರ್ಚ್ ೨೬ರಂದು ಒಂದು **ಪ್ರವಚನ ಕಾರ್ಯಕ್ರಮ**ವನ್ನೂ ಏರ್ಪಡಿಸಿದ್ದು, ಈ ಕಾರ್ಯಕ್ರಮಗಳಲ್ಲಿ ಒಟ್ಟು ೨೦೦೦ ಮಂದಿ ಭಾಗವಹಿಸಿದ್ದರು. **ರಾಮಹರಿಪುರ** ಆಶ್ರಮದ ವತಿಯಿಂದ ಮಾರ್ಚ್ ೩ ಹಾಗೂ ೪ರಂದು **ವಾಲಿಬಾಲ್ ಪಂದ್ಯಾಟ**ವನ್ನು ಏರ್ಪಡಿಸಿದ್ದು, ಅದರಲ್ಲಿ ೧೬ ತಂಡಗಳು ಭಾಗವಹಿಸಿದ್ದವು. ಮಾರ್ಚ್ ೪ ರಂದು **ಅಧ್ಯಾಪಕರ ಸಮಾವೇಶ** ನಡೆಯಿತು. ಇದರಲ್ಲಿ ೬೫ ಶಾಲೆಗಳಿಂದ ಬಂದ ೨೪೩ ಅಧ್ಯಾಪಕರು ಪಾಲ್ಗೊಂಡರು. **ಶಾರದಾಪೀಠ:** ಮಾರ್ಚ್ ೧೦ ಹಾಗೂ ೧೧ರಂದು **ವಿದ್ಯಾಮಂದಿರ**ದಲ್ಲಿ **ಸೋದರಿ ನಿವೇದಿತಾ** ಎಂಬ ವಿಷಯವನ್ನು ಕುರಿತ **ಅಂತರರಾಷ್ಟ್ರೀಯ ವಿಚಾರ ಸಂಕಿರಣ**ವು ನಡೆಯಿತು. ಇದರಲ್ಲಿ ಪ್ರಧಾನ ಕಾರ್ಯದರ್ಶಿಯವರು ಪ್ರಾಸ್ತವಿಕ ನುಡಿಗಳನ್ನು ಆಡಿದರು. ಸುಮಾರು ೪೦೦ ಮಂದಿ ಇದರಲ್ಲಿ ಭಾಗ ವಹಿಸಿದ್ದರು. **ಸ್ವಾಮಿ ವಿವೇಕಾನಂದರ ಪೂರ್ವಿಕರ ಮನೆ :** ಈ ಕೇಂದ್ರದಲ್ಲಿ ಹಾಗೂ ಕೊಲ್ಕತ್ತಾದ ಇತರ ಪ್ರದೇಶಗಳಲ್ಲಿ ಫೆಬ್ರವರಿ ೨೭ರಿಂದ ಮಾರ್ಚ್ ೧೬ರ ವರೆಗೆ ಐದು **ಪ್ರವಚನ**ಗಳು ನಡೆದವು. ಈ ಎಲ್ಲ ಕಾರ್ಯಕ್ರಮಗಳಲ್ಲಿ ೨೬೮೦ ಮಂದಿ ಜನರು ಪಾಲ್ಗೊಂಡರು. **ತಾಮಲುಕ್** ಕೇಂದ್ರವು ಪೂರ್ವ ಹಾಗೂ ಪಶ್ಚಿಮ ಮೇದಿನೀಪುರ ಜಿಲ್ಲೆಗಳಲ್ಲಿರುವ ೨೬ ಶಾಲೆಗಳಲ್ಲಿ ಈ ಕೇಂದ್ರವು ನಡೆಸಿದ ವಿವಿಧ **ಸಾಂಸ್ಕೃತಿಕ ಸ್ಪರ್ಧೆ**ಗಳಲ್ಲಿ ಸುಮಾರು ೬೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮಾರ್ಚ್ ೨೨ರಂದು ನಡೆದ ಕೊನೆಯ ಹಂತದ ಸ್ಪರ್ಧೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ೫೦೦ ಮಂದಿ ಪಾಲ್ಗೊಂಡರು.

೨. ಇತರ ಕಾರ್ಯಕ್ರಮಗಳು: **ವಿಶಾಖಪಟ್ಟಣ** ಕೇಂದ್ರದಲ್ಲಿ ಮಾರ್ಚ್ ೧ರಂದು **'ವಿವೇಕ್ ಇನಸ್ಟಿಟ್ಯೂಟ್ ಆಫ್ ಎಕ್ಸೆಲೆನ್ಸ್'** ಸಂಸ್ಥೆಯ ಉದ್ಘಾಟನೆ ನಡೆಯಿತು. ಈ ಸಂಸ್ಥೆಯಲ್ಲಿ, ಜೀವನದಲ್ಲಿ ಉನ್ನತಿಯನ್ನು ನೀಡಬಲ್ಲ ವಿವಿಧ ತರಬೇತಿ ಹಾಗೂ ಕಾರ್ಯಕ್ರಮಗಳು ನಡೆಯಲಿವೆ. **ವೃಂದಾವನ** ಸೇವಾಶ್ರಮದಲ್ಲಿ ಮಾರ್ಚ್ ೫ರಂದು **ಟೆಲೆಮೆಡಿಸಿನ್ ಸೇವೆ** ಹಾಗೂ ಎರಡು **ಮೊಬೈಲ್ ಮೆಡಿಕಲ್** ವ್ಯಾನುಗಳ ಸೇವೆಯನ್ನು ಆರಂಭಿಸಲಾಯಿತು. **ಔರಂಗಾಬಾದ್** ಕೇಂದ್ರವು ಮಾರ್ಚ್ ೭ರಿಂದ ೯ರ ವರೆಗೆ ಔರಂಗಾಬಾದ್ ಜಿಲ್ಲೆಯ ಪೈಠಣದಲ್ಲಿ (ಸಂತ ಏಕನಾಥರ ಜನ್ಮಸ್ಥಳ) 'ನಾಥ ಷಷ್ಠಿ ಮೇಳ'ದ ಸಂದರ್ಭದಲ್ಲಿ **ವೈದ್ಯಕೀಯ ಶಿಬಿರ** ಹಾಗೂ ಸ್ವಾಮಿ ವಿವೇಕನಂದರನ್ನು ಕುರಿತಂತೆ **ಪ್ರದರ್ಶನ**ವನ್ನು ಏರ್ಪಡಿಸಿತು. ವೈದ್ಯಕೀಯ ಶಿಬಿರದಲ್ಲಿ ೯೪೭ ಮಂದಿ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. **ಅಸನ್ಸೋಲ್** ಆಶ್ರಮದಲ್ಲಿ ಮಾರ್ಚ್ ೨೪ರಂದು ನವೀಕರಣಗೊಂಡ **ವಿವೇಕಾನಂದ ಪಾರ್ಕ್** ಉದ್ಘಾಟನೆಗೊಂಡಿತು. ಪಶ್ಚಿಮ ಬಂಗಾಳ ರಾಜ್ಯದ ಕಾನೂನು ಮಂತ್ರಿಗಳ ಉಪಸ್ಥಿತಿಯಲ್ಲಿ ಪ್ರಧಾನ ಕಾರ್ಯದರ್ಶಿಯವರು ಇದನ್ನು ಉದ್ಘಾಟಿಸಿದರು. **ರಾಯಪುರ** ಕೇಂದ್ರವು ತನ್ನ **ಸುವರ್ಣ ಮಹೋತ್ಸವ**ವನ್ನು ಮಾರ್ಚ್ ೨೫ರಂದು ಆಚರಿಸಿತು. ಸಾರ್ವಜನಿಕ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. **ನಾಗಪುರ:** ಮಾರ್ಚ್ ೨೫ರಂದು ನೂತನವಾಗಿ ನಿರ್ಮಿತವಾದ **ವಿವಿಧ ಚಿಕಿತ್ಸೆಗಳ ಆಸ್ಪತ್ರೆ**ಯನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ ಸ್ವಾಮಿ ಶಿವಮಯಾನಂದಜಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಮಾತನಾಡಿದರು. ಸುಮಾರು ೧೦೦೦ ಮಂದಿ ಭಾಗವಹಿಸಿದ್ದರು.

ಮೌಲ್ಯ ಶಿಕ್ಷಣ ಹಾಗೂ ಯುವಸಮ್ಮೇಳನಗಳು: **ದೆಹಲಿ** ಕೇಂದ್ರವು ಫೆಬ್ರವರಿ ೧೨ ರಿಂದ ಮಾರ್ಚ್ ೨೭ರ ಅವಧಿಯಲ್ಲಿ ನಡೆಸಿದ ೧೬ **ಮೌಲ್ಯ ಶಿಕ್ಷಣ ಶಿಬಿರ**ಗಳಲ್ಲಿ ೧೩೯ ಅಧ್ಯಾಪಕರು ಹಾಗೂ ಪ್ರಾಚಾರ್ಯರು ಭಾಗವಹಿಸಿದ್ದರು. ಈ ಶಿಬಿರಗಳು ದೆಹಲಿ, ಎರ್ನಾಕುಳಂ, ಗ್ವಾಲಿಯರ್, ಹೈದರಾಬಾದ್ ಮೈಸೂರು ಹಾಗೂ ರಾಂಚಿ – ಈ ಸ್ಥಳಗಳಲ್ಲಿ ನಡೆದವು. ಗುರಪ್ ಕೇಂದ್ರವು ಫೆಬ್ರವರಿ ೨೮ರಂದು ನಡೆಸಿದ **ಯುವ ಸಮ್ಮೇಳನ**ದಲ್ಲಿ ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸ್ವಚ್ಛ ಭಾರತ ಅಭಿಯಾನ: **ಕೊಯಮತ್ತೂರು ಮಿಷನ್ ವಿದ್ಯಾಲಯ**ವು ಮಾರ್ಚ್ ೯, ೧೦, ೧೨ ಹಾಗೂ ೧೭ ರಂದು ವಿದ್ಯಾರ್ಥಿಗಳು ಎರಡು ಸಾರ್ವಜನಿಕರ ರಸ್ತೆಗಳನ್ನು ಸ್ವಚ್ಛಗೊಳಿಸಿದರು. ಇದಲ್ಲದೆ, ...ಶಾಲೆ ಹಾಗೂ ಸರ್ಕಾರಿ ಕಛೇರಿಯ ಪರಿಸರವನ್ನು ಕೂಡ ಸ್ವಚ್ಛಗೊಳಿಸಿದರು. **ಹಾತಿಮನಿಗುಡ** ಕೇಂದ್ರವು ಮಾರ್ಚ್ ೨೫ ರಂದು ಸುತ್ತಮುತ್ತಣ ಪ್ರದೇಶಗಳ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಿತು. ಇದಲ್ಲದೆ **ಕಾಮಾರಪುಕುರ, ಮಾಲ್ಡಾ** ಕೇಂದ್ರಗಳು ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಿದವು. **ಮಂಗಳೂರು** ಅಶ್ರಮವು ಈ ಕೆಳಗಿನ ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಿತು. ೧) ಮಂಗಳೂರಿನಲ್ಲಿ ೪ ಸ್ವಚ್ಛತಾ ಕಾರ್ಯಕ್ರಮಗಳು ೨) ಮಂಗಳೂರಿನ ವಿವಿಧ ವಸತಿ ಪ್ರದೇಶಗಳಿಗೆ ೧೨೦೦ ಮಂದಿ ಸ್ವಯಂಸೇವಕರು ಭೇಟಿ ನೀಡಿ ೨೪೦೦, ಮನೆಗಳಲ್ಲಿ ಸ್ವಚ್ಛತೆಯ ಅರಿವನ್ನು ಮೂಡಿಸಲು ಪ್ರಯತ್ನಿಸಿದರು. ೩) ದಕ್ಷಿಣ ಕನ್ನಡ ಜಿಲ್ಲೆಯ ೭೨ ಹಳ್ಳಿಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳು ನಡೆದವು.

ವಿದೇಶಗಳಲ್ಲಿರುವ ಶಾಖಾಕೇಂದ್ರಗಳಲ್ಲಿ: ಬಾಂಗ್ಲಾದೇಶದ **ಢಾಕಾ** ಕೇಂದ್ರವು ವರ್ಷಪೂರ್ತಿ ನಡೆಸಿದ **ಶತಮಾನೋತ್ಸವದ ಸಮಾರೋಪ** ಸಮಾರಂಭವು ಫಬ್ರವರಿ ೨೬ರಿಂದ ಮಾರ್ಚ್ ೩ರ ವರೆಗೆ ನಡೆಯಿತು. ವಿಶೇಷ ಪೂಜೆ, ಸಾರ್ವಜನಿಕ ಸಭೆ, ಯುವಸಮ್ಮೇಳನಗಳು, ಭಕ್ತರಿಗಾಗಿ ಹಾಗೂ ಮಹಿಳೆಯರಿಗಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಂದರ್ಭದಲ್ಲಿ ನಡೆದವು. ಪ್ರಧಾನ ಕಾರ್ಯದರ್ಶಿಗಳು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಬಾಂಗ್ಲಾದೇಶ ಸರ್ಕಾರದ ಹಲವು ಮಂದಿ ಸಚಿವರು ಹಾಗೂ ಅಧಿಕಾರಿಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಆರ್ಕಿಡ್ ಟ್ರಾವೆಲ್ & ಟೂರ್ಸ್

Orchid Travel & Tours

ರಿಯಾಯಿತಿ ದರದಲ್ಲಿ ವಿದೇಶಿ ಪ್ರವಾಸ-2018



8 ದಿನಗಳ ಶ್ರೀ ಮುಕ್ತಿನಾಥ ಯಾತ್ರೆ (ಸಾಲಿಗ್ರಾಮಂ) ಬೆಂಗಳೂರಿನಿಂದ ವಿಮಾನದಲ್ಲಿ

ಪ್ರವಾಸ ಸ್ಥಳಗಳು : ಶ್ರೀ ಮುಕ್ತಿನಾಥ ದೇವಸ್ಥಾನ, ಪಶುಪತಿನಾಥ ದೇವಸ್ಥಾನ, ಜಲನಾರಾಯಣ ದೇವಸ್ಥಾನ, ಶ್ರೀ ಕೃಷ್ಣ ದೇವಸ್ಥಾನ, ಕಠ್ಮಂಡು ಸಿಟಿ ಟೂರ್, ಪೋಕ್ರಾ-ಬಿಂದಾಬಾಸಿನಿ ದೇವಸ್ಥಾನ, ತಾಲಭೈರವಿ ದೇವಸ್ಥಾನ, ದೋಣಿಯಲ್ಲಿ ಪೋಕ್ರಾ ಲೇಕ್ ಒಂದು ವಿಹಾರ, ಮನೋಕಾಮನ ದೇವಸ್ಥಾನ (ಕೇಬಲ್ ಕಾರ್‌ನಲ್ಲಿ)

10 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ, ವಿಂಗ್ಸ್ ಆಫ್ ಟೈಮ್,
ಜುರೋಂಗ್ ಬರ್ಡ್‌ಪಾರ್ಕ್, ಯುನಿವರ್ಸಲ್ ಸ್ಟುಡಿಯೋ,
ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್
ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

18 ಮತ್ತು 13 ದಿನಗಳ ಅಮೇರಿಕಾ ಪ್ರವಾಸ

ಪ್ರವಾಸ ಸ್ಥಳ : ನ್ಯೂಯಾರ್ಕ್, ವಾಷಿಂಗ್ಟನ್, ನಯಾಗರ ಫಾಲ್ಸ್, ಲಾಸ್‌ವೆಗಾಸ್, ಲಾಸ್ ಎಂಜಲೀಸ್, ಸ್ಯಾನ್‌ಫ್ರಾನ್ಸಿಸ್‌ಕೋ

15 ಮತ್ತು 18 ದಿನಗಳ ಗ್ರ್ಯಾಂಡ್ ಯು.ಕೆ.-ಯುರೋಪ್ ಪ್ರವಾಸ

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್

8 ದಿನಗಳ ಕಾಂಬೋಡಿಯ – ಥೈಲ್ಯಾಂಡ್ ಪ್ರವಾಸ

ಕಾಂಬೋಡಿಯ – ಸಿಯಾಮ್‌ರಿಪ್, ಅಂಕೊರ್‌ವಾಟ್, ತೋನ್ಲೇ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು,
ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

10 ದಿನಗಳ ಚೈನಾ, ಹಾಂಕಾಂಗ್, ಮಕಾವ್ ಪ್ರವಾಸ

ಆಕ್ರೋಬೆಟಿಕ್ ಶೋ, ಓಷನ್ ಪಾರ್ಕ್, ಬೀಜಿಂಗ್ ನಗರ ವೀಕ್ಷಣೆ, ಶಾಂಘೈ ನಗರ ವೀಕ್ಷಣೆ, ಏಳು ಅದ್ಭುತಗಳಲ್ಲಿ ಒಂದಾದ ಚೀನಾ ಮಹಾಗೋಡೆ (Great Wall of China) ಸಮ್ಮರ್ ಪ್ಯಾಲೇಸ್, ಹಾಂಕಾಂಗ್ ಮ್ಯೂಸಿಯಂ ಮತ್ತು ಮಕಾವ್ ಹಾಗೂ ಇತರೆ.

ಕೈಲಾಸ ಮಾನಸ ಸರೋವರ ಯಾತ್ರೆ – ವಿವರಗಳಿಗೆ ಸಂಪರ್ಕಿಸಿ – 9900080793

ಪ್ರಧಾನ ಕಛೇರಿ : ಬಸವನಗುಡಿ
ಫೋನ್: 080-26670646, 26621983
ಮೊಬೈಲ್ : 9900080793, 9900080794

ಶಾಖಾ ಕಛೇರಿ : ಮಲ್ಲೇಶ್ವರಂ
ಫೋನ್: 080-23445559
ಮೊಬೈಲ್ : 9900080799, 9900080792

www.orchidtours.net

VIVEKA PRABHA (KANNADA MONTHLY)
May 2018, Vol.18, No.05, No.of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2018-20. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2018-20

ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ

(ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆಯ ಅಂಗಸಂಸ್ಥೆ)

ಪೊನ್ನಂಪೇಟೆ – 571216 ಕೊಡಗು ಜಿಲ್ಲೆ

Email: ponnampet@rkmm.org Web: www.rkmponnampet.org

Phone: 08274-249555, 298244

ಸಾರ್ವಜನಿಕರಲ್ಲಿ ಒಂದು ವಿಜ್ಞಾಪನೆ

ರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ (ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಬೇಲೂರು ಮಠದಲ್ಲಿ ಪ್ರಧಾನ ಕೇಂದ್ರವಿರುವ ವಿಶ್ವಪ್ರಸಿದ್ಧ ರಾಮಕೃಷ್ಣ ಮಠದ ಒಂದು ಶಾಖಾಕೇಂದ್ರ) 1927ರಲ್ಲಿ ಆರಂಭವಾಯಿತು. ಕೊಡಗು ಹಾಗೂ ಸುತ್ತಮುತ್ತಲಿನ ಜನರ ಸೇವೆಗಾಗಿ ಹಾಗೂ ಅವರ ಆಧ್ಯಾತ್ಮಿಕ ಉನ್ನತಿಗಾಗಿ ಈ ಕೇಂದ್ರ ಸ್ಥಾಪನೆಗೊಂಡಿತು.

ಸ್ವಾಮಿ ವಿವೇಕಾನಂದರ ದುಂದುಭಿ ಧ್ವನಿಯ ಕರೆಗೆ ಓಗೊಟ್ಟು, ಸಮಾಜದ ಹಿಂದುಳಿದ ಜನತೆಗೆ ಶೈಕ್ಷಣಿಕ, ವೈದ್ಯಕೀಯ ನೆರವನ್ನು ಹಾಗೂ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಅರಿವನ್ನು ನೀಡುವ ಮೂಲಕ ಸೇವೆ ಸಲ್ಲಿಸುವುದೇ ಈ ಆಶ್ರಮದ ಚಟುವಟಿಕೆಗಳ ಹಿಂದಿನ ಧ್ಯೇಯವಾಗಿದೆ. '**ಶಿವಜ್ಞಾನೇ ಜೀವಸೇವಾ**' ಅಂದರೆ, ಮಾನವನಲ್ಲಿ ದೇವರನ್ನು ಕಾಣುವ ಮೂಲಕ ಅವನ ಸೇವೆ ಮಾಡುವ ಆದರ್ಶ ಇದರ ಹಿಂದಿದೆ. ಕಳೆದ 91 ವರ್ಷಗಳಿಂದ ಈ ಆಶ್ರಮವು ಈ ಪ್ರದೇಶದ ಜನತೆಗೆ ಹರ್ಷೋಲ್ಲಾಸಗಳಿಂದ ಸೇವೆ ಸಲ್ಲಿಸುತ್ತಾ ಬಂದಿದೆ.

ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ , ಪೊನ್ನಂಪೇಟೆ ಇದು ಶ್ರೀರಾಮಕೃಷ್ಣ ಶಾರದಾಶ್ರಮದ ಒಂದು ಅಂಗಸಂಸ್ಥೆಯಾಗಿದೆ. 1942 ರಲ್ಲಿ ಒಂದು ಸಣ್ಣ ಆರೋಗ್ಯಕೇಂದ್ರವಾಗಿ ಇದು ಆರಂಭಗೊಂಡಿತು. ಕೊಡಗು ಪ್ರದೇಶದ ಜನತೆಗೆ ಅಗತ್ಯವಾದ ಆರೋಗ್ಯ ಸೌಕರ್ಯಗಳನ್ನು ಒದಗಿಸಲು ಒಂದು ಹೋಮಿಯೋಪಥಿ ಕೇಂದ್ರ ಮಾತ್ರವೇ ಆಗ ನಡೆಯುತ್ತಿದ್ದು, ಕ್ರಮೇಣ ಅದು ವ್ಯಾಪಕವಾಗಿ ಬೆಳೆದು, ಪೂರ್ಣಪ್ರಮಾಣದ ಒಂದು ಆಸ್ಪತ್ರೆಯಾಗಿ ರೂಪುಗೊಂಡಿತು. ಹೀಗೆ ವೈದ್ಯಕೀಯ ಚಟುವಟಿಕೆ ಈ ಆಶ್ರಮದ ಪ್ರಧಾನ ಸೇವಾಕಾರ್ಯವಾಗಿ ಮಾರ್ಪಟ್ಟಿತು. ಸದ್ಯಕ್ಕೆ ನಮ್ಮಲ್ಲಿ 25 ಹಾಸಿಗೆಗಳಿರುವ ಅಲೋಪಥಿ ಆಸ್ಪತ್ರೆ, ಹಾಗೂ ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿ ವಿಭಾಗಗಳಿವೆ.

ಸಂಪೂರ್ಣ ಸ್ವಾವಲಂಬಿಯಾಗಿರುವ ಈ ಆಸ್ಪತ್ರೆಯಲ್ಲಿ ಒಳರೋಗಿ–ಹೊರರೋಗಿ ವಿಭಾಗಗಳೆರಡೂ ಇರುವುದಲ್ಲದೆ, ನಿಷ್ಠಾವಂತ ವೈದ್ಯರು ಹಾಗೂ ಇತರ ನೌಕರರೊಂದಿಗೆ ಎಲ್ಲ ಸೌಲಭ್ಯಗಳಿರುವ ಫಾರ್ಮಸಿ, ಲ್ಯಾಬೊರೇಟರಿ, ಇ.ಸಿ.ಜಿ., ಎಕ್ಸ್–ರೇ, ಅಲ್ಟ್ರಾ ಸೌಂಡ್ ವಿಭಾಗಗಳಿವೆ.

ಈ ಆಸ್ಪತ್ರೆಯಲ್ಲಿ ತಂತ್ರಜ್ಞಾನ ಹಾಗೂ ವೈದ್ಯಕೀಯ ಸೇವೆಗಳನ್ನು ಆಧುನಿಕಗೊಳಿಸಲು, ಕೊಡಗು ಜಿಲ್ಲೆಯ ಬಡಜನರ ಹಾಗೂ ಹಿಂದುಳಿದ ಜನತೆಯ ವೈದ್ಯಕೀಯ ಅಗತ್ಯಗಳನ್ನು ಪೂರೈಸುವಂತೆ, ನಾವು ಈ ಆಸ್ಪತ್ರೆಯನ್ನು ಪೂರ್ಣಪ್ರಮಾಣದ ಆಸ್ಪತ್ರೆಯಾಗಿ ನವೀಕರಿಸಲು ತೀರ್ಮಾನಿಸಿದ್ದೇವೆ. ಇದಕ್ಕೆ ಅಗತ್ಯವಿರುವ ಆರ್ಥಿಕ ನೆರವನ್ನು ಅನೇಕ ಮಂದಿ ದಾನಿಗಳು ಈಗಾಗಲೇ ಉದಾರ ನೀಡಿದ್ದು, ಸದ್ಯ ಆಸ್ಪತ್ರೆಯ ಕಟ್ಟಡ ನಿರ್ಮಾಣದ ಹಂತದಲ್ಲಿದೆ – ನೆಲಮಾಳಿಗೆ, ನೆಲ ಅಂತಸ್ತು ಹಾಗೂ ಇನ್ನೆರಡು ಅಂತಸ್ತುಗಳ ನಿರ್ಮಾಣಕಾರ್ಯ ನಡೆಯುತ್ತಿದೆ.

ಮೂಲಸಾಮಗ್ರಿ, ಇತರ ಸಲಕರಣೆಗಳು, ದಿನಗೂಲಿ ಇತ್ಯಾದಿಗಳ ವೆಚ್ಚ ದಿನೇ ದಿನೇ ವೃದ್ಧಿಯಾಗುತ್ತಿದ್ದು, ಈ ಆಸ್ಪತ್ರೆಯ ಉದ್ಘಾಟನೆ ಕೂಡ ಶೀಘ್ರದಲ್ಲೇ ನಡೆಯಬೇಕಾಗಿರುವುದರಿಂದ, ಮತ್ತೊಮ್ಮೆ ನಾವು ಉದಾರ ಭಕ್ತರ ಹಾಗೂ ದಾನಿಗಳ ನೆರವಿಗಾಗಿ ಪ್ರಾರ್ಥಿಸುತ್ತಿದ್ದೇವೆ. ಈ ಉದಾತ್ತ ಕಾರ್ಯದಲ್ಲಿ ಉದಾರ ಧನಸಹಾಯ ಮಾಡುವ ಮೂಲಕ ದೈವೀಕೃಪೆಗೆ ಪಾತ್ರರಾಗಬೇಕೆಂದು ತಮ್ಮಲ್ಲಿ ನಾವು ವಿನಂತಿಸಿಕೊಳ್ಳುತ್ತಿದ್ದೇವೆ.

ಈ ಕೆಳಗಿನ ಸೇವೆಗಳಿಗಾಗಿ ತಮ್ಮ ಆರ್ಥಿಕ ನೆರವು ಅತ್ಯಗತ್ಯ :

1. ಲಿಫ್ಟ್ ಸೌಕರ್ಯವನ್ನು ಅಳವಡಿಸುವಿಕೆ: (ಅಂದಾಜು ವೆಚ್ಚ): 15.30 ಲಕ್ಷ
2. ಪೀಠೋಪಕರಣಗಳು, ಕಂಪ್ಯೂಟರ್ ಹಾಗೂ ಇನ್ನಿತರ ಸಲಕರಣೆಗಳ ಖರೀದಿ: 25 ಲಕ್ಷ
3. ಉದ್ಘಾಟನಾ ಸಮಾರಂಭ, ವಿಚಾರ ಸಂಕಿರಣ, ಮಲ್ಟಿ ಸ್ಪೆಷಾಲಿಟಿ ಕ್ಯಾಂಪ್‌ಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ : 15 ಲಕ್ಷ
4. 62.5 ಕೆವಿಎ ಜನರೇಟರ್ ಅಳವಡಿಕೆಗಾಗಿ 6.80 ಲಕ್ಷ
5. ಡಿಜಿಟಲ್ ಎಕ್ಸ್–ರೇ (ಗಣಕೀಕೃತ ರೇಡಿಯೋಗ್ರಫಿ) ಯಂತ್ರದ ಅಳವಡಿಕೆಗಾಗಿ 7.90 ಲಕ್ಷ

ದೇಣಿಗೆಗಳನ್ನು ಡಿ.ಡಿ. ಅಥವಾ ಚೆಕ್ ಮೂಲಕ 'SRI RAMAMAKRISHNA SEVASHRAMA HOSPITAL, PONNAMPET'ಎಂಬ ಹೆಸರಿನಲ್ಲಿ ತೆಗೆದು ನಮಗೆ ಕಳುಹಿಸಬಹುದು. ಅಂತರ್ಜಾಲದ ಮೂಲಕ ಕೂಡ ನಮ್ಮ ಬ್ಯಾಂಕ್ ಖಾತೆಗೆ ಅಥವಾ ಮೂಲಕ ಕೂಡ ಪಾವತಿ ಮಾಡಬಹುದು. ಅದಕ್ಕೆ ಬೇಕಾದ ವಿವರಗಳು: Corporation Bank, Ponnampet, Kodagu Dist. SB A/c. No. : 520101041791823, IFS Code: CORP0000032. ಈ ಎಲ್ಲ ದೇಣಿಗೆಗಳಿಗೆ ಸೆಕ್ಷನ್ ಅನ್ವಯ ಆದಾಯ ತೆರಿಗೆ ವಿನಾಯಿತಿ ಇರುತ್ತದೆ.

ತಮ್ಮಿಂದ ನಾವು ಸಕಾರಾತ್ಮಕ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತೇವೆ. ಈ ಮೂಲಕ ನಮ್ಮ ಈ ಯೋಜನೆಗಳು ನಿಗದಿತ ಅವಧಿಯಲ್ಲೇ ಪೂರ್ಣಗೊಳ್ಳುವವು ಎಂಬ ನಂಬಿಕೆ ನಮ್ಮದು. ಮತ್ತೊಮ್ಮೆ ವಂದನೆಗಳೊಂದಿಗೆ,

ಭಗವತ್ಸೇವೆಯಲ್ಲಿ ತಮ್ಮ,

ಸ್ವಾಮಿ ಬೋಧಸ್ವರೂಪಾನಂದ

ಅಧ್ಯಕ್ಷರು

Printed at mayur graphics, Bangalore